ಖಂಡ 1 ಇತ್ಯಾದಿ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, 1997ನೇ ಕರ್ನಾಟಕ ಕೈಗಾರಿಕೆಗಳ ಸ್ಥಾಪನೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ''1997ನೇ ಕರ್ನಾಟಕ ಕೈಗಾರಿಕಾ ಸ್ಥಾಪನೆಗಳ (ರಾಷ್ಟ್ರೀಯ ಮತ್ತು ಹಬ್ಧ ರಜಾ ದಿನಗಳು) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಇ) ಕರ್ನಾಟಕ ಪಂಚಾಯತ್‌ರಾಜ್ (ಮೂರನೇ ತಿದ್ದುಪಡಿ) ವಿಧೇಯಕ, 1997 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, ''1997ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವವನ್ನು ಮಂಡಿಲ್ಪಟ್ಟಿತು

\+ ಶ್ರೀ ಎಂ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ರಾಜ್ಯ ಪಂಚಾಯತ್‌ರಾಜ್ ಕಾನೂನು 1993, ಅದನ್ನು ಬಹಳ ವ್ಯಾಪಕವಾಗಿ, ನಿಜವಾದ ರೀತಿಯ ಅಧಿಕಾರ ವಿಕೇಂದ್ರೀಕರಣ ಮಾಡುವಂಥ ಸಂದರ್ಭದಲ್ಲಿ, ಅದು ಇನ್ನೂ ಸ್ವಲ್ಪಮಟ್ಟಿಗೆ ಅಧಿಕಾರವನ್ನು ಕುಂಠಿತಗೊಳಿಸಿದೆ. ನಿಜವಾದಂಥ ವಿಕೇಂದ್ರೀಕರಣ, ಅರ್ಥವತ್ತಾಗಿ ಆಗಬೇಕು

ಎನ್ನುವಂಥ ಅಭಿಪ್ರಾಯ ಇದೆ. ಆ ಸಂದರ್ಭದಲ್ಲಿ ಕರ್ನಾಟಕ ಪಂಚಾಯತ್‌ರಾಜ್ ಕಾನೂನಿನಲ್ಲಿ ಇದ್ದಂಥ ಕೆಲವು ಅಡೆತಡೆಗಳು, ನ್ಯೂನತೆಗಳು ಇವುಗಳನ್ನು ಸರಿಪಡಿಸಬೇಕೆಂಬ ಉದ್ದೇಶಕ್ಕಾಗಿ ಮಾನ್ಯ ನಾಯಕ್‌ರವರ ಅಧ್ಯಕ್ಷತೆಯಲ್ಲಿ ಒಂದು ಪರಿಣಿತರ ಸಮಿತಿಯನ್ನು ಏರ್ಪಾಡು ಮಾಡಿದೆ. ಈ ಪರಿಣಿತರ ಸಮಿತಿಯ ಜೊತೆ ಜೊತೆಗೇ, ಈ ಕಾರ್ಯವನ್ನು ನಿರ್ವಹಿಸಿದಂಥ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತ್ತಿ ಮತ್ತು ತಾಲ್ಲೂಕು ಪಂಚಾಯಿತ್ತಿಗಳು ಅನುಭವಿಸಿದಂಥ ಕಷ್ಟನಷ್ಟಗಳು ಅಥವಾ ಅವರಿಗೆ ಎದುರಾದಂಥ ಕೆಲವು ಸವಾಲುಗಳು ಮತ್ತು ಸಂಧಿಗ್ದತೆಗಳು, ಬೇರೆ ಬೇರೆ ಸಂದರ್ಭಗಳಲ್ಲಿ ಶಾಸಕರುಗಳು ಮಾಡಿದಂಥ ಸೂಚನೆಗಳು ಪತ್ರಿಕೆಗಳ ಸಂಪಾದಕೀಯದಲ್ಲಿ ಬಂದಂತಾದ್ದು ಅಥವಾ ವರದಿಗಳಲ್ಲಿ ಬಂದಂಥ ಹಿನ್ನೆಲೆಯಲ್ಲಿ ಒಂದು ವ್ಯಾಪಕವಾದ ತಿದ್ದುಪಡಿಯವನ್ನು ಮಾಡುವಂಥ ಪ್ರಯತ್ನ ಮಾಡಿದ್ದೇವೆ. ಅದರಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾಗಿರತಕ್ಕಂತಾದ್ದು, ಕರ್ನಾಟಕ ಪಂಚಾಯತ್‌ರಾಜ್ ಕಾನೂನನ್ನು, ಒಂದು ಪಂಚಾಯಿತ್ತಿ ಅಥವಾ ಒಂದು ಸ್ವಯಂ ಆಡಳತಾತ್ಮಕ ಘಟಕಗಳಾಗಬೇಕು ಎಂದು ಸಂವಿಧಾನದ 40ನೇ ಪರಿಚ್ಛೇದದಲ್ಲಿ ವ್ಯಕ್ತ ಮಾಡಿದೆ. ಆದರೆ, ಈ ಕಾನೂನಿನಲ್ಲಿ ಅದು ಇಲ್ಲದೇ ಇದ್ದುದರಿಂದ, ಇದು ಸ್ವಯಂ ಆಡಳಿತಾತ್ಮಕ ಘಟಕ ಎನ್ನುವಂಥ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಹಾಗೆಯೇ ಬೇರೆ ರೀತಿಯಲ್ಲಿ, ಚುನಾವಣೆ ನಡೆಯುವಾಗ, ಅವ್ಯವಹಾರಗಳನ್ನು ಮಾಡಿದರೆ, ಮತಗಟ್ಟೆಗಳನ್ನು ವಶಪಡಿಸಿಕೊಳ್ಳತಕ್ಕ ಪ್ರಯತ್ನ ಮಾಡಿದರೆ, ಅಲ್ಲಿ ಮತದಾರರು ಮತಹಾಕುವುದಕ್ಕೆ ಬಂದಂಥ ಸಂದರ್ಭದಲ್ಲಿ, ಅದನ್ನು ತಡೆಹಿಡಿಯುವ ಪ್ರಯತ್ನ ಮಾಡಿದರೆ, ಖೋಟಾ ಮತದಾನದ ಚಲಾವಣೆಗಳನ್ನು ಮಾಡಿದರೆ, ಬೇರೆಯವರಿಗೆ ಬೆದರಿಕೆ ಒಡ್ಡುವುದನ್ನು ಮಾಡಿದರೆ, ಅವರಿಗೆ ಎರಡು ವರ್ಷದವರೆಗೆ ಶಿಕ್ಷೆಯನ್ನು ವಿಧಿಸತಕ್ಕಂತಾದ್ದು, (6 ತಿಂಗಳಿಂದ ಎರಡು ವರ್ಷದವರೆಗೆ) ಮತ್ತು ದಂಡ ವಿಧಿಸತಕ್ಕಂಥ ಕಾನೂನನ್ನು ಇದರಲ್ಲಿ ತರತಕ್ಕಂಥ ತಿದ್ದುಪಡಿಯನ್ನು ತಂದಿದ್ದೇವೆ. ಚುನಾವಣೆಯ ಅಥವಾ ಮತಗಟ್ಟೆಗಳಲ್ಲಿ ಏಜೆಂಟರ್‌ಗಳಾಗಿ ಅನೇಕ ಸಂದರ್ಭದಲ್ಲಿ ನಮ್ಮ ಸರ್ಕಾರಿ ನೌಕರರು ಪಾಲ್ಗೊಳ್ಳುತ್ತಿದ್ದಾರೆ ಎನ್ನುವಂತಹ ಅನೇಕ ಆಪಾದನೆಗಳೂ ಸಹ ಬಂದಿದೆ. ಸರ್ಕಾರಿ ನೌಕರರು ಯಾರ ಪರವಾಗಿ ಆದರೂ ಏಜೆಂಟರು ಆಗಿ ಕೆಲಸ ಮಾಡಿದರೆ ಅಥವಾ ಅವರು ಮತಗಳ ಎಣಿಕೆ ಏಜೆಂಟರಾಗಿ ಕೆಲಸ ಮಾಡಿದ್ದು ಇದ್ದರೆ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವಂತಹ, ಮತ್ತು ಅವರಿಗೆ ಮೂರು ತಿಂಗಳ ಸಜೆ, ಮತ್ತು ಅವರನ್ನು ನೌಕರಿಯಿಂದ ತೆಗೆದುಹಾಕುವಂಥಾದ್ದು ಇದರಲ್ಲಿ ಸೇರಿಸಿದ್ದೇವೆ. ಪಂಚಾಯತ್ ಸಂಸ್ಥೆಗಳ ಪ್ರಾದೇಶಿಕ ಕ್ಷೇತ್ರದ ಪುನರ್ ವಿಂಗಡಣೆ ಮಾಡುವಂತಹ ಸಂದರ್ಭದಲ್ಲಿ, ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರಬಹುದು, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾಪಂಚಾಯತಿ ಚುನಾವಣೆಗಳನ್ನು ಮಾಡುವಂತಹ ಸಂದರ್ಭದಲ್ಲಿ, ಈ ಕ್ಷೇತ್ರಗಳ ಪುನರ್ ವಿಂಗಡಣೆಯನ್ನು ಸರ್ಕಾರದವರು ಮಾಡಿದ್ದಾರೆ, ಜಿಲ್ಲಾಧಿಕಾರಿಗಳ ಮೂಲಕ ಮಾಡಿಸಿದ್ದು ಎಲ್ಲವೂ ಕೂಡ ವಸ್ತುನಿಷ್ಟವಾಗಿಲ್ಲ,

ಆಯಾಯಾ ಆಡಳಿತ ಪಕ್ಷಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ಭೌಗೋಳಿಕವಾಗಿರತಕ್ಕಂಥ ಅನುಕೂಲಗಳ ವ್ಯವಸ್ಥೆಯನ್ನು ನೋಡದೇ ಅದರ ಸರಿ ಹೊಂದಾಣಿಕೆಯನ್ನೂ ಕೂಡ ಯೋಚನೆ ಮಾಡದೆ ತಮಗೆ ಎಲ್ಲಿ ಹೆಚ್ಚು ಮತಗಳು ಬರಬಹುದು ಎನ್ನುವಂತಹ ರೀತಿಯಲ್ಲಿ ಏನು ಈ ರೀತಿಯಲ್ಲಿ ಮತಕ್ಷೇತ್ರಗಳನ್ನು ಪುನರ್ ವಿಂಗಡಣೆ ಮಾಡಿದ್ದಾರೆ ಇದು ಆಯಾಯಾ ಆಳುವ ಪಕ್ಷಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ, ನಾವು ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ನಮ್ಮ ಶಾಸಕರು ಮತ್ತು ಬೇರೆಯವರೂ ಕೂಡ ಹಿಂದಿನ ಸರ್ಕಾರದ ಮೇಲೆ ಇಂತಹ ಅಭಿಪ್ರಾಯವನ್ನು ವ್ಯಕ್ತಮಾಡಿದರು. ನಾಳೆ ನಮಗೂ ಕೂಡ ಇಂತಹ ಒಂದು ಪ್ರಶ್ನೆ ಬರಬಹುದು, ಮುಂದೆ ಯಾರೇ ಅಧಿಕಾರಕ್ಕೆ ಬಂದರೂ ಕೂಡ ಇವತ್ತು ಆಳುವ ಪಕ್ಷ ನಾಳೆ ಚುನಾವಣೆ, ಮಾಡತಕ್ಕಂಥ ಸಂದರ್ಭದಲ್ಲಿ ಇಂತಹ ತಪ್ಪನ್ನು ಮಾಡಿದ್ದೇವೆ ಎನ್ನುವಂತಹ ಒಮ್ಮೆ ಸಕಾರಣವಾದುದ್ದು ಅಥವಾ ನಿರಾಧಾರವಾದಂತಹ ಆಪಾದನೆಗಳು ಬರಬಹುದು ಎನ್ನುವ ಕಾರಣಕ್ಕಾಗಿಯೇ ಒಂದು ನಿಷ್ಪಕ್ಷಪಾತವಾದಂತಹ ಚುನಾವಣಾ ಆಯೋಗ ಏನು ಇದೆ ಆ ಚುನಾವಣಾ ಆಯೋಗವೇ ಈ ಮತದಾರರ ಕ್ಷೇತ್ರಗಳ ಪುನರ್ ವಿಂಗಡಣೆ ಮಾಡತಕ್ಕಂಥ ಅಧಿಕಾರವನ್ನು ಅವರಿಗೆ ಕೊಡತಕ್ಕಂಥಾದ್ದನ್ನು ನಾವು ಮಾಡಿದ್ದೇವೆ. ಇದು ಬಹಳ ವ್ಯಾಪಕವಾದಂತಹ ಮತ್ತು ಪರಿಣಾಮಕಾರಿಯಾಗಿರತಕ್ಕಂಥ ಒಂದು ಪ್ರಯತ್ನ. ಚುನಾವಣೆಗಳಲ್ಲಿ ಗೆದ್ದಿರತಕ್ಕಂಥ ಅಭ್ಯರ್ಥಿಗಳನ್ನು ಸರ್ಕಾರದವರು ಸಾಧ್ಯವಾದಷ್ಟು ಬೇಗನೇ ಎನ್ನುವಂತಹ ಮಾತು ಇದೆ. ಸಾಧ್ಯವಾದಷ್ಟು ಬೇಗನೇ ಎನ್ನುವುದಕ್ಕೆ ಬದಲಾಗಿ ಚುನಾಯಿತರಾದ ಒಂದು ತಿಂಗಳೊಳಗಾಗಿ ಎನ್ನುವಂತಹ ಪದವನ್ನು ಸೇರಿಸುತ್ತಾ ಚುನಾವಣಾ ಗೆಜಿಟ್‌ನಲ್ಲಿ ಅವರ ಹೆಸರು ಪ್ರಕಟವಾದ ಒಂದು ತಿಂಗಳ ಒಳಗಾಗಿ ಚುನಾವಣಾ ಆಯೋಗವೇ ಈ ಕರ್ತವ್ಯವನ್ನು ನಿರ್ವಹಿಸಬೇಕು ಎನ್ನುವಂತಹ ಒಂದು ಕಾನೂನು ಕೂಡ ಇದರಲ್ಲಿ ತಂದಿದ್ದೇವೆ. ಪ್ರತ್ಯಕ್ಷವಾಗಿ ಆಗಲಿ, ಪರೋಕ್ಷವಾಗಿ ಆಗಲಿ ಈಗ ಇರತಕ್ಕಂಥ ಕಾನೂನಿನಲ್ಲಿ ತಾಲ್ಲೂಕು ಪಂಚಾಯತಿಯ, ಜಿಲ್ಲಾ ಪಂಚಾಯತಿಯ ಹಾಗೂ ಗ್ರಾಮ ಪಂಚಾಯತಿ ಸದಸ್ಯರು ಅವರು ಏನಾದರೂ ತಮ್ಮ ಹಿತಾಸಕ್ತಿಗಳನ್ನು ನಡೆಸಿಕೊಳ್ಳುವಂಥಾದ್ದು ಆದರೆ ಅಥವಾ ಆ ಸಂಘಸಂಸ್ಥೆಗಳಿಗೆ ವಿರುದ್ಧವಾಗಿ ಕೆಲಸ ಮಾಡಿದರೆ ಅವರು ಅಲ್ಲಿ ಗುತ್ತಿಗೆಗಳನ್ನು ತೆಗೆದುಕೊಂಡು ಗುತ್ತಿಗೆ ಕೆಲಸಗಳನ್ನು ನಿರ್ವಹಿಸುವುದಾಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಇದೆ ಆದರೆ ಅದರಲ್ಲಿ ನಿರ್ದಿಷ್ಟತೆ ಇರಲಿಲ್ಲ. ಆ ನಿರ್ದಿಷ್ಟತೆಯನ್ನು ತರಲಿಕ್ಕಾಗಿ ಅವರಾಗಲಿ, ಅವರಿಗೆ ಸಂಬಂಧಿಸಿದವರು ಆಗಲಿ ಅವರಿಂದ ಅಧಿಕಾರ ಹೊಂದಿದಂತಹವರೇ ಆಗಲೀ ಏಜೆಂಟರುಗಳು ಆಗಲಿ ಇಂಥಾದ್ದು ಏನಾದರೂ ಮಾಡಿದ್ದರೆ ಸಪ್ಲೈ ಮಾಡುವಂಥಾದ್ದು ಆಗಬಹುದು, ಅಥವಾ ಸಾಮಗ್ರಿಗಳ ಪೂರೈಕೆ ಮಾಡುವಂಥಾದ್ದು ಆಗಬಹುದು, ಅಥವಾ ಆತ ನಿರ್ವಹಿಸುವಂತಹ ಕರ್ತವ್ಯಗಳನ್ನು ಗುತ್ತಿಗೆಗೆ ತೆಗೆದುಕೊಳ್ಳುವಂಥಾದ್ದು ಆದರೆ ಅವರನ್ನು ಅನರ್ಹಗೊಳಿಸುತ್ತೇವೆ ಎನ್ನುವಂತಹ ಮಾತನ್ನೂ ಸಹ ಇದರಲ್ಲಿ ಹಾಕಿದ್ದೇವೆ. ಹಾಗೆಯೇ ನಿರ್ಮಲ ಕರ್ನಾಟಕಕ್ಕೆ ಒತ್ತು ಕೊಡಬೇಕು ಎನ್ನುವಂಥ ಒಂದು ಕಾರಣ

ಇದ್ದಿದ್ದರಿಂದ ಮತ್ತು ನಮ್ಮ ಗಾಂಧೀಜಿಯವರೂ ಸಹ ತಮ್ಮ ಆತ್ಮ ಕತೆಯಲ್ಲಿ ಅನೇಕ ಸಂದರ್ಭಗಳಲ್ಲಿ ಬರೆದುಕೊಳ್ಳುತ್ತಾರೆ, ಇಷ್ಟು ಕೊಳಕರಾದಂತಹ ಭಾರತ ದೇಶದ ಜನ ನಾವು ತಲೆ ತಗ್ಗಿಸಬೇಕಾದಂತಹ ಪರಿಸ್ಥಿತಿ ಇದೆ. ವೈಯಕ್ತಿಕವಾಗಿ ಸಾಮೂಹಿಕವಾಗಿ ಕೊಳಕರಾಗಿರುವಂತಹ ನಮ್ಮ ಬಗ್ಗೆ ನಾವು ಸ್ವಲ್ಪಮಟ್ಟಿಗಾದರೂ ಎಚ್ಚರ ಮತ್ತು ಕಾಳಜಿಯನ್ನು ವಹಿಸಿಕೊಳ್ಳಬೇಕು ಎನ್ನುವಂತಹ ಮಾತು ಗಾಂಧೀಜಿಯವರು ತಮ್ಮದೇ ಆದ ಕಾರ್ಯಕ್ರಮದಲ್ಲಿ ಪದೇ ಪದೇ ಹೇಳಿದ್ದಾರೆ. ರಚನಾತ್ಮಕ ಕಾರ್ಯಕ್ರಮವಾಗಿ ಪಕ್ಷದ ಮೂಲಕ ಭಾರತೀಯರಿಗೆ ಆ ಒಂದು ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಇಷ್ಟೆಲ್ಲಾ ಪ್ರಯತ್ನಗಳು ಆಗಿದ್ದರೂ ಕೂಡ ನಮ್ಮ ಹಳ್ಳಿಗಳು ಇನ್ನೂ ಕೂಡ ದುರ್ಗಂಧಮಯವಾಗಿರುವಂತಹ ಮತ್ತು ಅನಾರೋಗ್ಯದ ವಾಸದ ಪ್ರದೇಶಗಳು ಆಗಿರುವುದರಿಂದ ನಿರ್ಮಲ ಕರ್ನಾಟಕ ಕಾರ್ಯಕ್ರಮಕ್ಕೆ ಒತ್ತು ಕೊಟ್ಟಿದ್ದೇವೆ. ಆದರೆ ಸರ್ಕಾರಿ ಕಾರ್ಯಕ್ರಮದಿಂದಲೇ ಇಂತಹ ಒಂದು ಪರಿಣಾಮಕಾರಿಯಾದಂತಹ ಬದಲಾವಣೆ ಆಗುವುದಿಲ್ಲ. ಆ ಕಾರಣಕ್ಕಾಗಿಯೇ ಕನಿಷ್ಟ ಯಾರು ಚುನಾಯಿತ ಪ್ರತಿನಿಧಿಗಳಾಗಿದ್ದಾರೆ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗೆ ಅವರು ಚುನಾಯಿತರಾದ ಸಂದರ್ಭದಿಂದ ಹಿಡಿದು 6 ತಿಂಗಳೊಳಗಾಗಿ ಅವರು ಕುಟುಂಬ ಶೌಚಾಲಯಗಳನ್ನು ಕಟ್ಟಬೇಕು ಎಂದು ಹೇಳಿ ಇದು ಒಂದು ಸಾಂಕೇತಿಕವಾಗಿರತಕ್ಕಂಥಾದ್ದು ಆಗಬಹುದು, ಆದರೂ ಕೂಡ ಸುಮಾರು 80 ಸಾವಿರಕ್ಕಿಂತಲೂ ಹೆಚ್ಚು ಸದಸ್ಯರು ನಮ್ಮ ಗ್ರಾಮ ಪಂಚಾಯತಿಗಳಲ್ಲಿ ಇದ್ದಾರೆ ಸುಮಾರು 913ಕ್ಕಿಂತ ಹೆಚ್ಚು ಜನ ಜಿಲ್ಲಾ ಪಂಚಾಯತಿ ಸದಸ್ಯರು ಇದ್ದಾರೆ. 3400ಕ್ಕಿಂತಲೂ ಹೆಚ್ಚು ಜನ ತಾಲ್ಲೂಕು ಪಂಚಾಯತಿ ಸದಸ್ಯರು ಇದ್ದಾರೆ. ಸ್ವಲ್ಪ ಹೆಚ್ಚು ಕಡಿಮೆ ಒಂದು ವರ್ಷದಲ್ಲಿ 90 ಸಾವಿರ ಕುಟುಂಬ ಶೌಚಾಲಯಗಳು ಬಂದರೆ ಅದೊಂದು ಪರಿಣಾಮಕಾರಿಯಾದ ಕೆಲಸ ಆಗಬಹುದು ಎನ್ನುವುದರ ಮೂಲಕ ಅನರ್ಹರನ್ನಾಗಿ ಮಾಡುತ್ತೇವೆ ಸದಸ್ಯರು 6 ತಿಂಗಳ ಒಳಗಾಗಿ ಮಾಡಿಕೊಳ್ಳದೇ ಇದ್ದರೆ ಎನ್ನುವಂತಾದ್ದನ್ನು ಇದರಲ್ಲಿ ಸೇರಿಸಿದ್ದೇವೆ. ಹಾಗೆಯೇ ಗ್ರಾಮ ಪಂಚಾಯಿತಿಗಳು ನಿರ್ವಹಿಸಬೇಕಾಗಿರತಕ್ಕಂಥ ಕರ್ತವ್ಯದಲ್ಲಿ ನಿರ್ಮಲವಾದ ಗ್ರಾಮದ ವಾತಾವರಣವನ್ನು ಇಟ್ಟುಕೊಳ್ಳಬೇಕಾದರೆ ರಸ್ತೆಬದಿಗಳಲ್ಲಿ ಇರತಕ್ಕಂಥ ತಿಪ್ಪೇಗುಂಡಿಗಳಿಗೆ ಬದಲಾಗಿ ಬೇರೆ ಒಂದು ಜಮೀನುಗಳನ್ನು ಖರೀದಿ ಮಾಡಿ ಅವರಿಗೆ ಕೊಡತಕ್ಕಂಥಾದ್ದು ಮತ್ತೆ ಅದನ್ನು ನಿರ್ವಹಣೆ ಮಾಡುವಂತಹ ಸಂದರ್ಭದಲ್ಲಿ ಚರಂಡಿಗಳನ್ನು ಮಾಡುವಂತಾದ್ದು, ಒಳ್ಳೆಯ ರಸ್ತೆಗಳನ್ನು ಮತ್ತು ಸಾಮಾಜಿಕ ಅರಣ್ಯವನ್ನು ಬೆಳೆಸಿ ಅದನ್ನು ಮಾಡುವಂತಹ ಕರ್ತವ್ಯಗಳನ್ನೂ ಕೂಡ ನಾವು ಇದರಲ್ಲಿ ಕಾಣಿಸಿದ್ದೇವೆ. ಅಂದರೆ ಈ ಕರ್ತವ್ಯಗಳನ್ನು ಮಾಡದೇ ಇದ್ದರೆ ಆ ಗ್ರಾಮ ಪಂಚಾಯಿತಿಯನ್ನು ನಾವು ಅನರ್ಹಗೊಳಿಸುವಂತಹ ಒಂದು ಅಧಿಕಾರವನ್ನು ಕೂಡ ಜಿಲ್ಲಾಪಂಚಾಯತಿಯ ಉದ್ದೇಶಿತ ತಿದ್ದುಪಡಿಗಳಲ್ಲಿ ನಾವು ತಂದಿದ್ದೇವೆ. ಈಗ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತಿಯ ಸದಸ್ಯರು ಅಥವಾ ಗ್ರಾಮ ಪಂಚಾಯತಿಯ ಸದಸ್ಯರು ಅಧ್ಯಕ್ಷರಿಗೆ

ತಮ್ಮ ರಾಜೀನಾಮೆಗಳನ್ನು ಕೊಡುತ್ತಾರೆ. ಅಕಸ್ಮಾತ್ ಯಾವುದೋ ಕಾರಣಗಳಿಗೆ ರಾಜೀನಾಮೆ ಕೊಟ್ಟರೆ ಈಗ ಇರತಕ್ಕಂಥ ಕಾನೂನಿನಲ್ಲಿ ಅನೇಕ ದೂರುಗಳು ನಮಗೆ ಬಂದಿರತಕ್ಕಂಥಾದ್ದು ಮತ್ತು ಶಾಸಕರೂ ಕೂಡ ನಮ್ಮ ಗಮನಕ್ಕೆ ತಂದಿದ್ದಾರೆ, ಅಧ್ಯಕ್ಷರು ರಾಜೀನಾಮೆಯನ್ನು ಕೊಟ್ಟಿರುವಂತಾದ್ದನ್ನು ತಮ್ಮ ಜೇಬಿನಲ್ಲಿಯೇ ಇಟ್ಟುಕೊಂಡು ಅದನ್ನು ಮರೆತಿರತಕ್ಕಂಥಾದ್ದು ಅಂದರೆ ಜಾಣ ಮರುವಿನ ಮೂಲಕ ಇಟ್ಟುಕೊಳ್ಳತಕ್ಕಂಥ ಪ್ರಯತ್ನ ಮಾಡುತ್ತಾರೆ. ಅವರು ನಮಗೆ ಬೆಂಬಲವನ್ನು ಕೊಡುತ್ತಾರೆ ಎನ್ನುವಂತಹ ಸಂದರ್ಭದಲ್ಲಿ ಆ ರಾಜೀನಾಮೆಯನ್ನು ಮುಂದೆ ತರುವುದಿಲ್ಲ, ಅವರು ಏನಾದರೂ ತಮ್ಮ ವಿರುದ್ಧ ಇದ್ದಾರೆ ಅವರು ಏನಾದರೂ ಅವಿಶ್ವಾಸ ನಿರ್ಣಯ ತರುತ್ತಾರೆ ಅವರ ವಿರುದ್ಧವಾಗಿ ಮಾತನಾಡುತ್ತಾರೆ ಅಂದರೆ ಆ ಸಂದರ್ಭದಲ್ಲಿ ಆ ರಾಜೀನಾಮೆ ಪತ್ರವನ್ನು ದುರುಪಯೋಗಪಡಿಸಿಕೊಳ್ಳುವಂತಹ ಕಾರಣ ಕೂಡ ಇರುತ್ತದೆ. ಇಲ್ಲದೇ ಇದ್ದರೆ ಕೆಲವು ಸಂದರ್ಭಗಳಲ್ಲಿ ಯಾವುದೋ ಕಾರಣವನ್ನು ಹೇಳಿ ಯಾವುದೋ ಕಾರಣ ಹೇಳಿ ಬಿಳಿ ಹಾಳೆಯ ಮೇಲೆ ಸಹಿ ಮಾಡಿಸಿಕೊಂಡು ಅದರಲ್ಲಿ ಇಂತಹ ಪತ್ರವನ್ನು ಬರೆದಿದ್ದಾರೆ ಎನ್ನುವಂತಹ ಆಪಾದನೆಗಳು ಇರುವುದರಿಂದ ಈ ರೀತಿಯಾಗಿ ರಾಜೀನಾಮೆ ಕೊಟ್ಟಿರತಕ್ಕಂಥ ಸದಸ್ಯರ ವಿಷಯವನ್ನು ಮುಂದಿನ ಸಭೆಯಲ್ಲಿ ತಂದೇ ತೀರಬೇಕು, ಮುಂದಿನ ಸಭೆಯಲ್ಲಿ ಆ ವಿಚಾರವನ್ನು ಸಭೆಗೆ ತಿಳಿಸಬೇಕು. ಆಗ ಅಲ್ಲಿ ಇರತಕ್ಕಂಥ ಒಬ್ಬ ಸದಸ್ಯನಿಗೆ ಗೊತ್ತಾಗುತ್ತದೆ ನನ್ನ ರಾಜೀನಾಮೆ ಪತ್ರವನ್ನು ನಾನು ಕೊಟ್ಟಿಲ್ಲ ಎನ್ನುವುದು ಆಗಿದ್ದರೆ ಸುಳ್ಳು ಇದೆ ಎನ್ನುವ ಮಾತನ್ನು ಹೇಳಬಹುದು ಅಥವಾ ಕೊಟ್ಟಿದ್ದರೆ ಅದನ್ನು ಅಂಗೀಕಾರ ಮಾಡಿ ಎಂದು ಹೇಳುವಂತಾದ್ದು ಆದರೂ ಆಗಬಹುದು, ಆದ್ದರಿಂದ ದುರುದ್ದೇಶ ಆಗುವಂತಾದ್ದು ಅಥವಾ ಅದನ್ನು ದುರುಪಯೋಗಪಡಿಸಿಕೊಳ್ಳುವಂತಾದ್ದು ತನ್ನ ಸ್ವಂತ ಕಾರಣಗಳಿಗಾಗಿ ಎನ್ನುವುದನ್ನು ತಡೆಹಿಡಿಯಬಹುದು ಇದು ಒಂದು ನಿರುಪದ್ರವ್ಯ ಆದರೆ ಪರಿಣಾಮಕಾರಿಯಾದಂತಹ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಈಗ ವಿವಿಧ ವರ್ಗಗಳಿಗೆ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ಮೀಸಲಾತಿಯನ್ನು ಮಾಡಿದಾಗ ಇದೇ ಸದನದಲ್ಲಿ ನಮ್ಮ ಮೇಲೆ ಅನೇಕ ಸಾರಿ ಆಪಾದನೆಗಳು ಬಂದಿವೆ. ಈಗ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸಂಬಂಧಪಟ್ಟಂತೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಇರುತ್ತದೆ. ಯಾವ ಯಾವ ತಾಲ್ಲೂಕು, ಯಾವ ಯಾವ ಜಿಲ್ಲೆ ಅಧ್ಯಕ್ಷರನ್ನು ಯಾವ ಪಂಗಡಕ್ಕೆ ವಹಿಸಿಕೊಡಬೇಕು ಎನ್ನತಕ್ಕಂಥಾದ್ದು ಬಂದಾಗ ಸರ್ಕಾರ ತನಗೆ ಅನುಕೂಲವಾಗುವಂತಹ ರೀತಿಯಲ್ಲಿ ಮಾಡಿದೆ ತಮ್ಮ ಪಕ್ಷದವರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಮಾಡಿದೆ ಅಥವಾ ನಿರ್ದಿಷ್ಟವಾಗಿ ಒಬ್ಬ ವ್ಯಕ್ತಿಯ ಗುರುತು ಇಟ್ಟುಕೊಂಡು ಈ ರೀತಿಯಾದ ಮೀಸಲಾತಿಗಳನ್ನು ಮಾಡಿದ್ದಾರೆ ಎನ್ನುವಂತಹ ಆಪಾದನೆಗಳು ಬಂದಿದ್ದರಿಂದ ಇದಕ್ಕೆ ನಿಷ್ಪಕ್ಷಪಾತವಾದಂತಹ ನಮ್ಮ ಚುನಾವಣಾ ಆಯೋಗ ಏನು ಇದೆ ಈ ಚುನಾವಣಾ ಆಯೋಗವೇ ಇದರ ಒಂದು ನಿರ್ಧಾರವನ್ನು ತೆಗೆದುಕೊಳ್ಳಲಿ, ಯಾವ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಯಾವ ವರ್ಗದವರು

ಆಗಬೇಕು ಯಾವ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಯಾವ ಮೀಸಲಾತಿ ಪರವಾಗಿ ಇರಬೇಕು ಎಂದು ನಿರ್ಣಯ ಮಾಡಿದರೆ ಸರ್ಕಾರ ಆಪಾದನೆಗಳಿಂದ ಮುಕ್ತವಾಗುತ್ತದೆ ಮತ್ತು ಅದು ನಿಷ್ಪಕ್ಷಪಾತವಾದ ರೀತಿಯಲ್ಲಿ ಕೂಡ ಆಗಬಹುದು ಎನ್ನುವ ರೀತಿಯ ಒಂದು ತಿದ್ದುಪಡಿಯನ್ನು ನಾವು ಈ ಸಂದರ್ಭದಲ್ಲಿ ತಂದಿದ್ದೇವೆ. ಮಾನ್ಯ ಅಧ್ಯಕ್ಷರೇ, ಈಗ ಇರುವಂತಹ ಕಾಯ್ದೆಯಲ್ಲಿ ದುರ್ನಡತೆ ಮಾಡಿದಂತಹ, ಕರ್ತವ್ಯವನ್ನು ನಿರ್ವಹಿಸದೇ ಇರುವಂತಹ ಗ್ರಾಮ ಪಂಚಾಯತಿ ಸದಸ್ಯರಿಗೆ ಏನು ಕ್ರಮ ಕೈಗೊಳ್ಳಬೇಕು ಎನ್ನುವಂತಾದ್ದು ಇಲ್ಲ. ಗುಬ್ಬಿಯಲ್ಲಿ ಆದ ಒಂದು ಪ್ರಕರಣವನ್ನು ಮಾನ್ಯ ಶಿವನಂಜಪ್ಪನವರು ನನ್ನ ಗಮನಕ್ಕೆ ತಂದಿದ್ದರು. ಅಲ್ಲಿ ಒಬ್ಬ ಸದಸ್ಯರು ಕುಡಿದು ಬಂದು ಅಧ್ಯಕ್ಷರನ್ನು ಹೊಡೆದಿದ್ದರು. ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಮೌನವಾಗಿದೆ. ಆದ್ದರಿಂದ ಈ ರೀತಿ ದುರ್ನಡತೆ ಮಾಡಿದಾಗ ಮತ್ತು ನಿಯಮಾವಳಿಗಳ ಪ್ರಕಾರ ವರ್ತನೆ ಮಾಡದೇ ಇರುವಂತಹ ಸದಸ್ಯರು ಯಾರಾದರೂ ಇದ್ದರೆ ಅವರನ್ನು ಅನರ್ಹಗೊಳಿಸುವಂತಹ ತಿದ್ದುಪಡಿಯನ್ನು ಈ ಮೂಲಕ ತಂದಿದ್ದೇವೆ. ಇದು ಉದಾಹರಣೆಗಳ ಮೂಲಕ ಆಗಿರತಕ್ಕಂಥಾದ್ದು. ಮತ್ತು ಅವಿಶ್ವಾಸ ಗೊತ್ತುವಳಿ ತರತಕ್ಕಂಥಾದ್ದರಲ್ಲಿ ಗ್ರಾಮ ಪಂಚಾಯತಿಯಲ್ಲಿ ಮಾತ್ರ ಎರಡನೇ ಮೂರು ರಷ್ಟು ಸದಸ್ಯರ ಒಪ್ಪಿಗೆ ಬೇಕಾಗುತ್ತದೆ. ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗೆ ಕೇವಲ ಒಂದು ಸರಳ ಬಹುಮತ ಇದ್ದರೆ ಸಾಕಾಗಿದೆ. ಆದರೆ ಪದೇ ಪದೇ ಆ ಒಂದು ಅಸ್ತ್ರವನ್ನು ಉಪಯೋಗಿಸಿ ಅಸ್ತಿರತೆಯನ್ನು ತರಬಾರದು ಅಲ್ಲಿರತಕ್ಕಂಥ ಆಡಳಿತದಲ್ಲಿ ಎನ್ನುವ ಕಾರಣಕ್ಕಾಗಿಯೇ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅವಿಶ್ವಾಸ ನಿರ್ಣಯವನ್ನು ತರುವಾಗ ಕನಿಷ್ಟ ಒಂದು ವರ್ಷದ ಅವಧಿ ಆಗಿರಬಹುದು, ಅವರು ಚುನಾಯಿತರಾದ ಒಂದು ವರ್ಷದೊಳಗಾಗಿ ತರುವುದಕ್ಕೆ ಸಾಧ್ಯವಿಲ್ಲ ಅಥವಾ ಅವಿಶ್ವಾಸ ನಿರ್ಣಯ ಬಿದ್ದು ಹೋದ ಮೇಲೆ ಮತ್ತು ಒಂದು ವರ್ಷದೊಳಗಾಗಿ ತರಬಾರದು ಎನ್ನುವಂತಾದ್ದು, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗೆ ಸಂಬಂಧಪಟ್ಟಂತೆ ಅಲ್ಲಿ ಒಂದು ಸ್ಥಿರತೆಯನ್ನು ತರಲಿಕ್ಕೆ ಆಡಳಿತದಲ್ಲಿ ಒಂದು ಭದ್ರತೆಯನ್ನು ತರಲಿಕ್ಕೆ 6 ತಿಂಗಳವರೆಗೆ ಎನ್ನತಕ್ಕಂಥಾದ್ದನ್ನು ಇದರಲ್ಲಿ ಸೇರಿಸಿದ್ದೇವೆ. ಏಕೆಂದರೆ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಇರುವಂತಹ ಈ ಪ್ರಜಾಪ್ರಭುತ್ವದ ಸ್ವಯಂ ಆಡಳಿತಾತ್ಮಕ ಘಟಕಗಳು ಏನು ಇವೆ ಇವು ಅಸ್ಥಿರತೆಗೆ ಒಳಪಡಬಾರದು ಅಥವಾ ಯಾವುದಾದರೂ ಒಂದು ಗುಂಪಿಗೆ ಒಳಪಡಬಾರದು ಎನ್ನುವ ಉದ್ದೇಶದಿಂದ ಕೂಡ ಇದರಲ್ಲಿ ನಾವು ಅಳವಡಿಸಿದ್ದೇವೆ.

4.40 ಪಿ.ಎಂ

ನೀರು ಸರಬರಾಜು ಮತ್ತು ನೈರ್ಮಲ್ಯದ ಯೋಜನೆಗಳಿಗಿಂತ, ನಿರ್ವಹಣೆಗೆ ಸಮಿತಿಗಳನ್ನು ರಚಿಸುವಾಗ ಇದರಲ್ಲಿ ಒಂದು ವಿಧೇಯಕದಲ್ಲಿ ಬರೀ ನಮ್ಮ ಗ್ರಾಮಪಂಚಾಯಿತಿ ಸದಸ್ಯರಿಗೆ ಸಂಬಂಧಪಟ್ಟಂತೆ ಮಾತ್ರ ಒಂದು ಸಮಿತಿಯನ್ನು ರಚಿಸಬಹುದು. ಆದರೆ ಈ ಒಂದು ನೀರು ಸರಬರಾಜು ಯೋಜನೆಗೆ ಇಡಿ ಒಂದು

ಗ್ರಾಮ ಸಮುಚ್ಚಯವನ್ನು ತೆಗೆದುಕೊಂಡು, ರಾಜೀವ್ ಗಾಂಧಿ ಟೆಕ್ನಿಕಲ್ ಮಿಷನ್ ಎನ್ನುವುದರ ಅಥವಾ ಒಂದು ಹತ್ತಾರು ಹಳ್ಳಿಗಳನ್ನು ಸೇರಿಸಿ, ಒಂದು ಕುಡಿಯುವ ನೀರಿನ ಯೋಜನೆಯನ್ನು ಮಾಡಿದಂಥ ಸಂದರ್ಭದಲ್ಲಿ, ಅದರ ನಿರ್ವಹಣೆ ಮಾಡಿದಂಥ ಸಂದರ್ಭದಲ್ಲಿ ತಂತ್ರಜ್ಞಾನವನ್ನು ಹೊಂದಿದವರು ಬೇಕಾಗುತ್ತದೆ. ಅದಕ್ಕೆ ಅವರ ಸಲಹೆ ಮತ್ತು ಸಹಕಾರ ಬೇಕಾಗುತ್ತದೆ. ಈ ಕಾರಣಕ್ಕಾಗಿ, ಆ ಗ್ರಾಮಗಳಲ್ಲಿ ಪರಿಣಿತರಿದ್ದರೆ ಅವರ ನಿರ್ವಹಣೆ ವಿಚಾರದಲ್ಲಿ ಆ ಪರಿಣಿತರನ್ನು ಸೇರಿಸಿ ಒಂದು ವಿಶೇಷ ಸಮಿತಿಯನ್ನು ಮಾಡಲಿಕ್ಕೆ ಗ್ರಾಮಪಂಚಾಯಿತಿಗೆ ಅಧಿಕಾರ ಇದೆ ಎನ್ನತಕ್ಕಂಥದ್ದೇ ಈ ಉದ್ದೇಶಿತ ತಿದ್ದುಪಡಿಯ ಕಾರಣ. ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ಅವರಿಗೆ ಹೆಚ್ಚಿನ ಅಧಿಕಾರವೇನೂ ಇರುವುದಿಲ್ಲ. ಒಂದು ವಿಶೇಷ ಸಂದರ್ಭ ಬಂದಾಗ ಗ್ರಾಮದ ಹಿತದೃಷ್ಟಿಯಿಂದ ಮತ್ತು ಅದರ ನಿರ್ವಹಣೆಯ ಹಿತದೃಷ್ಟಿಯಿಂದ ಒಂದು ಸ್ಥಾಯಿ ಸಮಿತಿಯ ತರಹದಲ್ಲಿ ವಿಶೇಷ ಸಮಿತಿಯನ್ನು ರಚನೆ ಮಾಡತಕ್ಕ ಅಧಿಕಾರವನ್ನು ನಾವು ಕೊಟ್ಟಿದ್ದೇವೆ; ಈಗಿರತಕ್ಕಂಥ ನಮ್ಮ ಸಾಮಾಜಿಕ ನ್ಯಾಯ ಸಮಿತಿ ಏನಿದೆ, ಇದರಲ್ಲಿ ಪರಿಶಿಷ್ಟಪಂಗಡಕ್ಕೆ ಸೇರಿದ ಒಬ್ಬ ಮಹಿಳೆ ಇರಬೇಕೆಂದು ಇದೆ. ಆದರೆ ಇದು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಇಲ್ಲ. ಆದುದರಿಂದ ಸಧ್ಯದಲ್ಲಿ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿರುವ ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಕಡ್ಡಾಯವಾಗಿ ಒಬ್ಬ ಮಹಿಳೆ ಮತ್ತು ಕಡ್ಡಾಯವ್ಾಗಿ ಪರಿಶಿಷ್ಟ ಪಂಗಡ ಮತ್ತು ವರ್ಗಕ್ಕೆ ಸೇರಿದ ಒಬ್ಬ ಸದಸ್ಯ ಇರಲೇಬೇಕೆಂಬ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಐದು ಇದ್ದಂತಹ ಸದಸ್ಯರ ಸಂಖ್ಯೆಯನ್ನು ಏಳು ಮಾಡಿದ್ದೇವೆ, ಇದಕ್ಕೂ ಸಹ ನನ್ನ ಶಾಸಕ ಮಿತ್ರರು ಹಾಗೂ ಬಿಜೆಪಿ ಮಿತ್ರರು, ನಿಮಗೆ ಬಹುಮತ ಇದೆ ಎನ್ನುವ ಕಾರಣಕ್ಕಾಗಿ ನಿಮ್ಮ ಸಮಿತಿಯಲ್ಲಿ ಎಲ್ಲರನ್ನೂ ಸೇರಿಸಿಕೊಂಡು ಬಿಟ್ಟಿದ್ದೀರಿ, ಅಲ್ಲಿ ವಿರೋಧ ಪಕ್ಷದವರಿಗೂ ಅವಕಾಶ ಇರಬೇಕು ಎಂದು ಹೇಳಿದ್ದಾರೆ, ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೂ ಸ್ವಲ್ಪ ದೂರಹೋಗಿ ಹೇಳಿದರು ಸಿಂಗಲ್ ಟ್ರಾನ್ಸ್‌ಫರ್‌ಬಲ್ ಓಟ್ ಏನಾದರೂ ಮಾಡಲಿಕ್ಕೆ ಸಾಧ್ಯವಿದ್ದರೆ ಮಾಡಿ, ಅಥವಾ ಅವರಿಗೆ ಅಷ್ಟು ಕಡ್ಡಾಯವಾಗಿ ಕೊಡಬೇಕು ಎಂದು ಇದ್ದರೆ ಅದನ್ನು ದೂರ ಮಾಡಿಕೊಂಡು ಹೋಗಿ ಅಥವಾ ಅದನ್ನು ಸಂಕೀರ್ಣವಾಗಿ ಮಾಡುವುದಕ್ಕಿಂತಲೂ. ಹೆಚ್ಚಾಗಿ ಐದು ಇರುವುದನ್ನು ಏಳು ಮಾಡುವುದರಿಂದ ಎಲ್ಲರನ್ನೂ ಸದಸ್ಯರನ್ನಾಗಿ ಸೇರಿಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಕಾರಣಕ್ಕಾಗಿಯೇ ಐದು ಇದ್ದ ಸದಸ್ಯರ ಸಂಖ್ಯೆಯನ್ನು ಏಳಕ್ಕೆ ಏರಿಸಿದ್ದೇವೆ. ಉಪಾಧ್ಯಕ್ಷರಿಗೆ ಅಧ್ಯಕ್ಷರು ಇಲ್ಲದಂತಹ ಸಮಯದಲ್ಲಿ ಕರ್ತವ್ಯ ನಿರ್ವಹಣೆ ಎಂದು ಮಾತ್ರ ಹೇಳಿದ್ದೇವೆ. ನಮಗೆ ಎಲ್ಲಾ ಸೌಲಭ್ಯಗಳನ್ನು ಕೊಟ್ಟಿದ್ದೀರಿ, ಆದ್ದರಿಂದ ನಮಗೆ ಜನರಲ್ ಸ್ಟಾಂಡಿಂಗ್ ಕಮಿಟಿ ಏನಿದೆ, ಸಾಮಾನ್ಯ ಸ್ಥಾಯಿ ಕಮಿಟಿ ಏನಿದೆ ಅದರ ಅಧ್ಯಕ್ಷತೆಯನ್ನಾದರೂ ಕೊಟ್ಟರೆ ಕರ್ತವ್ಯದ ನಿರ್ವಹಣೆಗೆ ಅನುಕೂಲವಾಗುತ್ತದೆ ಎಂದು ಹೇಳಿ ಈಗಿರತಕ್ಕ ಅಧ್ಯಕ್ಷ, ಎಂದರೆ ಸಾಮಾನ್ಯ ಸ್ಥಾಯಿ ಕಮಿಟಿಯ ಅಧ್ಯಕ್ಷರಿಗೆ ಬದಲು ಈ ಉಪಾಧ್ಯಕ್ಷರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿ, ಅವರನ್ನು ಹೆಚ್ಚು ದುಡಿಸಿಕೊಳ್ಳಲಿಕ್ಕೆ ಮತ್ತು ಅವರ ಪ್ರತಿಭೆಯನ್ನು

ಉಪಯೋಗ ಮಾಡಿಕೊಳ್ಳುವುದಕ್ಕೆ ಇದರಲ್ಲಿ ಅವಕಾಶವನ್ನು ತಂದು ಕೊಟ್ಟಿದ್ದೇವೆ. ಈಗ ಕಾನೂನು ಬಾಹಿರವಾಗಿ ಠರಾವ್‌ಗಳನ್ನು ಗ್ರಾಮಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳು ತೆಗೆದುಕೊಂಡಂಥ ಸಂದರ್ಭದಲ್ಲಿ ಅಲ್ಲಿಯ ಕಾರ್ಯನಿರ್ವಾಹಕ ಅಧಿಕಾರಿ ಅದಕ್ಕೆ ತಡೆಹಿಡಿಯಬಹುದು. ಇದಕ್ಕೆ ವ್ಯಾಪಕವಾದಂಥ ಟೀಕೆಗಳು, ಇದು ಒಂದು ಸರ್ಕಾರಿ ಇದ್ದಂತೆ ಸ್ವಯಂ ಆಡಳಿತಾತ್ಮಕ ಘಟಕ ಇದ್ದಾಗ, ಜನಪ್ರತಿನಿಧಿಗಳು ಮಾಡಿರತಕ್ಕಂಥ ಒಂದು ತೀರ್ಮಾನವನ್ನು ಇವರು ತಡೆಹಿಡಿಯತಕ್ಕಂಥ ಅಧಿಕಾರವನ್ನು ಒಬ್ಬ ಅಧಿಕಾರಿಗೆ ಏಕೆ ಕೊಡಬೇಕು ಎಂದು ಒಂದು ವ್ಯಾಪಕವಾದ ಟೀಕೆ ಇರುವುದರಿಂದ ಆ ಗ್ರಾಮಪಂಚಾಯಿತಿಯ ನಿರ್ಣಯಗಳು ಕಾನೂನು ಬಾಹಿರ ಎಂದು ಕಂಡುಬಂದಲ್ಲಿ ತಾಲ್ಲೂಕು ಪಂಚಾಯಿತಿಯವರ ವರದಿಯನ್ನು ತರಿಸಿಕೊಂಡು ಜಿಲ್ಲಾ ಪಂಚಾಯಿತಿಯವರು ಮಾಡತಕ್ಕಂಥದ್ದು, ಜಿಲ್ಲಾ ಪಂಚಾಯಿತಿಯವರು ಮಾಡಿದಂಥ ಠರಾವ್ ಕಾನೂನು ಬಾಹಿರ ಎಂದು ಕಂಡು ಬಂದರೆ ಅವರ ವರದಿಯನ್ನು ತರಿಸಿಕೊಂಡು ಸರ್ಕಾರದವರು ನಿರ್ಣಯ ಕೈಗೊಳ್ಳಬಹುದು ಎಂದು ಹೇಳಿ, ಇದರ ಅಧ್ಯಕ್ಷರುಗಳಿಗೆ ಈ ಅಧಿಕಾರವನ್ನು ಕೊಡತಕ್ಕಂಥ ಅಧಿಕಾರವನ್ನು ತಿದ್ದುಪಡಿಯಲ್ಲಿ ನಾವು ತಂದಿದ್ದೇವೆ. ಮತ್ತೆ ಪ್ರತಿ ಮೂರು ತಿಂಗಳಿಗೊಮ್ಮೆ ಕನಿಷ್ಟಪಕ್ಷ ಒಂದು ಪಂಚಾಯತ್ ಪರಿಷತ್ ಮಾಡಿ ಎಲ್ಲಾ ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳು ಅದರ ಸದಸ್ಯರಾಗಿ, ಮತ್ತು ಮಾನ್ಯ ಮುಖ್ಯಮಂತ್ರಿಗಳು ಅದರ ಅಧ್ಯಕ್ಷರಾಗಿರುವುದು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಅದರ ಉಪಾಧ್ಯಕ್ಷರಾಗಿರುವಂತೆ ಒಂದು ಸಮಿತಿಯನ್ನು ರಚನೆ ಮಾಡುತ್ತೇವೆ. ಅದರಲ್ಲಿ ಐದು ಸಚಿವರನ್ನು ಸದಸ್ಯರಾಗಿ ಮುಖ್ಯಮಂತ್ರಿಗಳು ನೇಮಕ ಮಾಡತಕ್ಕ ಒಂದು ತಿದ್ದುಪಡಿಯನ್ನೂ ಸಹ ತಂದಿದ್ದೇವೆ. ಇದು ಹಿಂದೆ 87ರ ಕಾನೂನಿನಲ್ಲಿ ಸಹ ಇದ್ದು, ನಡುವೆ ಕೈಬಿಟ್ಟು ಹೋಗಿದ್ದರಿಂದ ಮತ್ತೆ ಅದನ್ನು ಮಾಡಿದ್ದೇವೆ. ಈ ಜಿಲ್ಲಾ ಯೋಜನಾ ಸಮಿತಿಗಳಿಗೆ ಯಾರು ಅಧ್ಯಕ್ಷರಾಗಬೇಕು ಎನ್ನುವ ವಿಚಾರದಲ್ಲಿ ಬಹಳ ಭಿನ್ನಾಭಿಪ್ರಾಯಗಳು ಇವೆ. ಕೆಲವರು ಉಸ್ತುವಾರಿ ಮಂತ್ರಿಗಳಾಬೇಕು ಎಂದು, ಕೆಲವರು ಅಲ್ಲಿಯ ಜನರನ್ನು ಆಯ್ಕೆ ಮಾಡಬೇಕೆಂದು ಹೇಳಿದ್ದಾರೆ. ನಾವು ತಾಲ್ಲೂಕು ಪಂಚಾಯಿತಿಯ ಚುನಾಯಿತ ಸದಸ್ಯರಲ್ಲದೆ, ಜಿಲ್ಲಾ ಪಂಚಾಯತ್ ಅಧ್ಯಕ್ಷರು ಅದರ ಅಧ್ಯಕ್ಷರಾಗಬೇಕು ಎನ್ನುವುದನ್ನು ನಾವು ಮಾಡಿದ್ದೇವೆ, ಈಗ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರೇ ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷರಾಗಬೇಕೆಂದು, ಮತ್ತು ಅಲ್ಲಿಯ ಕೇಂದ್ರ ಸ್ಥಾನದಲ್ಲಿರತಕ್ಕ ನಗರಪಾಲಿಕೆಯಾಗಬಹುದು, ನಗರಸಭೆಯಾಗಬಹುದು ಅದರ ಅಧ್ಯಕ್ಷರು ಯಾರು ಇರುತ್ತಾರೆ ಅವರು ಉಪಾಧ್ಯಕ್ಷರಾಗಬೇಕೆಂದು ನಾವು ವ್ಯಾಪಕವಾದಂಥ ತಿದ್ದುಪಡಿಯನ್ನು ತಂದಿದ್ದೇವೆ. ಇವು ಯಾವುವೂ ವಿವಾದಾತ್ಮಾಕವಾಗಿರತಕ್ಕ ತಿದ್ದುಪಡಿಗಳು ಅಲ್ಲ, ಅನೇಕ ಸಂದರ್ಭಗಳಲ್ಲಿ, ಅನೇಕ ಜನ, ಈ ಕಾನೂನು ಬಹಳ ವ್ಯಾಪಕವಾಗಿ ಅಧಿಕಾರದ ವಿಕೇಂದ್ರಿಕರಣದ ನಿಜವಾದಂಥ ಹೆಜ್ಜೆ ಇಡಬೇಕು ಎನ್ನುವ ಕಾರಣಕ್ಕಾಗಿ ಮಾಡಿದಂಥ ಸಲಹೆ ಸೂಚನೆಗಳನ್ನು ನಾವು ಇದಕ್ಕೆಲ್ಲಾ ಸೇರಿಸುವಂತಹ ಪ್ರಯತ್ನವನ್ನು ನಾವು

ಮಾಡಿದ್ದೇವೆ. ಇದರಲ್ಲಿ ಮುಖ್ಯವಾಗಿ ನ್ಯಾಯ ಪಂಚಾಯಿತಿಯನ್ನು ತರಬೇಕೆಂದು ಅನೇಕ ಸಂದರ್ಭದಲ್ಲಿ ನಾವು ಪ್ರಕಟಣೆಯನ್ನು ಮಾಡಿದ್ದೇವೆ. ಈ ಪರಿಣಿತ ಸಮಿತಿಯವರು ಮತ್ತು ನಾಯಕ್ ಸಮಿತಿಯವರೂ ಸಹ ನ್ಯಾಯ ಪಂಚಾಯಿತಿಯನ್ನು ತರಬೇಕೆನ್ನುವ ಮಾತನ್ನು ಹೇಳಿದ್ದಾರೆ. ನ್ಯಾಯ ಪಂಚಾಯಿತಿಯ ತಿದ್ದುಪಡಿ ಆದ ಮೇಲೆ, ಅದೂ ಕೂಡ ರಾಷ್ಟ್ರಪತಿಗಳ ಅಂಗೀಕಾರಕ್ಕೆ ಹೋಗಬೇಕಾಗುತ್ತದೆ. ಈ ತಿದ್ದುಪಡಿಗಳಾದರೆ ಅದನ್ನು ನಮ್ಮ ರಾಜ್ಯಪಾಲರ ಅಂಗೀಕಾರಕ್ಕೆ ಕಳುಹಿಸಿ ಕೊಡಬಹುದು. ಈ ಎರಡನ್ನು ಒಟ್ಟಿಗೆ ಕಳುಹಿಸಿ ಈ ವ್ಯಾಪಕವಾದಂಥ ತಿದ್ದುಪಡಿಗಳು, ಅಥವಾ ಬೇರೆ ಬೇರೆ ಕಾರಣಗಳಿಗಾಗಿ ಈ ನ್ಯಾಯಪಂಚಾಯಿತಿಗಳು ನಿಂತು ಹೋದರೆ, ಅಥವಾ ರಾಷ್ಟ್ರಪತಿಗಳ ಅಂಕಿತ ಆಗುವುದಕ್ಕೆ ಸ್ವಲ್ಪ ಸಮಯ ಹಿಡಿದರೆ, ಇದರಿಂದ ತೊಂದರೆ ಆಗಬಹುದು ಎನ್ನುವ ಕಾರಣಕ್ಕಾಗಿಯೇ ನಾವು ಅದನ್ನು ಪ್ರತ್ಯೇಕವಾಗಿ ನಾಳೆ ನಡೆಯತಕ್ಕ ಸಚಿವ ಸಂಪುಟ ಸಭೆಯಲ್ಲಿ ಅದು 12 ಅಥವಾ 13ನೇ ತಾರೀಖು ನಡೆಯುತ್ತದೆ, ಆ ದಿವಸ ಸಚಿವ ಸಂಪುಟದ ಒಪ್ಪಿಗೆಯನ್ನು ಪಡೆದ ಮೇಲೆ ಮತ್ತೆ ಶಾಸನ ಸಭೆಯ ಮುಂದೆ ನ್ಯಾಯ ಪಂಚಾಯಿತಿಯ ತಿದ್ದುಪಡಿಯನ್ನು ತರುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಈ ಎಲ್ಲಾ ಜನಗಳು ಒಪ್ಪಿಕೊಂಡಿರತಕ್ಕ ಈ ವಿಚಾರಗಳ ಬಗ್ಗೆ, ಕ್ರಾಂತಿಕಾರಕ ಬದಲಾವಣೆಯ ಒಂದು ಹೊಸ ಹೆಜ್ಜೆಯನ್ನು ಮತ್ತು 1987ರಲ್ಲಿ ದಿವಂಗತ ನಜೀರ್ ಸಾಬ್‌ರವರು ಮಾಡಿದಂಥ ಒಂದು ಕ್ರಾಂತಿಕಾರಕ ಬದಲಾವಣೆಯ ಅನುಷ್ಠಾನದಲ್ಲಿ ತೆಗೆದುಕೊಂಡಂತಹ ಅನುಭವಗಳ ಹಿನ್ನೆಲೆಯಲ್ಲಿ ತಂದಿರತಕ್ಕ ತಿದ್ದುಪಡಿಗಳಿಗೆ ಸದನದಲ್ಲಿ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

+ ಶ್ರೀ ಎಂ.ವೈ.ಘೋರ್ಪಡೆ (ಸಂಡೂರು): ಸನ್ಮಾನ್ಯ ಅಧ್ಯಕ್ಷರೆ, ಇದು ನಮ್ಮ 1993ರ ಆ್ಯಕ್ಟ್‌ಗೆ ಮೂರನೇ ಬಾರಿ ತಿದ್ದುಪಡಿಯನ್ನು ತರುತ್ತಿದ್ದೇವೆ, ಇದರ ಬಗ್ಗೆ ನಾನು ಹೇಳಿದ್ದೆ. ಏನೆಂದರೆ 1992ರ ಆ್ಯಕ್ಟ್ ಏನಿದೆ ಅದು ಪಯೋನಿಯರಿಂಗ್ ಆ್ಯಕ್ಟ್ ಅನ್ನುವ ಮಾತನ್ನು ಹೇಳಿದ್ದಾರೆ, ಅದಕ್ಕಾಗಿ ನನ್ನ ಧನ್ಯವಾದಗಳು. ಏಕೆಂದರೆ 1993 ಆ್ಯಕ್ಟ್ ಯಾರೇ ಮಾಡಿರಲಿ ಇದು ಕರ್ನಾಟಕ ಗೌರವವನ್ನು ಎತ್ತಿ ಹಿಡಿಯುವ ಒಂದು ಪ್ರಯತ್ನ. ಅವರು ಪಯೋನಿಯರಿಂಗ್ ಎಂದು ಹೇಳಿದ್ದನ್ನು ನಾನು ಸ್ವಾಗತಿಸುತ್ತೇನೆ. ಈಗ ಸಂಬಂಧಪಟ್ಟ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಮುಂಚೆ ನೀವೇನು ಹಲವಾರು ತಿದ್ದುಪಡಿಗಳನ್ನು ತಂದಿದ್ದೀರಿ, ಅದರಲ್ಲಿ ಎಷ್ಟೋ ಕಾನ್ಸಿಕ್ವೆನ್‌ಷಿಯಲ್ ಅಮೆಂಡ್‌ಮೆಂಟ್ಸ್ ಇದೆ. ಎಷ್ಟೋ ವಿಷಯಗಳು ಅದರಲ್ಲಿ ಸೇರಿಲ್ಲ. ಅಮೆಂಡ್‌ಮೆಂಟ್ಸ್ ನಂಬರ್ ಇದ್ದಷ್ಟು ಅದರಲ್ಲಿ ಹೊಸ ವಿಷಯಗಳು ಸೇರಲಿಕ್ಕೆ ಸಾಧ್ಯವಿಲ್ಲ. ಆದರೆ ಒಂದು ಮಾತನ್ನು ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಇಷ್ಟಪಡುತ್ತೇನೆ, ಕರ್ನಾಟಕದ 1993ರ ಆಕ್ಟ್‌ಗೆ ನಮ್ಮ ಯಾವುದೇ ತಿದ್ದುಪಡಿಯಿಂದ ಧಕ್ಕೆ ಬಂದಿಲ್ಲ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇಷ್ಟು ಹೇಳಿದ ಮೇಲೆ, ಈ ಮಾತನ್ನು ಹೇಳುವುದಕ್ಕೆ ಕಾರಣವನ್ನೂ ಸಹಿತ ಹೇಳಬೇಕಾಗುತ್ತದೆ 1993ರ ಆಕ್ಟ್‌ನಲ್ಲಿ ಇರತಕ್ಕಂಥ ಮುಖ್ಯಾಂಶಗಳು ಯಾವುವು? ಒಂದು ತ್ರೀ-ಟೈಯರ್

ಸಿಸ್ಟಂ ಮೂರು ಹಂತದಲ್ಲಿ ಎಲೆಕ್ಟೆಡ್ ಬಾಡಿಗಳು ಇರತಕ್ಕಂಥದ್ದು; ಅದಕ್ಕೆ ಧಕ್ಕೆ ಬರಲಿಕ್ಕೆ ಸಾಧ್ಯವಿಲ್ಲ. ನೀವು ಅಂತಹ ಪ್ರಯತ್ನವನ್ನು ಮಾಡಲಿಲ್ಲ. ಮಾಡುವುದಕ್ಕೂ ಆಗುವುದಿಲ್ಲ. ಮತ್ತೆ ತ್ರೀ-ಬಾಡೀಸ್‌ಗಳ ಡ್ಯೂಟೀಸ್ ಏನು? ಇದಕ್ಕೂ ಕೂಡ ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಮಾಡಿ ಏನು ಪಟ್ಟಿಯನ್ನು ಮಾಡಿದ್ದರು, ಅದನ್ನು ನಾವು 1-2-3 ಎಂದು ಷೆಡ್ಯೂಲ್ ಮಾಡಿ, 1993ರ ಆ್ಯಕ್ಟ್‌ನಲ್ಲಿ ನಾವು ಸೇರಿಸಿದ್ದೇವೆ. ಅದಕ್ಕೂ ಸಹ ಈಗ ಮಾಡಿರತಕ್ಕ ತಿದ್ದುಪಡಿಯಿಂದ ಯಾವುದೇ ಧಕ್ಕೆ ಬಂದಿಲ್ಲ. ಬರಲಿಕ್ಕೂ ಸಾಧ್ಯವಿಲ್ಲ. ಒಂದೇ ಒಂದು ಅಮೆಂಡ್‌ಮೆಂಟ್ ನೀವು ಮಾಡಿರುವುದು ಏನು ಎಂದರೆ Performance of any function specified in the schedule and performance of such functions shall be according to the guidelines prescribed by the Government. ನಾನು ಇದನ್ನು ಪದೇ ಪದೇ ಹೇಳುತ್ತಿದ್ದೆ, ಏಕೆಂದರೆ ಕೇಂದ್ರ ಸರ್ಕಾರವೇ ಆಗಲಿ ರಾಜ್ಯ ಸರ್ಕಾರವೇ ಆಗಲಿ ಈ ಒಂದು ಯೋಜನೆಯನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕೊಟ್ಟಾಗ ನಿಮ್ಮ ಗೈಡ್‌ಲೈನ್ಸ್ ಪ್ರಕಾರವೇ ಅವರು ಅದನ್ನು ಉಪಯೋಗಿಸಬೇಕು. ಅದರಲ್ಲಿ ನಾವು ಸ್ವತಂತ್ರ್ಯವಾಗಿ ಮಾಡುತ್ತೇವೆ ಎಂದು ಹೇಳುವುದಕ್ಕೆ ಅವಕಾಶ ಇಲ್ಲ. ಏಕೆಂದರೆ ಮೇಲ್ಮಟ್ಟದಿಂದ ರಾಜ್ಯಮಟ್ಟದಿಂದ, ಕೇಂದ್ರ ಮಟ್ಟದಿಂದ ಬಂದಿರತಕ್ಕ ಸ್ಕೀಮ್ಸ್ ಅನ್ನು ಅವರು ಗೈಡ್‌ಲೈನ್ಸ್ ಪ್ರಕಾರ ಮಾಡಬೇಕು. ಇದನ್ನು ಹಲವಾರು ಸಲ ನಾನು ವಾದ ಮಾಡಿದ್ದೇನೆ. ನೀವು ಅದೇ ಮಾತನ್ನು ಸ್ಪಷ್ಟವಾಗಿ ಬರೆದರೆ ನಾನು ಇಲ್ಲಿ ನಿಂತು ವಿರೋಧ ಮಾಡಲಿಕ್ಕೆ ಸಾಧ್ಯವಿಲ್ಲ. ಆಮೇಲೆ ರಿಸರ್ವೇಷನ್ಸ್, ಇದೂ ಕೂಡ 1993ರ ಆ್ಯಕ್ಟ್‌ನಲ್ಲಿ ಮೂಲಭೂತವಾದಂಥ ಬದಲಾವಣೆ. ಎಸ್.ಸಿ., ಎಸ್.ಟಿ, ರಿಸರ್ವೇಷನ್, ಹೆಣ್ಣು ಮಕ್ಕಳಿಗೆ ರಿಸರ್ವೇಷನ್ಸ್ ಅಷ್ಟೇ ಅಲ್ಲ, ಓ.ಬಿ.ಸಿ. ಅಂದರೆ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ನಾವು ಕರ್ನಾಟಕದಲ್ಲಿ ರಿಸರ್ವೆಷನ್ ಕೊಟ್ಟಿದ್ದೇವೆ. ಅದರಲ್ಲೂ ಓ.ಬಿ.ಸಿ. ರಿಸರ್ವೇಷನ್ ಮಾಡಿದ ಶ್ರೇಯಸ್ಸು ಪ್ರಥಮವಾಗಿ ಕರ್ನಾಟಕಕ್ಕೆ ಬರುತ್ತದೆ. ಅದರಲ್ಲೂ ಕೂಡ ಮಾನ್ಯ ಮಂತ್ರಿಯವರು ಮಂಡಿಸಿದ ಅಮೆಂಡ್‌ಮೆಂಟನಲ್ಲಿ ಯಾವ ಬದಲಾವಣೆಯೂ ಇಲ್ಲ. ಆಮೇಲೆ ಸ್ಟೇಟ್ ಎಲೆಕ್ಷನ್ ಕಮಿಷನ್, ಫೈನಾನ್ಸ್ ಕಮಿಷನ್, ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿ, ಈ ಮೂಲಭೂತವಾದ ಅಂಶಗಳು ನಮ್ಮ 1983 ಆ್ಯಕ್ಟನಲ್ಲಿ ಇದೆ. ಇದಕ್ಕೂ ಕೂಡಾ ಯಾವ ರೀತಿಯಿಂದಲೂ ಧಕ್ಕೆ ಬಂದಿಲ್ಲ. ಸ್ಟೇಟ್ ಎಲೆಕ್ಷನ್ ಕಮಿಷನ್‌ಗೆ ಇನ್ನಷ್ಟು ಜವಾಬ್ದಾರಿ ಕೊಟ್ಟಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದರು. ಅದನ್ನು ಸ್ವಾಗತ ಮಾಡುತ್ತೇನೆ, ಏಕೆಂದರೆ, ಅದು ಅಡ್ಮಿನಿಸ್ಟ್ರೇಟಿವ್ ಒತ್ತಡಕ್ಕೆ ಒಳಗಾಗದೆ ನ್ಯಾಯಸಮ್ಮತವಾಗಿ ಮಾಡಲಿಕ್ಕೆ ಸಾಧ್ಯವೆಂದು ನಾನು ಒಪ್ಪುತ್ತೇನೆ. ಏಕೆಂದರೆ, ಸ್ಟೇಟ್ ಎಲೆಕ್ಷನ್ ಕಮಿಷನ್ ಕೆಲಸವನ್ನು ಏನು ಜಾಸ್ತಿ ಮಾಡಿದ್ದೀರಿ, ಅದರಿಂದ ನಮ್ಮ 93 ಆ್ಯಕ್ಟ್‌ನ ಸ್ಪಿರಿಟ್ ಏನಿದೆ, ಅದನ್ನು ಬಲಪಡಿಸಿದಂತೆ ಆಯಿತೇ ಹೊರತು ಅದಕ್ಕೆ ವಿರೋಧವಾಗಿ ಇದು ಹೋಗಿಲ್ಲ. ನಾನೂ ಸಹ ಮಂತ್ರಿಯಾಗಿ, ಆ ಸಂದರ್ಭದಲ್ಲಿ ಎಷ್ಟು ಒತ್ತಡಗಳು ಬರುತ್ತವೆ ಎಂಬುದನ್ನು

ಅನುಭವಿಸಿದ್ದೇನೆ. ಅದೇ ರೀತಿ ಮಾನ್ಯ ಪ್ರಕಾಶ್‌ರವರೂ ಅನುಭವಿಸಿದ್ದಾರೆ. ಆ ಕಾರಣದಿಂದ ಎಲೆಕ್ಷನ್ ಕಮಿಷನ್ ಕೆಲಸದ ವ್ಯಾಪ್ತಿಯನ್ನು ಜಾಸ್ತಿ ಮಾಡಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ಪವರ್ಸ್ ಅಂಡ್ ಡ್ಯೂಟೀಸ್, ಇದೂ ಕೂಡ ಒಂದು ಮೂಲಭೂತವಾದಂಥ ಬದಲಾವಣೆ; ನಮ್ಮ ಪಂಚಾಯತ್ ರಾಜ್‌ದಲ್ಲಿ. ಕರ್ನಾಟಕ 93 ಆ್ಯಕ್ಟ್‌ನಲ್ಲಿ ಸೆಕ್ಷನ್ 193 'ಸಿ' ಜಡ್.ಪಿ.ಗೆ ಸಂಬಂಧಪಟ್ಟ ಹಾಗೆ, ಸೆಕ್ಷನ್ 152 'ಸಿ', ತಾಲ್ಲೂಕು ಪಂಚಾಯಿತಿಗೆ ಸಂಬಂಧಪಟ್ಟ ಹಾಗೆ, ಸೆಕ್ಷನ್ 62 'ಸಿ' ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟ ಹಾಗೆ ಏನಿದೆ, ಅದರಲ್ಲಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಚುನಾಯಿತ ಸಂಸ್ಥೆ ಏನಿದೆ? ಅದು ಸಂಪೂರ್ಣವಾದಂಥ ಸೂಪರ್‌ವಿಷನ್ ಮತ್ತು ಕಂಟ್ರೋಲ್ ಅಧಿಕಾರಸ್ಥರ ಮೇಲೆ ಇರತಕ್ಕಂಥಾದ್ದು ಎಂದು ಇದೆ. ಇದು ಮೊದಲನೇ ಸಲ ಕರ್ನಾಟಕದಲ್ಲಿ ಇಷ್ಟು ಸ್ಪಷ್ಟವಾಗಿ, ಜನರಿಂದ ಆರಿಸಲ್ಪಟ್ಟ ಸಮಿತಿಗೆ ಅಧಿಕಾರಸ್ಥರ ಮೇಲೆ ಸಂಪೂರ್ಣವಾದ ಅಧಿಕಾರ ಇದೆಯೆಂದು ಹೇಳಿ ಈ ಹಿಂದೆ ಇಷ್ಟು ಸ್ಪಷ್ಟವಾಗಿ ಹೇಳಲಿಲ್ಲ. ಈ ಮಾತನ್ನು ಎಕ್ಸ್‌ಪರ್ಟ್ ಕಮಿಟಿಯವರೇ ಹೇಳಿದ್ದಾರೆ. ಇದಕ್ಕೂ ಈ ಅಮೆಂಡ್‌ಮೆಂಟ್‌ನಿಂದ ಯಾವ ರೀತಿಯಾದ ಧಕ್ಕೆ ಬಂದಿಲ್ಲ. Section 197(2)- the powers and duties of the Chief Executive Officer-it has remained the same.

"It shall be the duty of Chief Executive Officer to bring to the notice of the Zilla Panchayat or Taluka Panchayat any resolutions, orders or proposals if he considers as violative of law or rule etc."

The amendment now proposed only modifies to the extent that the Chief Executive Officer should render such advise to Zilla Panchayat or Taluka Panchayat through a written Note. ಅಂದರೆ, ಯಾವುದಾದರೂ ಒಂದು ಕಾನೂನಿಗೆ ವಿರೋಧವಾಗಿರತಕ್ಕಂಥ ಕೆಲಸ ಮಾಡಲಿಕ್ಕೆ ಹೊರಟರೆ, ಆಗ ಜಡ್.ಪಿ.ಅಧ್ಯಕ್ಷರಿಗೆ, ನೀವು ಇಂಥಾ ತಪ್ಪು ಮಾಡುತ್ತಿದ್ದೀರಿಂದು ಹೇಳುವಂಥ ಕರ್ತವ್ಯವನ್ನು ಚೀಫ್ ಎಕ್ಸಿಕ್ಯುಟಿವ್ ಆಫೀಸರ್‌ಗೆ ವಹಿಸಿರುವುದರಲ್ಲೂ ಸಹಾ ಈ ಅಮೆಂಡ್‌ಮೆಂಟ್‌ನಲ್ಲಿ ಯಾವುದೇ ಬದಲಾವಣೆ ಇಲ್ಲ. ಅದರಲ್ಲಿ ಒಂದು ಸಣ್ಣ ಬದಲಾವಣೆ ಮಾತ್ರ ಮಾಡಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ''ಅದನ್ನು ಟಿಪ್ಪಣಿ ಮಾಡುವಾಗ ಬರೆದು ಕೊಡಬೇಕು'' ಎಂದು ಇದೆ. ಅದರಲ್ಲಿ ತಪ್ಪೇನೂ ಇಲ್ಲ. ಅಂಥಾ ಪ್ರಸಂಗ ಬಂದರೆ ಗೌರ್ನಮೆಂಟ್ ಆಫೀಸರ್ ವಿಷಯ ತಿಳಿಸಬೇಕಾಗುತ್ತದೆ. ನಾವು ಮಾಡಿದ್ದಂಥ ಅಮೆಂಡ್‌ಮೆಂಟ್ ನಲ್ಲಿ 2 ತಿಂಗಳಿನಲ್ಲಿ ಸರ್ಕಾರ ತೀರ್ಮಾನ ಕೊಡಬೇಕೆಂದು ಇತ್ತು, ಈಗ ಅದನ್ನು 15 ದಿವಸ ಎಂದು ಮಾಡಿದ್ದಾರೆ. ಅಂದರೆ, ಏನಾದರೂ ಅಕ್ರಮ

ನಡೆದಾಗ ಸಂಬಂಧಪಟ್ಟ ಸಿ.ಇ.ಓ., ಅವರು ಸರ್ಕಾರಕ್ಕೆ ತಿಳಿಸಿದರೆ, ಸರ್ಕಾರದ ಪ್ರತಿಕ್ರಿಯೆಯನ್ನು 15 ದಿವಸಗಳೊಳಗೆ ತಿಳಿಸಬೇಕೆಂದು ಮಾಡಿದ್ದಾರೆ. ಇದನ್ನು ನಾನು ಅಪೋಸ್ ಮಾಡುವುದಿಲ್ಲ. ಆದರೆ, ನಮ್ಮ ಅಡ್ಮಿನಿಸ್ಟ್ರೇಷನ್ ಅಷ್ಟು ಚುರುಕಾಗಿ ನಡೆಯುತ್ತಿದೆಯೇ ಅಥವಾ ಇಲ್ಲವೇ ಎಂದು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು. ಏಕೆಂದರೆ, ಅಕಸ್ಮಾತ್ 15 ದಿವಸಗಳೊಳಗೆ ಗೌರ್ನಮೆಂಟಿನಿಂದ ತೀರ್ಮಾನ ಕೊಡಲಿಕ್ಕಾಗದೇ ಇದ್ದರೆ ಆವಾಗ ಮಾಡಿದ ತಪ್ಪನ್ನೇ ಮುಂದುವರಿಸಿಕೊಂಡು ಹೋಗುತ್ತಾರೆ. ಆ ಕಾರಣ, ನಾವು ಎರಡು ತಿಂಗಳು ಏನು ಮಾಡಿದ್ದೆವು, ಅದರಲ್ಲಿ ಏನೂ ತಪ್ಪು ಇರಲಿಲ್ಲವೆಂದು ನನಗನಿಸುತ್ತದೆ. 15 ದಿವಸಗಳೊಳಗೆ ಸರ್ಕಾರ ತೀರ್ಮಾನ ಮಾಡುವುದಾದರೆ ಆ ಬಗ್ಗೆ ಯಾರೂ ಆಕ್ಷೇಪಣೆ ಮಾಡುವುದಿಲ್ಲ. 2 ತಿಂಗಳು ಸಮಯ ಇದ್ದರೆ ಒಳ್ಳೆಯದು, ತಾವು ಬೇಕಾದರೆ 15 ದಿವಸಗಳಲ್ಲೇ ಬೇಕಾದರೆ ಉತ್ತರ ಕೊಡಿ, ಅಥವಾ ಹತ್ತೇ ದಿವಸಗಳಲ್ಲಿ ಬೇಕಾದರೂ ಕೊಡಿ. ಆದರೆ, ಕಾನೂನಿನಲ್ಲಿ 2 ತಿಂಗಳು ಟೈಮ್ ಇಟ್ಟುಕೊಳ್ಳುವುದು ಒಳ್ಳೆಯದು. ಈ ಸಲಹೆ ಸರ್ಕಾರಕ್ಕೆ ಹಿಡಿಸಿದರೆ, ಆ ಅಮೆಂಡ್‌ಮೆಂಟನ್ನು ಕೈ ಬಿಡಬಹುದು. ಇನ್ನು 7ನೇ ವಿಷಯ, ನಾಮಿನೇಷನ್‌ದ್ದು, 1983 ಆ್ಯಕ್ಟ್ ಪ್ರಕಾರ ಇಬ್ಬರನ್ನು ಬ್ಯಾಕ್‌ವರ್ಡ್ ಕ್ಲಾಸ್ ಹೆಸರಿನಲ್ಲಿ ನಾಮಿನೇಟ್ ಮಾಡಿ ಅವರಿಗೆ ವೋಟಿಂಗ್ ಪವರ್ಸ್ ಕೊಡಲಾಗಿತ್ತು. ಅಂದರೆ, ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಆರಿಸುವಾಗ ಆ ನಾಮಿನೇಟ್ ಆದಂಥ ಸದಸ್ಯರುಗಳು ಓಟು ಮಾಡಬಹುದಾಗಿತ್ತು. ಈ ವಿಷಯ ತಮಗೂ ಗೊತ್ತಿದೆ. ಇದರ ಬಗ್ಗೆ ಆ ಕಾಲದಲ್ಲೂ ಕೂಡಾ ನಾನು ತೀವ್ರವಾಗಿ ವಿರೋಧಮಾಡಿದ್ದೆ. ಇದು ಪ್ರಜಾಪ್ರಭುತ್ವದ ಕೊಲೆ ಮತ್ತು ವಿರುದ್ಧವಾದುದು, ಇದನ್ನು ಬದಲಾಯಿಸಬೇಕೆಂದು ಹೇಳಿದ್ದೆ. ಏಕೆಂದರೆ, ಇದರ ಪರಿಣಾಮವನ್ನು ನಾವೆಲ್ಲರೂ ಅನುಭವಿಸಿದ್ದೇವೆ. ಪಕ್ಷದ ರಾಜಕಾರಣದ ವಾತಾವರಣದಲ್ಲಿ ನಾವು ಇದ್ದೇವೆ. ಸ್ವಾಭಾವಿಕವಾಗಿ ಯಾವುದೇ ಸರ್ಕಾರ ಆಡಳಿತದಲ್ಲಿ ಇದ್ದರೂ ನಾಮಿನೇಟೆಡ್ ಮೆಂಬರ್ಸ್‌ಗೆ ವೋಟಿಂಗ್ ರೈಟ್ಸ್ ಕೊಟ್ಟರೆ ಬೇರೆ ಪಕ್ಷಕ್ಕೆ ಮೆಜಾರಿಟಿ ಇದ್ದರೂ ಅದನ್ನು ತಿರುವಿ ಇಡಲಿಕ್ಕೆ ಈ ನಾಮಿನೇಷನ್ ಮಾಡುವುದರಿಂದ ಸಾಧ್ಯವಾಗುತ್ತದೆ. It amounts to murder of Democracy and it should not be there. ಇದನ್ನು ನಾನು ಆ ಕಾಲಕ್ಕೂ ಹೇಳಿದ್ದೇನೆ. 1993ರಲ್ಲಿ ಆ್ಯಕ್ಟ್ ಮಾಡುವಾಗ ಈ ನಾಮಿನೇಷನ್ಸ್‌ನ್ನು ತೆಗದು ಹಾಕಿ ನೇರವಾಗಿ ರಿಸರ್ವೇಷನ್ ಕೊಟ್ಟಿದ್ದೇವೆ. ರಿಸರ್ವೇಷನ್ ಹೆಸರಿನಲ್ಲಿ ರಾಜಕೀಯವಾಗಿ ನಾಮಿನೇಷನ್ ಮಾಡುವುದನ್ನು ಬಿಟ್ಟು, ರಿಸರ್ವೇಷನ್ ಕೊಡುವುದಿದ್ದರೆ ಓಪನ್ ಆಗಿ ಕೊಡೋಣವೆಂದು ನಾವು ಓ.ಬಿ.ಸಿ. ರಿಸರ್ವೆಷನ್ ಅನ್ನು ನಾವು ಕಾನೂನಿನಲ್ಲಿ ಸೇರಿಸಿ ನಾಮಿನೇಷನ್ ಮಾಡುವ ಪದ್ಧತಿಯನ್ನು ಕೈಬಿಟ್ಟಿದ್ದೆವು. ಈ ವಿಷಯ ಕೂಡಾ ಈ ಸರ್ಕಾರ ಬದಲಾಯಿಸಲಿಕ್ಕೆ ಹೋಗಲಿಲ್ಲ. ಅದನ್ನು ಹಾಗೆ ಬಿಟ್ಟಿರುವುದರಿಂದ ಧನ್ಯವಾದಗಳು. ಏಕೆಂದರೆ ಕೋ-ಆಪರೇಟಿವ್ ಸೊಸೈಟೀಸ್‌ನಲ್ಲಿ ಏನು ವಾದ ನಡೆಯಿತು? ಮತ್ತು ಅದರ ಬಗ್ಗೆಯೇ ಎ.ಪಿ.ಎಂ.ಸಿ, ಎಲೆಕ್ಷನ್‌ನಲ್ಲಿ ಏನು ವಾದ

ನಡೆಯಿತು? ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರೇ ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ರೀತಿ ನಾಮಿನೇಷನ್ ಮಾಡತಕ್ಕಂಥ ಕಲ್ಚರ್ ಹೋಗಬೇಕೆಂದು ಏನು ಹೇಳಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆ ಧೈರ್ಯವನ್ನು ನಾವು ಆಗಲೇ ಮಾಡಿದ್ದೆವು. ನೀವು ಅದನ್ನು ಬದಲಾಯಿಸದೇ ಇದ್ದರೆ ಸಂತೋಷ. ಎಕ್ಸ್ ಅಫಿಷಿಯೋ ಮೆಂಬರ್‌ಗೆ ವೋಟಿಂಗ್ ಪವರ್ ಕೊಡುವ ಬಗ್ಗೆ ಕೆಲವು ಮುಖ್ಯಾಂಶಗಳನ್ನು ನಾನು ಹೇಳುತ್ತಿದ್ದೇನೆ. ಯಾವ ರೀತಿಯಾಗಿ ಸ್ಟ್ರಕ್ಚರಲ್ ಸ್ಪಿರಿಟ್ ಆಫ್ 93 ಆ್ಯಕ್ಟ್, ಇದರಿಂದ ಅಫೆಕ್ಟ್ ಆಗುವುದಿಲ್ಲವೆಂದು. ಸಣ್ಣ ಪುಟ್ಟ ವಿಷಯಗಳು ಇದ್ದರೆ ಅದನ್ನು ಬಿಡೋಣ. ಎಕ್ಸ್-ಆಫಿಷಿಯೋ ಮೆಂಬರ್ಸ್‌ಗೆ ವೋಟಿಂಗ್ ಪವರ್ ಕೊಡುವ ಬಗ್ಗೆ 1983 ನೇ ಆ್ಯಕ್ಟ್‌ನಲ್ಲಿ, Voting power of ex-officio members.... ಎಕ್ಸ್ ಅಫಿಷಿಯೋ ಮೆಂಬರ್ಸ್ ಅಂದರೆ, ಎಂ.ಪಿ; ಎಂ.ಎಲ್.ಎ; ಎಂ.ಎಲ್.ಸಿ; had power to vote in the election of Adhyaksha. ಅಧ್ಯಕ್ಷರ ಚುನಾವಣೆಯಲ್ಲಿ ಎಕ್ಸ್ ಅಫಿಷಿಯೋ ಮೆಂಬರ್ಸ್ ಓಟ್ ಹಾಕುವ ಪವರ್ ಇತ್ತು, 1983ರಲ್ಲಿ. ಅದು ಪ್ರಜಾಪ್ರಭುತ್ವಕ್ಕೆ ತದ್ವಿರುದ್ಧ ಆದಕಾರಣ ನಾವು 1993ರ ಆಕ್ಟ್‌ನಲ್ಲಿ ಎಕ್ಸ್‌ಅಫಿಷಿಯೋ ಮೆಂಬರ್ಸ್ ಇದ್ದರೂ ಅವರಿಗೆ ಓಟಿಂಗ್ ರೈಟ್ಸ್ ಇರಕೂಡದು ಎಂದು ಮಾಡಿದ್ದೆವು. ಅದು ಮೂಲಭೂತವಾಗಿರತಕ್ಕಂಥ ಒಂದು ಬದಲಾವಣೆ, ನಾವು ಮಾಡಿರತಕ್ಕಂಥಾದ್ದು. ಅದನ್ನು ಕೂಡ ತಾವು ಹಾಗೆಯೇ ಉಳಿಸಿದ್ದೀರಿ. ಅದನ್ನು ಬದಲಾಯಿಸಲು ಹೋಗಲಿಲ್ಲ ಧನ್ಯವಾದಗಳು. 9ನೇಯದು ನೋ-ಕಾನ್ಫಿಡೆನ್ಸ್. 1993ರ ಆಕ್ಟ್‌ನಲ್ಲಿ ಮೂರನೇ ಎರಡರಷ್ಟು ಒಟ್ಟು ಮೆಂಬರ್ಸ್ ಇದ್ದರೆ ನೋ-ಕಾನ್ಫಿಡೆನ್ಸ್ ತರಬಹುದು ಎಂದು ಇತ್ತು. 1993ರ ಆಕ್ಟ್‌ನಲ್ಲಿ ನಾವು ಸಿಂಪಲ್ ಮೆಜಾರಿಟಿ ಎಂದು ಮಾಡಿದ್ದೆವು. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್‌ಗಳಲ್ಲಿ ಸಿಂಪಲ್ ಮೆಜಾರಿಟಿ ಇಂದ ನೋ-ಕಾನ್ಫಿಡೆನ್ಸ್ ಮೋಷನ್ ತರಬಹುದು ಎಂದು ಮಾಡಿದ್ದೆವು. ಆದರೆ ಗ್ರಾಮಮಟ್ಟದಲ್ಲಿ ಮೂರನೇ ಎರಡರಷ್ಟು ಕಾಪಾಡಿಕೊಂಡು ಬಂದೆವು. ಯಾಕೆಂದರೆ ಅಲ್ಲಿ ದಿನಾಲೂ ಇಲೆಕ್ಷನ್ ಆಗಬಾರದು ಎಂದು. ಇವೊತ್ತಿನ ಅಮೆಂಡ್‌ಮೆಂಟ್‌ನಲ್ಲಿ ಅದರ ಬಗ್ಗೆ ಕೂಡ ಪ್ರಸ್ತಾಪ ಇಲ್ಲ. ಇನ್ನೊಂದು ಅಂಶ ಏನೆಂದರೆ ನೋ-ಕಾನ್ಫಿಡೆನ್ಸ್ ಮೋಷನ್ ಪದೇ ಪದೇ ತರಬಾರದು. ಇದು ನಮ್ಮ ವಿಚಾರವೂ ಕೂಡ ಆಗಿದೆ. ಅದಕ್ಕೋಸ್ಕರ 1993ರ ಆಕ್ಟ್‌ನಲ್ಲಿ ವರ್ಷಕ್ಕೊಂದು ಸಲ ಮಾತ್ರ ನೋ-ಕಾನ್ಫಿಡೆನ್ಸ್ ಮೋಷನ್ ತರಬಹುದು ಎಂದು ಇತ್ತು. ಇದನ್ನು ಈಗ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಮಟ್ಟಿಗೆ ಆರು ತಿಂಗಳು ಎಂದು ಮಾಡಿದ್ದಾರೆ. ಏಕೆಂದರೆ ಲಾಜಿಕ್ ಆಗಿ ಸರಿಯಾಗಿ ಇರಲಿ. ಇವರು ಟರ್ಮ್ 20 ತಿಂಗಳು ಇರುವುದರಿಂದ ಆರು ತಿಂಗಳು ಮಾಡಿದ್ದಾರೆ. ಹಾಗೆ ಏಕೆ ಮಾಡಿದ್ದಾರೆ ಎಂಬುದು ನನಗೆ ಅರ್ಥವಾಗುತ್ತದೆ. ಇಷ್ಟು ಮಾತ್ರ ಆ ಬಗ್ಗೆ ಹೇಳಲು ಇಷ್ಟಪಡುತ್ತೇನೆ. ಗ್ರಾಮಪಂಚಾಯತ್ ಮಟ್ಟಿಗೆ ಅದು ಐದು ವರ್ಷಗಳು ಇರುವುದರಿಂದ ಅದಕ್ಕೆ ಒಂದು ವರ್ಷ ಎಂದು ಇದೆ. ಪ್ರತಿಯೊಂದು ವಿಷಯದಲ್ಲಿ ಮೂಲಭೂತವಾದ ಬದಲಾವಣೆಯು 1993ರ ಆ್ಯಕ್ಟ್‌ನಲ್ಲಿ ಆಯಿತು,

ತದನ್ನು ಮುಟ್ಟಲಿಕ್ಕೆ ಮಾನ್ಯ ಸಚಿವರು ಪ್ರಯತ್ನ ಮಾಡಿಲ್ಲ. ಇನ್ನೊಂದು ಮಾತು ಅವರಿಗೆ ಆಶ್ಚರ್ಯವಾಗಬಹುದು. ಈ ಅಮೆಂಡ್‌ಮೆಂಟ್ಸ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಅದು ತಮಗೆ ಗೊತ್ತಿರಲಿಕ್ಕಿಲ್ಲ. ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ನಮ್ಮ 1993ರ ಅಮೆಂಡ್‌ಮೆಂಟ್, ಅಸೆಂಬ್ಲಿಯಲ್ಲಿ ನಾವು ಮೆಜಾರಿಟಿ ಇಂದ ಪಾಸ್ ಮಾಡಿಕೊಂಡೆವು. ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಏಪ್ರಿಲ್ 13, 1993ರಂದು ಒಮ್ಮತದಿಂದ ನಾವು ಪಾಸ್ ಮಾಡಿಕೊಂಡಿದ್ದೇವೆ. ಯಾಕೆಂದರೆ ಪಂಚಾಯತ್‌ರಾಜ್ ಕೆಲಸಗಳೆಲ್ಲವೂ ಒಮ್ಮತದಿಂದಲೇ ಕೆಲಸಗಳನ್ನು ಮಾಡಬೇಕು. ಮಾನ್ಯ ಕಾನೂನು ಸಚಿವ ನಾಣಯ್ಯನವರು ಆವಾಗ ವಿಧಾನಪರಿಷತ್ತಿನಲ್ಲಿ ವಿರೋಧಪಕ್ಷದ ನಾಯಕರಾಗಿದ್ದರು. ಅವರು ಮತ್ತು ನಾನು ಕುಳಿತು ಇದರಲ್ಲಿ ಏನು ಆಕ್ಷೇಪಣೆ ಇದೆ, ಇದ್ದರೆ ಅದನ್ನು ಸರಿಪಡಿಸೋಣ, ಆದರೆ ಯೂನಾನಿಮಸ್ ಆಗಿ ಪಾಸ್ ಮಾಡೋಣ ಎಂದು ಹೇಳಿದ್ದಕ್ಕೆ, ಆಗ ಆರು ಅಮೆಂಡ್‌ಮೆಂಟ್‌ಗಳನ್ನು ಅಲ್ಲಿ ಯುನಾನಿಮಸ್ ಆಗಿ ಒಪ್ಪಿ, ಸಚಿವನಾಗಿ ನಾನು ಉತ್ತರ ಹೇಳುವಾಗ ಈ ಅಮೆಂಡ್‌ಮೆಂಟ್‌ನ್ನು ಮಂಡಿಸಿ, ಆ ಕಾನೂನನ್ನು ಯುನಾನಿಮಸ್ ಆಗಿ ಪಾಸ ಮಾಡಿದೆವು. ಅಂದರೆ ಕಾಂಗ್ರೆಸ್, ಜನತಾ, ಎಲ್ಲರೂ ಒಟ್ಟಾಗಿ 1993ರಲ್ಲಿ ಯುನಾನಿಮಸ್ ಆಗಿ ಕಾನೂನು ಪಾಸ್ ಮಾಡಿದ್ದು. ಆದರೆ ಇಲ್ಲಿ ಮೆಜಾರಿಟಿಯಲ್ಲಿ ಪಾಸ್ ಮಾಡಿಕೊಂಡಿದ್ದರಿಂದ ಅದನ್ನು ಪುನಃ ಇಲ್ಲಿ ತರಬೇಕಾಯಿತು. ಆ ಆರು ಅಮೆಂಡ್‌ಮೆಂಟ್ಸ್‌ನ್ನು ಇಲ್ಲಿ ತರಬೇಕಾಯಿತು. ಯಾಕೆಂದರೆ ನಾವು ಮಾತು ಕೊಟ್ಟಿದ್ದೆವು. ನಾವು ಆರು ಅಮೆಂಡ್‌ಮೆಂಟ್ಸ್‌ನ್ನು ತರುತ್ತೇವೆ, ನಮ್ಮ ಅಭಿಪ್ರಾಯ ಕೂಡ ಇದೇ ರೀತಿಯಲ್ಲಿದೆ, ಇದನ್ನು ಯುನಾನಿಮಸ್ ಆಗಿ ಪಾಸ್ ಮಾಡಿ ಎಂದು ಕೇಳಿದೆವು. ಹಾಗೆ ತಂದು ಇಲ್ಲಿ ಇಂಟ್ರಡ್ಯೂಸ್ ಕೂಡ ಮಾಡಿದೆವು. ಅದರ ಪ್ರತಿಗಳು ಕೂಡ ನನ್ನ ಬಳಿ ಇದೆ, ಅದನ್ನು ತಮಗೆ, ಸಚಿವರಿಗೆ ಸಲ್ಲಿಸುತ್ತೇನೆ. ಇಲ್ಲಿ ಇಂಟ್ರಡ್ಯೂಸ್ ಕೂಡ ಮಾಡಿದೆವು. ಇವುಗಳು ಅಗ್ರೀಡ್ ಅಮೆಂಡ್‌ಮೆಂಟ್ಸ್. ಯಾವ ಚರ್ಚೆ ಇಲ್ಲದೆ ಯುನಾನಿಮಸ್ ಆಗಿ ಪಾಸ್ ಆಗಿದ್ದು. ಹಾಗೆಯೇ ಇಲ್ಲಿಯೂ ಕೂಡ ಆಗಬೇಕಾಗಿತ್ತು. ಆದರೆ ದುರ್ದೈವದಿಂದ ಆಗಿನ ರಾಜಕಾರಣದ ವಾತಾವರಣದಿಂದಾಗಿ ಇದರ ಕಡೆಗೆ ಯಾರೂ ಲಕ್ಷ್ಯಕೊಡಲು ತಯಾರಾಗಿದ್ದಿರಲಿಲ್ಲ. ಬೇರೆಯೇ ರಾಜಕೀಯ ನಡೆಯುತ್ತಾ ಇತ್ತು, ಹೌಸ್ ಅಡ್‌ಜರ್ನ್ ಆಯಿತು, ಇದು ಪಾಸ್ ಆಗಲಿಲ್ಲ. These are agreed amendments passed in the Upper House, introduced by me as a Minister for Panchayat Raj in the Lower House on 3rd september, 1993. ಆದ್ದರಿಂದ ಈ ಅಮೆಂಡ್‌ಮೆಂಟ್ಸ್ ನಾವು ಮಾಡಿದ್ದು, ನಮ್ಮ ಕಾಲದಲ್ಲಿ ಆಗಿದ್ದು ಎಂದು ಹೇಳಿದರೆ, ಯಾರೂ ತಪ್ಪು ತಿಳಿದುಕೊಳ್ಳಲಿಕ್ಕಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಅಮೆಂಡ್‌ಮೆಂಟ್ಸ್ ಯಾವುವು? Amendment to preamble to say that Panchayat bodies are to function as units of self-government. ಎಂದು ಹೇಳಿ, ನಾಣಯ್ಯನವರು ಬೇಕಾದಷ್ಟು... ಯಾಕೆಂದರೆ ನನ್ನ

ಪ್ರಿಯಾಂಬಲ್‌ನಲ್ಲಿ Units of self-government. ಎನ್ನುವ ಪದ ಉಪಯೋಗಿಸಿದ್ದಿಲ್ಲ. ನಾನು ಅವರಿಗೆ ಹೇಳಿದೆ, ಅದನ್ನು ಉಪಯೋಗಿಸಿದರೂ Units of self-government ಉಪಯೋಗಿಸದೇ ಇದ್ದರೂ ಕೂಡ units of self-government. ಬ್ರಿಟೀಷರ ಕಾಲಕ್ಕೆ ಈ ಪದವನ್ನು ಉಪಯೋಗಿಸುತ್ತಿದ್ದರು. unit of self-government. ಇದನ್ನು ಸೇರಿಸಿ, ನಿಮ್ಮ ಮನಸ್ಸಿಗೆ ಅಷ್ಟೊಂದು ಸಮಾಧಾನವಾಗುವುದಾದರೆ ನಮ್ಮ ಆಕ್ಷೇಪವಿಲ್ಲ, ಯಾಕೆಂದರೆ They are local bodies. Units of self-government, ಎಂದು ಪದೇ ಪದೇ ಬ್ರಿಟಿಷರ ಕಾಲಕ್ಕೆ, ಬ್ರಿಟಿಷರು ರಾಜ್ಯ ಮಾಡುವ ಕಾಲಕ್ಕೆ ಇತ್ತು. ಅದನ್ನೇ ಈವೊತ್ತು ಉಪಯೋಗಿಸುತ್ತಾ ಇದ್ದೇವೆ. ಆದಕಾರಣ ಪ್ರಿಯಾಂಬಲ್‌ನಲ್ಲಿ units of self-government ಎಂದ ತಕ್ಷಣ, ಸೆಲ್ಫ್ ಗವರ್ನ್‌ಮೆಂಟ್ ಅಂದರೆ, ಸ್ವತಂತ್ರ ರಾಜರು ಅವರು ಏನಾದರೂ ಮಾಡಬಹುದು ಎಂಬ ಅರ್ಥ ಬರುವುದಿಲ್ಲ. Units of self-government, ಅಂದರೆ ಲೋಕಲ್‌ಬಾಡೀಸ್ ಆಗಿಯೇ ಉಳಿಯುತ್ತವೆ. ಆದಕಾರಣ ನನ್ನದೇನೂ ಆಕ್ಷೇಪಣೆ ಇಲ್ಲ ಎಂದು ಹೇಳಿದೆ. ಈ ಅಮೆಂಡ್‌ಮೆಂಟ್ಸ್ ಏನಿದೆ, ಈ ಹಿನ್ನಲೆಯಲ್ಲಿ ಪಾಸ್ ಆಗಿರತಕ್ಕಂಥಾದ್ದು, ಈಗ ಅದನ್ನು ನೀವು ತಂದಿದ್ದೀರಿ, ಅದನ್ನೇ ನಾನು ಕಾಮೆಂಟ್ ಮಾಡಿ ಇದಕ್ಕೆ ವಿರೋಧ ಮಾಡುತ್ತೇನೆ. ಯಾಕೆಂದರೆ ನಾವು ಒಟ್ಟಿಗೆ ತಂದಿರತಕ್ಕಂಥಾದ್ದು. ಇನ್ನು ಎರಡನೆಯದು Definition of backward classes ಮಾನ್ಯ ನಾಣಯ್ಯನವರು ಆಗ ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಭಾರಿ ಭಾಷಣ ಮಾಡಿದರು. ಈ definition of backward classes, Articles 16(4) & 15 (4) ಪ್ರಕಾರ, ಯಾವುದನ್ನು ಡೆಫಿನಿಷನ್‌ನಲ್ಲಿ ಉಪಯೋಗಿಸುತ್ತೀರಿ, ಅದೇ ಡೆಫಿನಿಷನ್ ಇಲ್ಲಿ ಪಂಚಾಯತ್‌ರಾಜ್ಯಕ್ಕೂ ಅನ್ವಯಿಸಬೇಕು, ಎಂಬ ವಾದ. ಅವರಿಗೆ ಏನು ಭಯ ಅಂದರೆ, ನಾವು ಆ ಕಾಲಕ್ಕೆ, 16-4, 15-4, ರೆಸ್ಯುಲೇಶನ್‌ಗೆ ಒಂದು ಡೆಫಿನಿಷನ್ ಕೊಟ್ಟು ಪಂಚಾಯತ್‌ರಾಜ್‌ಗೆ ನಮ್ಮದೇ ಆದಂಥ ಡೆಫಿನಿಷನ್ ಕೊಡುವ ಹಕ್ಕು, ಉಳಿಸಿಕೊಳ್ಳುತ್ತಾರೆ ಎಂಬ ಭಯ ಅವರಿಗೆ ಇತ್ತು. ಅದಕ್ಕೆ ನಾನು ಅಂಥಾದ್ದೇನೂ ಇಲ್ಲ ಎಂದು ಹೇಳಿದೆ. ಆ ಕಾರಣ ಆ ಒಂದು ಅಮೆಂಡ್‌ಮೆಂಟ್ ಕೂಡ ಮಾಡಿದ್ದೆವು. Same definition applicable to 16(4) and 15(4) should apply to reservation definition of backward classes for Panchayat Raj. ನೀವು ಅದನ್ನು ಬೇರೆ ಕಡೆ ಮಾಡಿದ್ದೀರಿ ಎಂದು ನನಗೆ ಗೊತ್ತಾಗಿದೆ. So, in principle there is no difference. Next, election to office of Adhayaksha and Upadhyaksha shall be held within 30 days from the date of application. ಇದು ಕೂಡ ನಾವು ಜಾಯಿಂಟ್ ಆಗಿ ಮಾಡಿರತಕ್ಕಂಥ ಅಮೆಂಡ್‌ಮೆಂಟ್. ನಮ್ಮ ಆಕ್ಟ್‌ನಲ್ಲಿ as soon as possible ಎಂದು ಇತ್ತು. ಅದು ಬಹಳ ವೇಗ ಆಗುತ್ತದೆ, ಸ್ವಲ್ಪ ಟೈಂ ಲಿಮಿಟ್ ಅದಕ್ಕೆ ಕೊಡೋಣ ಎಂದು ಚರ್ಚೆಯಲ್ಲಿ ಬಂದಾಗ ನಾವು ಇದನ್ನು

ಮಾಡಿದ್ದೇವೆ. ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆ 30 ದಿನಗಳಲ್ಲಿ from the date of application. ಆಗಬೇಕೆಂದು ಎಂದು. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಅಂದರೆ, These are unanimously approved amendments. ಜನತಾಪಾರ್ಟಿ, ಕಾಂಗ್ರೆಸ್ ಎಲ್ಲಾ ಸೇರಿ, ಕೌನ್ಸಿಲ್‌ನಲ್ಲಿ ಪಾಸ್ ಮಾಡಿರತಕ್ಕಂಥಾದ್ದು. ಇವೊತ್ತು ಮಾನ್ಯ ನಾಣಯ್ಯಯವರು ಅಧಿಕಾರಕ್ಕೆ ಬಂದ ತತ್‌ಕ್ಷಣ ಇದನ್ನು ಮಾಡಿಬಿಡಬಹುದಾಗಿತ್ತು.

5. 10 ಪಿ.ಎಂ

ಇಲ್ಲಿಯತನಕ ಯಾವುದೊ ಕಾರಣಕ್ಕಾಗಿ ಕಾದಿದ್ದೀರಿ. ಉದ್ದೇಶಪೂರ್ವಕವಾಗಿ ಮಾಡಿದ್ದೀರಿ ಎಂದು ನಾನು ಹೇಳುವುದಿಲ್ಲ. ಆದರೆ ನಾವು ಮಾಡಿರತಕ್ಕಂಥದ್ದು ಎಂದು ನಾನು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಹೊಸ ಅಮೆಂಡ್‌ಮೆಂಟ್ ಅಲ್ಲ. ನಂತರ ನಾಲ್ಕನೆಯದಾಗಿ to ban moving no-confidence motion within 12 months, ಇದನ್ನು ಈಗಾಗಲೇ ಹೇಳಿದೆ. ಇದೂ ಕೂಡ ನಾವು ಅಮೆಂಡ್‌ಮೆಂಟ್‌ನಲ್ಲಿ ಸೇರಿಸಿದ್ದೇವೆ. ಒಂದು ವರ್ಷ ನೋ ಕಾನ್ಫಿಡೆಂಟ್ ಆದರೆ ಇನ್ನೊಂದು ವರ್ಷದವರೆಗೂ ನೋ ಕಾನ್ಫಿಡೆಂಟ್ ಬರಬಾರದು. ಇದೂ ಕೂಡ ಆ ಕಾಲಕ್ಕೆ ನಾವೆಲ್ಲರೂ ಒಟ್ಟಿಗೆ ಸೇರಿ ಮಾಡಿರತಕ್ಕಂಥ ಅಮೆಂಡ್‌ಮೆಂಟ್. ಈಗ 6 ತಿಂಗಳಿಗೆ ಇಳಿಸಿದ್ದಾರೆ. ಇದಕ್ಕೆ ನನ್ನ ಆಕ್ಷೇಪಣೆ ಏನೂ ಇಲ್ಲ. ಇದರ ಬಗ್ಗೆ ಕೂಡ ನಾನು ಆಗಲೇ ಹೇಳಿದೆ. CEO and inconsistent resolutions-Matters referred to the government by CEO to be decided by the government within the time limit prescribed (2months) as per 1993 amendment proposed and 15 days as per the 1997 amendment, ತಮ್ಮ ಅಮೆಂಡ್ಮೆಂಟ್ ಪ್ರಕಾರ ಈಗಲೂ ತಮಗೆ ಅನಿಸಿದರೆ ಅದರಿಂದ ತಮಗೇನೂ ಅಪಾಯವಾಗುವುದಿಲ್ಲ. ಆದರೆ ಎರಡು ತಿಂಗಳು ಇದ್ದುದ್ದನ್ನು 15 ದಿವಸಕ್ಕೆ ಇಳಿಸುವ ಅವಶ್ಯಕತೆ ಇಲ್ಲ ಎಂದು ನನ್ನ ಅಭಿಪ್ರಾಯವಿದೆ. ಅದು ಅಂಥ ಮಹತ್ವದ ವಿಷಯವಲ್ಲ. ನಿಮಗೆ ಇನ್ನೂ ಸ್ವಲ್ಪ ಟೈಮ್ ಸಿಗುತ್ತದೆ ಅಷ್ಟೆ. ಆರನೆಯದಾಗಿ Defining and making booth capturing and election offences by government servants punishable, ಇದೂ ಕೂಡ ಆರನೇ ಅಮೆಂಡ್‌ಮೆಂಟ್‌ನ್ನು ನಾವು ಮಾಡಿದ್ದುದು. Booth caputuring and election offences, ಇದೂ ಕೂಡ ಯುನಾನಿಮಸ್ ಆಗಿ ಪಾಸ್ ಆಗಿರುವಂಥ ಅಮೆಂಡ್‌ಮೆಂಟ್. ಇದನ್ನು ನೀವೂ ತಂದಿದ್ದೀರಿ, ಸಂತೋಷ. ಇದರಲ್ಲಿ ನನಗೆ ಒಂದು ಅನುಮಾನ ಇದೆ. ತಾವು ದಯಮಾಡಿ ಅದನ್ನು ನೋಡಬಹುದು. Booth capturing election offences ಬಗ್ಗೆ ಗ್ರಾಮ ಪಂಚಾಯತಿ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೀರಿ. ಅದು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಬಗ್ಗೆ ಅದು

ಬಿಟ್ಟುಹೋಗಿದೆ. It may be oversight. ಏಕೆಂದರೆ 31ಎ ಮೂರು ಹಂತದಲ್ಲಿ ಗ್ರಾಮ ಪಂಚಾಯತಿಗಳಿಗೆ ಅನ್ವಯಿಸಬೇಕು. ಇನ್ನೂ ಎರಡು ಹಂತದಲ್ಲಿ ಅದು ಬಿಟ್ಟುಹೋಗಿದೆ. ಅದು ಉದ್ದೇಶಪೂರ್ವಕವಾಗಿ ಬಿಟ್ಟು ಹೋಗಿರಲಿಕ್ಕಿಲ್ಲ, ಹಾಗೆಯೇ ಬಿಟ್ಟುಹೋಗಿರಬಹುದು. ಬಿಟ್ಟು ಹೋಗಿದ್ದರೆ ಅದನ್ನು ತಿದ್ದಬಹುದು. ಆದರೆ ಈ ವಿಷಯ ಏನಿದೆ ಅದು ಆ ಕಾಲಕ್ಕೆ ತೀರ್ಮಾನವಾಗಿರುವಂಥದ್ದು. ಇನ್ನೂ ಒಂದು ವಿಷಯ ಇದೆ, ಇನ್ನೂ ಒಂದು ಅಮೆಂಡ್‌ಮೆಂಟನ್ನು ನಾವು ಮಾಡಿದ್ದಂಥದ್ದನ್ನು ತಾವು ಬಿಟ್ಟುಬಿಟ್ಟಿದ್ದೀರಿ. ಅದೇನೆಂದರೆ 1993 Act proposed amendment to section 196(4) for effecting transfer of Zilla Panchayat staff according to the transfer policy laid down by government, ಅದರಲ್ಲಿ ಬಹಳ ಚರ್ಚೆಯಾಯಿತು. ಏಕೆಂದರೆ ನಮ್ಮ ಗೌರ್ನಮೆಂಟ್ ಸರ್ವೆಂಟ್ಸ್ ಟ್ರಾನ್ಸ್‌ಫರ್‌ಗೆ ನಾವು ಕೊಟ್ಟಾಗ ಯದ್ವಾತದ್ವಾ ಟ್ರಾನ್ಸ್‌ಫರ್ ನಡೆಯುವುದಾದರೆ ಅವರಿಗೆ ಅದರಿಂದ ಹಿಂಸೆಯಾಗುತ್ತದೆ. ಅದರ ಬಗ್ಗೆ ಏನಾದರೂ ಕಾನೂನಿನ ಪ್ರಕಾರ ಕ್ರಮ ಇರಬೇಕು ಎಂದು ಬಹಳ ಚರ್ಚೆ ಆದಾಗ ಈ ಟ್ರಾನ್ಸ್‌ಫರ್ ಪಾಲಿಸಿ ಅಮೆಂಡ್‌ಮೆಂಟನ್ನು ನಾನು ಪ್ರಪೋಸ್ ಮಾಡಿದೆ. ಇವೊತ್ತು ಕೂಡ ಟ್ರಾನ್ಸ್‌ಫರ್ ಪಾಲಿಸಿಯನ್ನು ನೀವು ಮಾಡಬೇಕಾಗುತ್ತದೆ. ಮೊದಲೇ ಗೈಡ್‌ಲೈನ್ಸ್ ಪ್ರಕಾರ ಟ್ರಾನ್ಸ್‌ಫರ್ ಎಂದು ನಾವು ಹೇಳಿದ್ದೇವೆ ಅದರ ಪ್ರಕಾರ ಅದನ್ನು ಉಪಯೋಗಿಸಿ ನಾವು ಟ್ರಾನ್ಸ್‌ಫರ್ ಪಾಲಿಸಿ ಅನ್ವಯಿಸುತ್ತೇವೆ ಎಂದು ನೀವು ಹೇಳಬಹುದು ಆದರೂ ಕೂಡ ನನಗನಿಸುತ್ತದೆ ಈ ಟ್ರಾನ್ಸ್‌ಫರ್ ಪಾಲಿಸಿಯಿಂದ ಶಿಕ್ಷಕರಿಗೆ ಮತ್ತು ಬೇರೆ ಜನರಿಗೆ ರಾಜಕೀಯದಿಂದ ವಿಪರೀತ ಹಿಂಸೆಯಾಗುತ್ತದೆ ಎಂದು. ಅದಕ್ಕೆ ಅವನು ಸರ್ಕಾರಿ ನೌಕರ ಆಗಿರುವುದರಿಂದ ಅವರು ಸಂಬಳ ಕೊಟ್ಟದ್ದಲ್ಲ, ಸರ್ಕಾರ ಸಂಬಳ ಕೊಡುತ್ತದೆ. ಆದಕಾರಣ ಸರ್ಕಾರ ಅವರ ಟ್ರಾನ್ಸ್‌ಫರ್ ಪಾಲಿಸಿ ಯಾವ ರೀತಿ ನಡೆಯಬೇಕು ಎಂಬುದನ್ನು ತೀರ್ಮಾನ ಮಾಡುವ ಹಕ್ಕು ಸರ್ಕಾರಕ್ಕಿದೆಯೇ ಹೊರತು ಆಯಾ ಪಂಚಾಯತ್ ಸಂಸ್ಥೆಗಳಿಗಿಲ್ಲ. ಆದಕಾರಣ ಈ ಟ್ರಾನ್ಸ್‌ಫರ್ ಪಾಲಿಸಿ ಬಗ್ಗೆ ನೀವು ಏನು ಕೈಬಿಟ್ಟಿದ್ದೀರಿ ಅದನ್ನು ಸೇರಿಸಿದರೆ ಬಹಳ ಸಂತೋಷ. ಅದರಿಂದ ನಿಮಗೆ ಅನುಕೂಲವಾಗುತ್ತದೆ. ಇನ್ನೂ ಒಂದು ಮಾತು, ಇದು 3ನೇ ಅಮೆಂಡ್‌ಮೆಂಟ್‌ನಲ್ಲಿ ಸೇರಿಲ್ಲ; ಹಿಂದೆ ಮಾಡಿದಂಥ ಅಮೆಂಡ್‌ಮೆಂಟ್‌ನಲ್ಲಿ ಎಕ್ಸಿಕ್ಯೂಟೀವ್ ಹೆಡ್ ಅಥವಾ ಅಧ್ಯಕ್ಷ ಎಂದು ಒಂದು ಅಮೆಂಡ್‌ಮೆಂಟ್ ಮಾಡಿದ್ದೇವೆ. ಇದರ ಬಗ್ಗೆ ಬಹಳ ಪ್ರಚಾರ ನಡೆಯಿತು. ನನ್ನ ಅಭಿಪ್ರಾಯದಲ್ಲಿ ಆ ಪ್ರಚಾರಕ್ಕೆ ಅವಕಾಶವೇ ಇರಲಿಲ್ಲ. ಆದರೆ ಈ ಅಧ್ಯಕ್ಷರಿಗೆ ಎಕ್ಸಿಕ್ಯೂಟೀವ್ ಹೆಡ್ ಎಂದು ಮಾಡಿಲ್ಲ ಎಂದು ಹೇಳಿ ಅವರ ಅಧಿಕಾರವೆಲ್ಲಾ ತೆಗೆದುಕೊಂಡುಬಿಟ್ಟಿದ್ದೀರಿ, ಅಧಿಕಾರವನ್ನು ಕಡಿಮೆ ಮಾಡಿದ್ದೀರಿ, ಅವರ ಪವರ್ ತೆಗೆದುಹಾಕಿಬಿಟ್ಟಿದ್ದೀರಿ ಎಂದು ಕರ್ನಾಟಕದಲ್ಲಷ್ಟೇ ಅಲ್ಲ ಇಡೀ ಭಾರತ ದೇಶದಲ್ಲೆಲ್ಲಾ ಪ್ರಚಾರ ನಡೆಯಿತು. ಏಕೆಂದರೆ ಅಧ್ಯಕ್ಷ ಎಂದು ಏನು ಇದೆ ಆ ಅಧ್ಯಕ್ಷ ಎಂದರೆ ಎಕ್ಸಿಕ್ಯೂಟೀವ್ ಹೆಡ್. ಅದರಲ್ಲಿ ಎರಡು

ಅಭಿಪ್ರಾಯವಿಲ್ಲ. ಆದರೆ ಎಕ್ಸಿಕ್ಯೂಟೀವ್ ಹೆಡ್ ಎಂಬ ಪದವನ್ನು ನಾವು ಉಪಯೋಗಿಸಿಲ್ಲ ಎಂದು ಇದರ ಬಗ್ಗೆ ವಿಪರೀತ ಪ್ರಚಾರ ನಡೆಯಿತು. ಪ್ರಚಾರ ನಡೆದ ನಂತರ ಈ ಸರ್ಕಾರ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ ಶ್ರೀ ಪಿ.ಆರ್.ನಾಯಕ್ ಎಂಬುವರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿದರು. ಅವರು ಹೊಸಬರೇನಲ್ಲ, 93 ಅಮೆಂಡ್‌ಮೆಂಟ್ ಮಾಡುವಾಗ ನಾನೂ ಅವರನ್ನು ಕನ್ಸಲ್ಟ್ ಮಾಡಿದ್ದೇನೆ. 'ಅವರು ಇದರ ಬಗ್ಗೆ ಒಂದು ಪ್ರಾಮಾಣಿಕವಾದಂಥ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದನ್ನು ಓದುತ್ತೇನೆ,

"On this particular question the Committee was informed on 13.11.1995 that the government wish to have its views. After considering the matter in depth, the Committee came to view that there are no fundamental dissimilarities between 1985 and 1993 Acts. In fact, 1993 Act confers powers not found in the earlier enactment such as the powers to exercise control over the Chief Executive Officers for securing implementation of the decisions of the Zilla Panchayats." ಇದು ಬಹಳ ಮುಖ್ಯವಾದುದು, ಆದುದರಿಂದ ಇದನ್ನು ಇನ್ನೂ ಒಂದು ಸಲ ಓದುತ್ತೇನೆ. ಏಕೆಂದರೆ ಅವರ ಎಕ್ಸ್‌ಪರ್ಟ್ ಕಮಿಟಿಯಲ್ಲಿ ಹೇಳಿದ್ದಾರೆ, ಇದು ನಾನು ಮಂತ್ರಿಯಾಗಿ ಹೇಳುವುದಿಲ್ಲ. ಅವರು ಏನು ಹೇಳುತ್ತಾರೆ ಎಂದರೆ ನಾನು ದೆಹಲಿಗೆ ಅಥವಾ ಎಲ್ಲಿ ಹೋದರೂ ಕೂಡ 'ಏನ್ರಿ ನೀವು ಜನರ ಅಧಿಕಾರವನ್ನು ಕಸಿದುಕೊಂಡು ಅಧಿಕಾರಸ್ಥರಿಗೆ ಕೊಟ್ಟಿದ್ದೀರಿ ಎಂದು ಕೇಳುತ್ತಿದ್ದರು.

ಶ್ರೀ ಡಿ.ಆರ್.ಪಾಟೀಲ್ (ಗದಗ್): ನೀವು ಪ್ರಚಾರ ಎಂದು ಏನು ಹೇಳುತ್ತೀರಿ ಅದು ಪ್ರಚಾರ ಅಲ್ಲ, ಅಪಪ್ರಚಾರ.

ಶ್ರೀ ಎಂ.ವೈಘೋರ್ಪಡೆ: ಇರಲಿ, ನಾನು ನನ್ನ ಭಾಷೆಯಲ್ಲಿಯೇ ಹೇಳಬೇಕಾಗುತ್ತದೆ. ಪ್ರಚಾರ ಎನ್ನುವುದೇ ಒಳ್ಳೆಯದು. ಇದರಿಂದ ಬಹಳ ನೋವಾಗುತ್ತದೆ. ಏಕೆಂದರೆ ಇದು ನನಗಾಗುವ ಪೆಟ್ಟಲ್ಲ, ಕರ್ನಾಟಕಕ್ಕೆ ಪೆಟ್ಟಾಗುತ್ತದೆ. ಅದಕ್ಕೆ ಕಾರಣ ಇದ್ದರೆ ನಾವು ಸಹಿಸಬಹುದು, ವಿನಾಕಾರಣ ಕರ್ನಾಟಕದ ಪ್ರತಿಷ್ಠೆಗೆ ಪೆಟ್ಟಾಗುವ ರಾಜಕೀಯ ಇದರಲ್ಲಿ ನಡೆಯಿತು. ಅದಕ್ಕೋಸ್ಕರ ಇದನ್ನು ಇನ್ನೂ ಒಂದು ಸಲ ಓದಬೇಕಾದ್ದು ಎಂದು ನನಗನಿಸುತ್ತದೆ.

"After considering the matter in depth the Committee came to the view that there were no fundamental

dissimilarities between 1985 and 1993 Acts. In fact, 1993 Act confers powers not found in the earlier enactment such as the power to exercise control over the Chief Executive Officers for securing implementation of the decisions of the Zilla Panchayats." ಅವರಿಗೆ ನಾವು ಎಕ್ಸಿಕ್ಯೂಟೀವ್ ಹೆಡ್ ಎಂದು ಕರೆದರೆ ಅದಕ್ಕೆ ನನ್ನ ಆಕ್ಷೇಪ ಏನೂ ಇಲ್ಲ, ಕರೆಯಬಹುದು ಎಂದು ಹೇಳಿದ್ದಾರೆ. ಆದರೆ ಅದರಿಂದ ಯಾವ ಅಪಾಯ ಆಗಿಲ್ಲ. On the other hand, we have given more powers. ನಿಮ್ಮ ಎಕ್ಸ್‌ಪರ್ಟ್ ಕಮಿಟಿ ಯಾವ ಆಧಾರದ ಮೇಲೆ ಇಷ್ಟೆಲ್ಲಾ ಅಮೆಂಡ್‌ಮೆಂಟ್ಸ್ ಮಾಡಿದ್ದಾರೆ, ಮಾಡುತ್ತಿದ್ದಾರೆ ಎಂದು ಅವರೇ ಹೇಳಿದ್ದಾರೆ. ಇದನ್ನು ಈ ಸಭೆ ಮತ್ತು ಕರ್ನಾಟಕದ ಜನತೆ ಸ್ಪಷ್ಟವಾಗಿ ಗಮನಿಸಬೇಕು Removal of Adhayaksha of gram panchayats, dissolution of gram panchayats.' ಇದರಲ್ಲಿ ಸ್ವಲ್ಪ ಇನ್‌ಕನ್ಸಿಸ್ಟೆನ್ಸಿ ಇದೆ. ನಮ್ಮ ಆ್ಯಕ್ಟ್‌ನಲ್ಲಿ ನಾವು ಡಿವಿಜನಲ್ ಕಮಿಷನರ್ ಮತ್ತು ಅಪೀಲ್ ಟು ಗೌರ್ನಮೆಂಟ್ ಎಂದು ಮಾಡಿದ್ದೇವೆ. ನೀವು ಗ್ರಾಮ ಪಂಚಾಯತಿ ಅಧ್ಯಕ್ಷರನ್ನು ತೆಗೆಯುವಾಗ ಸರ್ಕಾರ ತೆಗೆಯಬಹುದು, ತೆಗೆಯುವಾಗ ಪಂಚಾಯತಿಯ ಸಾಮಾನ್ಯ ಅಭಿಪ್ರಾಯವನ್ನು ತೆಗೆದುಕೊಳ್ಳಬಹುದು ಅಥವಾ ಬಿಡಬಹುದು. ಆದರೆ ಆ ಪಂಚಾಯತ್ ಬಾಡಿ ಏನಿದೆ ಅದನ್ನು ರದ್ದು ಮಾಡುವ ಅಧಿಕಾರವನ್ನು ಜಿಲ್ಲಾಪರಿಷತ್‌ಗೆ ಕೊಟ್ಟುಬಿಟ್ಟಿದ್ದೀರಿ. ಇದು ಸ್ವಲ್ಪ ಇನ್‌ಕನ್ಸಿಸ್ಟೆನ್ಸಿ ಅನಿಸುತ್ತದೆ. ಏಕೆಂದರೆ ಗ್ರೂಪ್ ಪಂಚಾಯತ್ ಮೆಂಬರ್ಸ್ they are more important than the Adhayaksha. ಈ ಅಧ್ಯಕ್ಷರನ್ನು ಸರ್ಕಾರ ತೆಗೆಯುವುದಾದರೆ ಗ್ರೂಪ್ ಪಂಚಾಯತ್ ಹೋಲ್ ಬಾಡಿಯನ್ನು ತೆಗೆಯುವ ಪ್ರಶ್ನೆ ಬಂದಾಗ ಅದನ್ನೂ ಕೂಡ ಸರ್ಕಾರವೇ ಮಾಡಬೇಕಾಗುತ್ತದೆ; ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಇನ್‌ಕನ್ಸಿಸ್ಟೆನ್ಸಿ ಆಗುತ್ತದೆ. ಜಿಲ್ಲಾಪರಿಷತ್ ಮಟ್ಟದಲ್ಲಿ ಮತ್ತು ಎಲ್ಲಾ ಮಟ್ಟದಲ್ಲಿ ಇವೊತ್ತು ವಿಪರೀತ ರಾಜಕೀಯ ನಡೆಯುತ್ತಿದೆ. ನನ್ನದೆ ಸಂಡೂರಿನ ಹಳೆಯ ಕಥೆ ಹೇಳಬೇಕಾದರೆ; ಸೊಂಡೂರು ಪಂಚಾಯತಿಗೆ ರದ್ದು ಮಾಡಲಿಕ್ಕ ಹೊರಟಿದ್ದರು. ಆಗ ಮಾನ್ಯ ನಜೀರ್ ಸಾಬ್ ಅವರು ಮಂತ್ರಿಯಾಗಿದ್ದರು. ಸುದೈವ. ಅವರನ್ನು ನಾನು ಭೇಟಿ ಆಗಬೇಕಾಗಿತ್ತು. ಅವರು ಹೇಳಿದರು. ನಾನು ಅಲೋ ಮಾಡುವುದಿಲ್ಲ ಎಂದು. ಆದರೂ ಕೂಡ ಮಾಡಿದರು. ನಾವು ಕೋರ್ಟಿಗೆ ಹೋಗಬೇಕಾಯಿತು. ಏಕೆಂದರೆ ಜಿಲ್ಲಾ ಪರಿಷತ್ ರಾಜಕೀಯವಾಗಿ ಸೊಂಡೂರಿನಲ್ಲಿ ನಮ್ಮ ಜನ ಅಂತಹ ನಿಶ್ಚಿತ ಮಾಡುವಂತಹ ಜನ ಅಲ್ಲ ಎಂದು ತಮಗೆ ಗೊತ್ತಿದೆ. ಆದರೂ ಕೂಡ ಸೊಂಡೂರ್‌ನಲ್ಲಿ ಡಿಸಾಲ್ವ್ ಮಾಡುವಂತಹ ಪ್ರಯತ್ನ ಮಾಡಿದರು. ಅಂತಹ ಪ್ರಯತ್ನ ಮಾಡುವಂತಹ ಅವಕಾಶ ಇರಬಾರದು. ಸರ್ಕಾರದ ಕಡೆ ಅಧಿಕಾರ ಇಟ್ಟುಕೊಳ್ಳಿ. ನೀವು ಯಾರನ್ನಾದರೂ ಕನ್‌ಸಲ್ಟ್ ಮಾಡಿ. ಆದರೆ ಈ ಡಿಸಲ್ಯೂಷನ್ ಏನು ಇದೆ, ಇದನ್ನು

ಪದೇ ಪದೇ ಮಾಡುವಂತಹದ್ದು ಅಲ್ಲ. ಇದು ಆಟ ಅಲ್ಲ. ಬಹಳ ಗಂಭೀರವಾಗಿ ಸಿಚ್ಯುಯೇಷನ್ ಇದ್ದಾಗ ಮಾತ್ರ ಮಾಡತಕ್ಕದ್ದು. ಆದಕಾರಣ ಯಾವ ರೀತಿ ಪಂಚಾಯತಿ ಅಧ್ಯಕ್ಷರನ್ನು ತೆಗೆಯುವಂತಹ ಅಧಿಕಾರವನ್ನು ಇಟ್ಟುಕೊಂಡಿದ್ದೀರಿ. ಅದೇ ರೀತಿ ಆ ಬಾಡಿಯನ್ನು ರದ್ದು ಮಾಡುವ ಅಧಿಕಾರ ತಮ್ಮ ಕಡೆಯೇ ಇರಲಿ. ಜಿಲ್ಲಾ ಪಂಚಾಯತಿಗೆ ಬೇಡ. ನಿಮಗೆ ಇನ್‌ಕನ್‌ಸಿಸ್ಟೆನ್ಸ್ ಆಗುತ್ತದೆ. ರೆವಿನ್ಯೂ ಆಫೀಸರ್ಸ್ ಸಿಗದಿರುವ ಕಡೆ ಬದಲಾಗಿ ಪಂಚಾಯತ್ ರಾಜ್ ಆಫೀಸರ್ಸ್‌ನ್ನು ಹಾಕಿದ್ದೀರಿ; ಇದು ನನಗೆ ಅರ್ಥ ಆಗುತ್ತದೆ. ಇಲ್ಲಿ ಮಾತ್ರ ಸ್ವಲ್ಪ ತಪ್ಪಾಗಿದೆ ಎಂದು ನನಗೆ ಅನ್ನಿಸುತ್ತದೆ. ಅದನ್ನು ತಮ್ಮ ಕಡೇನೇ ಇಟ್ಟುಕೊಳ್ಳುವುದು ಒಳ್ಳೆಯದು. ಅಂದರೆ ತಮ್ಮ ಮೇಲೆ ತಮ್ಮ ಸರ್ಕಾರದ ಮೇಲೆ ಎಷ್ಟು ವಿಶ್ವಾಸ ಇದೆ ಎಂದು ತೋರಿಸುತ್ತದೆ. ಏಕೆಂದರೆ ಹಳ್ಳಿ ಮಟ್ಟದಲ್ಲಿ ತಮ್ಮ ಗುರಿಯಾಗಬಾರದು. After all, the government at higher level can take considerate decisions. ನಾನು ಆಗಲೇ ಹೇಳಿದೆ. Election related functions are proposed to be entrusted to the State Election Commission in place of Deputy Commissioners. ಅದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಏಕೆಂದರೆ ನಾನು ಸಾಕಷ್ಟು ಕಾಟ ಅನುಭವಿಸಿದ್ದೇನೆ, ಈ ಡೆಪ್ಯುಟಿ ಕಮೀಷನರ್ಸ್ ಕಡೆ ಇರುವುದರಿಂದ. ರಾಜಕೀಯ ಒತ್ತಡ ಇದರಿಂದ ಕಡಿಮೆ ಆಗುತ್ತದೆ. ಒಳ್ಳೆಯ ಕೆಲಸ ಮಾಡಿದ್ದೀರಿ. Constitution of the State Panchayat Council. ಸ್ಟೇಟ್ ಪಂಚಾಯತ್ ಕೌನ್ಸಿಲ್ ಬಗ್ಗೆ ಹೇಳಿದ್ದು ಅದನ್ನೂ ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ರಾಜ್ಯ ಮಟ್ಟದಲ್ಲಿ ಅಂತಹ ಒಂದು ಬಾಡಿ ಇರಬೇಕು. ಇವೆಲ್ಲಾ ಪ್ರಶ್ನೆ ಬಂದಾಗ ಅಲ್ಲಿ ಚರ್ಚೆ ಆಗಿ ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ಒಂದು ತೀರ್ಮಾನಕ್ಕೆ ಬರಲಿಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ನಾನು ಹೇಳಿದೆ. 80 ಅಮೆಂಡ್‌ಮೆಂಟ್ಸ್ ಬಹಳ ದೊಡ್ಡದಾಗಿ ಕಂಡರೂ ಕೂಡ ಇದರಲ್ಲಿ ಇರತಕ್ಕ ವಿಷಯ 7-8 ಇದೆ. ಇದರ ಬಗ್ಗೆ ನಾನು ಆಗಲೇ ಪ್ರಸ್ತಾಪ ಮಾಡಿದ್ದೇನೆ. ಈಗ ಒಂದೆರಡು ಸಲಹೆಗಳನ್ನು ಕೊಡಬೇಕು. ಸಲಹೆ ಎಂದರೆ ರೂಲ್ ಮೇಕಿಂಗ್ ಪವರ್, 1993 ಆಕ್ಟ್‌ನಲ್ಲಿ ಸಾಕಷ್ಟು ಇದೆ. ಅದನ್ನು ದಯವಿಟ್ಟು ನೀವು ಸಂಪೂರ್ಣವಾಗಿ ಉಪಯೋಗಿಸಿ. ಏಕೆಂದರೆ ಆಗಲೇ ಆಸ್ ಪರ್ ಗೈಡ್ ಲೈನ್ಸ್ ಎಂದು ಹೇಳಿದ್ದರಲ್ಲಿ. ಗೈಡ್‌ಲೈನ್ಸ್‌ನಲ್ಲಿ ಇನ್ನೂ ವಿವರವಾಗಿ ಹೇಳಲು ಸಾಧ್ಯ. ಒಂದು ಮ್ಯಾನುಯೆಲ್ ಮಾಡಲಿಕ್ಕೆ ಸಾಧ್ಯ. ಯಾವ ಒಂದು ಯೋಜನೆಯನ್ನು ಯಾವ ರೀತಿಯಿಂದ ಅನುಷ್ಠಾನ ಮಾಡಬೇಕು. ಅದರಲ್ಲಿ ಈ ಮೂರು ಹಂತದ ಪಂಚಾಯತಿಗಳ ಪಾತ್ರ ಏನು? ಇದು ಡೈನಾಮಿಕ್ ಸಿಚುಯೇಷನ್, ಬದಲಾಯಿಸುತ್ತಾ ಹೋಗುತ್ತದೆ. ಆದ ಕಾರಣ ರೂಲ್ ಮೇಕಿಂಗ್ ಪವರ್ ಅನ್ನು ನೀವು ಉಪಯೋಗಿಸಿದರೆ ಆಗ ನೀವು ಪದೇ ಪದೇ ಆಕ್ಟನ್ನು ಬದಲಾಯಿಸುವ ಪ್ರಶ್ನೆ ಬರುವುದಿಲ್ಲ. ನೀವು ಪದೇ ಪದೇ ಆಕ್ಟನ್ನು ಬದಲಾಯಿಸಿದರೆ ಆಗ ಆಕ್ಟನ್ನು ಓದಲಿಕ್ಕೆ ಯಾರೂ ಹೋಗುವುದಿಲ್ಲ. ಈಗ ಎಷ್ಟು ಜನ ಓದಿಕೊಂಡು

ಬಂದಿದ್ದಾರೆ? ಆದ ಕಾರಣ ಈ ಆಕ್ಟ್ ಏನು ಇದೆ, ರೂಲ್ ಮೇಕಿಂಗ್ ಪವರ್‌ನಲ್ಲಿ ಮಾಡಲಿಕ್ಕೆ ಆಗುವುದಿಲ್ಲ ಎಂದಾಗ ಮಾತ್ರ ಆಕ್ಟ್ ಬದಲಾಯಿಸಲಿಕ್ಕೆ ಹೋಗಬೇಕು. ಏಕೆಂದರೆ ರೂಲ್ ಮೇಕಿಂಗ್‌ನಲ್ಲಿ ಕೂಡ ಆ ರೂಲ್ ಮಾಡಿದರೂ ಕೂಡ ಲೆಜಿಸ್ಲೇಚರ್ ಮುಂದೆ ಬರಬೇಕಾಗುತ್ತದೆ. ಅದರಿಂದ ಏನಾದರೂ ತಪ್ಪು ಮಾಡಿದರೆ ಅದನ್ನು ಚರ್ಚೆ ಮಾಡಲಿಕ್ಕೆ ಸಾಕಷ್ಟು ಅವಕಾಶ ಇರುತ್ತದೆ. ಈ ಅಡ್ಮಿನಿಸ್ಟ್ರೇಟೀವ್ ಮ್ಯಾನುಯಲ್ ಏನು ಇದೆ, ಅದನ್ನು ತಯಾರಿಸಿ ವರ್ಷಾವರ್ಷ ಹಳ್ಳಿ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಅವರಿಗೆ ಗೈಡೆನ್ಸ್ ಕೊಡಲಿಕ್ಕೆ ಬಹಳ ಅನುಕೂಲ ಆಗುತ್ತದೆ. ಇನ್ನೊಂದು ಸಣ್ಣ ವಿಷಯ ಇತ್ತು. ಅದು ಲ್ಯಾಟ್ರಿನ್ಸ್ ಬಗ್ಗೆ. ಲ್ಯಾಟ್ರಿನ್ಸ್ ಮಾಡದೇ ಹೋದರೆ ಅವನನ್ನು ತೆಗೆದು ಹಾಕುತ್ತೇವೆ ಎಂದು ಇತ್ತು. ಲ್ಯಾಟ್ರಿನ್ಸ್ ಬಗ್ಗೆ ನಾನು ಪ್ರತಿಪಾದನೆ ಮಾಡಿದಷ್ಟು ಇನ್ನು ಯಾರೂ ಮಾಡಿರಲಿಕ್ಕಿಲ್ಲ. ಆದರೂ ಕೂಡ ಲ್ಯಾಟ್ರಿನ್ಸ್ ಮಾಡದೇ ಇದ್ದರೆ ಅವನ ಮೆಂಬರ್‌ಶಿಫ್ ತೆಗೆದುಹಾಕುತ್ತೇವೆ, ಎಂದಲ್ಲ ಅದಕ್ಕಿಂತ ಮುಖ್ಯವಾದ ವಿಷಯಗಳು ಇವೆ. ಆದ ಕಾರಣ ಬರೇ ಲ್ಯಾಟ್ರಿನ್ಸ್ ಕಡೆ ನಿಮ್ಮ ಕಣ್ಣು ಹೇಗೆ ಹಾಯಿಸಿದಿರಿ ಎಂದು ನನಗೆ ಗೊತ್ತಾಗುವುದಿಲ್ಲ. ಆದಕಾರಣ ಏನೂ ತಪ್ಪಿಲ್ಲದೆ, it cuts both ways. ನೀರು ಇಲ್ಲ, ಮಾಡಲಿಕ್ಕೆ ಆಗುವುದಿಲ್ಲ ಎಂದು ತಕ್ಷಣ ಲ್ಯಾಟ್ರಿನ್ ಇಲ್ಲ ತೆಗೆದು ಹಾಕಲಿಕ್ಕೆ. ಇದ್ದರೂ ಕೂಡ ಏನಪ್ಪ ಕಡ್ಡಾಯವಾಗಿ ಮಾಡಿದ ಮೇಲೆ ಒಂದು ಲ್ಯಾಟ್ರಿನ್ ಮಾಡಿದ ಎಂದು ಹೇಳಿ ಅದೂ ಕೂಡ ಕೀರ್ತಿ ತರುವಂತಹ ಮಾತು ಆಗುವುದಿಲ್ಲ. ಆದ ಕಾರಣ ಇಷ್ಟೆಲ್ಲಾ ಪವರ್ಸ್ ನಿಮ್ಮ ಕಡೆ ಇರುವಾಗ, ಲ್ಯಾಟ್ರಿನ್ಸ್ ಎಲ್ಲರೂ ಮಾಡುತ್ತಿದ್ದಾರೆ. ಅದರ ಬಗ್ಗೆ ಪ್ರಚಾರ ಸಹ ಸಾಕಷ್ಟು ಆಗಿದೆ. ಸಿಂಗಲ್ ಲ್ಯಾಟ್ರಿನ್ಸ್ ಎಲ್ಲೆಲ್ಲಿ ಆಗಲಿಕ್ಕೆ ಸಾಧ್ಯ ಮಾಡುತ್ತಿದ್ದಾರೆ. ಇದನ್ನು ರದ್ದು ಮಾಡಲಿಕ್ಕೆ ಒಂದು ಆಧಾರ ಮಾಡಲಿಕ್ಕೆ ಅವಕಾಶ ಇಲ್ಲ ಎಂದು ಹೇಳಿ ನನಗೆ ಅನ್ನಿಸುತ್ತದೆ. ಆಮೇಲೆ ಕೊನೆಗೆ ಈ ಮಾತು ಕಾಗದ ಬರೆದು ತಮಗೆ ತಿಳಿಸಿದ್ದೇನೆ. To act is more important than to enact. ನಾವು ನೀವು ಸೇರಿ ಎನ್ಯಾಕ್ಟ್ ಮಾಡಿದರೂ ಕೂಡ ಎಷ್ಟರಮಟ್ಟಿಗೆ ರಾಜಕೀಯ ಇಚ್ಛಾಶಕ್ತಿ ಮತ್ತು ಆಡಳಿತದ ದಕ್ಷತೆ ಇರುತ್ತದೆ, ಅದು ಅಷ್ಟರ ಮಟ್ಟಿಗೆ ಅನುಷ್ಠಾನಕ್ಕೆ ಬರುತ್ತದೆ. Therefore, to act is more important than to enact ಎಂಬ ಮಾತು ಇದು ನನ್ನ ಸ್ವಂತದ್ದು ಅಲ್ಲ. ಬಂಗಾಲ್ ಪಂಚಾಯತ್ ರಾಜ್ ಮಿನಿಸ್ಟರ್ ಹೇಳಿದ್ದು. ಆಗ ನಾನು ಪಂಚಾಯತ್‌ರಾಜ್ ಮಂತ್ರಿ ಆಗಿದ್ದೆ. ನನಗೆ ಆ ಮಾತು ಹಿಡಿಸಿತು. ನನ್ನ ಡೈರಿಯಲ್ಲಿ ಬರೆದಿಟ್ಟೆ. ಏಕೆ ಹೇಳುತ್ತಿದ್ದೇನೆ ಎಂದರೆ ಸಾಕಷ್ಟು ಅಧಿಕಾರ ಇದೆ. ಆದರೂ ಕೂಡ ಕರಪ್ಷನ್ಸ್ ಬಗ್ಗೆ ಯಾರೂ ಕೂಡ ತಪ್ಪು ತಿಳಿದುಕೊಳ್ಳಬೇಡಿ; ಕರಪ್ಷನ್ಸ ಜಾಸ್ತಿ ಆಗುತ್ತಿದೆ. ಮೂರರಲ್ಲಿ ಒಂದು ಭಾಗ ಹಣ ಜನಕ್ಕೆ ಮುಟ್ಟುತ್ತಿಲ್ಲ ಎಂದು ಹೇಳಿ ಸರ್ವೆಸಾಮಾನ್ಯವಾಗಿ ಎಲ್ಲರೂ ಮಾತನಾಡುತ್ತಾರೆ. ಕೆಲವು ಕಡೆ ಅರ್ಧ ಕೂಡ ಮುಟ್ಟುವುದಿಲ್ಲ ಎಂದು ಇದೆ. ಒನ್ ಥರ್ಡ್ ಕೊಡದೇ ಹೋದರೆ ಕಾಂಟ್ರಾಕ್ಟೇ ಸಿಗುವುದಿಲ್ಲ. ಕಾಂಟ್ರಾಕ್ಟ್ ಬಗ್ಗೆ ತಾವು ಹೇಳಿದಿರಿ. ಫ್ಯಾಮಿಲಿ ಮೆಂಬರ್ಸ್ ಇರಬಾರದು, ಅದು ಸರಿ. ಆದರೆ ಫ್ಯಾಮಿಲಿ ಮೆಂಬರ್ಸೇ ಇರಬೇಕಾದ್ದು ಇಲ್ಲ. ಅದರಲ್ಲಿ ಭ್ರಷ್ಟಾಚಾರ

ನಡೆಸಲಿಕ್ಕೆ ಆದರೆ ಯಾರ ಮುಖಾಂತರವಾದರೂ ಮಾಡಿಸಬಹುದು. ಆದಕಾರಣ ಇದರಲ್ಲಿ ಐದು ಸಜೆಷನ್ಸ್ ನಾನು ಮಾಡಲಿಕ್ಕೆ ಇಚ್ಛೆ ಪಡುತ್ತೇನೆ. ಕರಪ್‌ಷನ್ಸ್ ತಡೆಗಟ್ಟಬೇಕಾದರೆ ಸ್ವಲ್ಪ ಮಟ್ಟಿಗೆ ಟ್ರಾನ್ಸ್‌ಪರೆನ್ಸಿ ಇರಬೇಕು. ಅಂದರೆ ತಾವು ಎಲ್ಲರಿಗೂ ಬರಹ ಮೂಲಕ ತಿಳಿಸಿ ಬಿಡಿ. ಎಲ್ಲಾ ಕಾಂಟ್ರಾಕ್ಟ್ ವಿವರಗಳು ಬೋರ್ಡಿನಲ್ಲಿ ಹಾಕಬೇಕು. ಯಾವ ಕೆಲಸ ಮಾಡಿದರೂ ಕೂಡ ಯಾವ ರೀತಿ ಅವರು ಎಸ್ಟಿಮೇಟ್ ಮಾಡಿದರು? ಎಷ್ಟು ದಿನದಲ್ಲಿ ಆ ಕೆಲಸ ಆಗಬೇಕು? ಅದಕ್ಕೆ ಖರ್ಚು ಎಷ್ಟು ಎಂದು. ಇದು ಎಲ್ಲರಿಗೂ ಅರ್ಥ ಆಗಬೇಕು. ಆಫೀಸಿಗೆ ಹೋಗಿ ಕೇಳುವ ಪ್ರಶ್ನೆ ಇಲ್ಲ. ಸಾಮಾನ್ಯ ಮನುಷ್ಯ ಅಲ್ಲಿ ಹೋದರೆ ಆ ಕೆಲಸ ಪಂಚಾಯತ್ ರಾಜ್ ವತಿಯಿಂದ ಆಗುತ್ತಿದೆ. ಇದರ ಎಸ್ಟಿಮೇಟ್ ಎಷ್ಟು ಎಂದು ಗೊತ್ತಾಗುತ್ತದೆ. ಅಂದರೆ ಅವರು ಎಸ್ಟಿಮೇಟ್ ಸರಿಯಾಗಿ ಮಾಡಿದ್ದಾರಾ ಅಥವಾ ಇಲ್ಲವಾ? ಎಸ್ಟಿಮೇಟ್ ಪ್ರಕಾರ ಕೆಲಸ ಮಾಡಿದ್ದಾರಾ? ಎಂದರೆ ಸಾಮಾನ್ಯ ಜನತೆಗೆ ಕೂಡ ಇದರಲ್ಲಿ ಆಸಕ್ತಿ ವಹಿಸಲು ಸಾಧ್ಯವಾಗುತ್ತದೆ. ಗ್ರಾಮಸಭೆ ಬಗ್ಗೆ ಹೇಳಿದ್ದೀರಿ. ಅದು ಕೂಡ ನಮ್ಮ ಆಕ್ಟನಲ್ಲಿ 6 ತಿಂಗಳಲ್ಲಿ ಒಂದು ಸಭೆ ಎಂದು ಮಾಡಿದ್ದೀರಿ. ಅದನ್ನೂ ಕೂಡ ತಾವು ಬದಲಾಯಿಸಲಿಲ್ಲ, ಧನ್ಯವಾದಗಳು. ಅದೇ ಗ್ರಾಮಸಭೆ ಇದ್ದು ಉಪಯೋಗ ಏನು? ಇದನ್ನು ಭ್ರಷ್ಟಚಾರದ ವಿರುದ್ಧ ಕೆಲವರಾದರೂ ಹೋರಾಟ ಮಾಡಲಿಕ್ಕೆ ಸಾಧ್ಯ ಆಗಬೇಕು. ಆದಕಾರಣ ಈ ಟ್ರಾನ್ಸ್‌ಪರೆನ್ಸಿ ಏನು ಇದೆ, ಇದು ಬರೇ ಭಾಷಣದಲ್ಲಿ ಅಲ್ಲ. ಆಡಳಿತಾತ್ಮಕವಾಗಿ ನಾವು ಅದನ್ನು ಯಾವ ರೀತಿ ಟ್ರಾನ್ಸ್‌ಫರ್ ಮಾಡಬೇಕು? ಇದರ ಬಗ್ಗೆ ಒಂದು ಚರ್ಚೆ ಇಲ್ಲಿ ನಡೆಯಲಿಕ್ಕೆ ಆಸ್ಪದ ಇದೆ. ಅದನ್ನು ಮಾಡಬೇಕು. ಏಕೆಂದರೆ ಸೊಂಡೂರಿನಲ್ಲಿ ಈ ಪ್ರಯೋಗ ನಾವು ಮಾಡಿದ್ದೇವೆ. ಪ್ರತಿಯೊಂದು ಕೆಲಸಕ್ಕೆ ನಾವು ಬೋರ್ಡಿನಲ್ಲಿ ಬರೆಯುತ್ತಿದ್ದೆವು. ಅದರಿಂದ ಜನಕ್ಕೆ ಒಂದು ಸಮಾಧಾನ ಇದೆ. ಇಲ್ಲದೇ ಹೋದರೆ ಯಾವುದೋ ಒಂದು ಊಹೆ, ಇದಕ್ಕೆ ಸರಿಯಾಗಿ ಕೆಲಸ ನಡೆದಿದೆಯೋ ಇಲ್ಲವೋ ಎಂದು. ಅದಕ್ಕೆ ಈ ಟ್ರಾನ್ಸ್‌ಪರೆನ್ಸಿ. ಇನ್ನೊಂದು ಇನ್ಸ್‌ಪೆಕ್ಷನ್ ನಮ್ಮ 1993ರ ಆಕ್ಟ್‌ನಲ್ಲಿ ಇನ್ಸ್‌ಪೆಕ್ಷನ್ ಪ್ರೊಸೀಜರ್ ಏನು ಇದೆ, ಮೇಲಿನ ಆಫೀಸರ್ಸ್ ಬಂದು ಇನ್ಸ್‌ಪೆಕ್ಟ್ ಮಾಡಬೇಕು ಎಂದು. ಇದರ ಬಗ್ಗೆ 1993ರಲ್ಲಿ ನಾವು ಬಹಳ ಒತ್ತು ಕೊಟ್ಟಿದ್ದೆವು. ತಾವೂ ಕೂಡ ಅದನ್ನು ಹಾಗೆನೇ ಉಳಿಸಿದ್ದೀರಿ. ಇನ್ನೂ ಬಲಪಡಿಸಲಿಕ್ಕೆ ಪ್ರಯತ್ನ ಮಾಡಿದ್ದೀರಿ. ಏಕೆಂದರೆ ಈ ಹೈರಾರ್ಕಿ ಆಫ್ ಆಫೀಸರ್ಸ್, ವರ್ಟಿಕಲ್ ಅವರು ಬಂದು ಇನ್ಸ್‌ಪೆಕ್ಟ್ ಮಾಡುವುದಿಲ್ಲ. ಏಕೆಂದರೆ ಪಂಚಾಯತ್ ರಾಜ್‌ಗೆ ಸಂಬಂಧಪಟ್ಟಿದ್ದು ನಮಗೆ ಸಂಬಂಧಪಟ್ಟಿದ್ದು ಅಲ್ಲ. This is a basic fundamental wrong in the Indian administration. ಏಕೆಂದರೆ ಚೀಫ್ ಇಂಜಿನಿಯರ್ ನಿಂದ ಕೆಳಗೆ ಜೂನಿಯರ್ ಇಂಜಿನಿಯರ್‌ವರೆಗೂ ಅಥವಾ ಆಯಾಯ ಇಲಾಖೆಗೆ ಸಂಬಂಧಪಟ್ಟವರು, ಮೇಲಿನ ಆಫೀಸರ್ ಬಂದು ಕೆಳಗಿನ ಆಫೀಸರ್ ಏನು ಮಾಡುತ್ತಿದ್ದಾನೆ, ಎಂಬುದನ್ನು ನೋಡಿ ಅದನ್ನು ಇನ್ಸ್‌ಪೆಕ್ಟ್ ಮಾಡಿ, ಆ ಇನ್ಸ್‌ಪೆಕ್ಷನ್ ಅನ್ನು ರೆಕಾರ್ಡ್ ಮಾಡದೇ ಹೋದರೆ ಆಗ ಇವರೇ ಇಂಡಿಪೆಂಡೆಂಟ್

ಆಫೀಸರ್ ಆಗುತ್ತಾರೆ. They are not responsible to any higher authority. I am glad that you have not disturbed inspection powers in the Act. But, I request you to act on that. Instruct the officers that you must do so many inspections. ಆ ಇನ್ಸ್‌ಪೆಕ್ಷನ್ ಮಾಡಿದ ಮೇಲೆ ಅದು ಏನಾಯಿತು ಎಂದು ಇನ್ಸ್‌ಪೆಕ್ಷನ್ ಮಾಡಿ ಅದರಲ್ಲಿ ಏನಾದರೂ ತಪ್ಪು ಸಿಕ್ಕರೆ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಿ. ಡಿಪಾರ್ಟ್‌ಮೆಂಟ್‌ಲ್ ಎನ್‌ಕ್ವೈರಿ ಮಾಡಿದರೆ ಇಷ್ಟ ದಿವಸದಲ್ಲಿ ಅದು ಪೂರೈಸಬೇಕು ಎಂದು ಬರೆಯಿರಿ. ಯಾವ ರೀತಿ ಬೇರೆ ವಿಷಯಕ್ಕೆ ಬರೆದಿದ್ದೀರಿ, ಡಿಪಾರ್ಡ್‌ಮೆಂಟಲ್ ಎನ್‌ಕ್ವೈರಿ ಐದೈದು ವರ್ಷ ನಡೆಯುವುದಾದರೆ ಏನು ಪ್ರಯೋಜನ? ಆದಕಾರಣ ಈ ಟ್ರಾನ್ಸ್‌ಪರೆನ್ಸಿ, ಇನ್ಸ್‌ಪೆಕ್ಷನ್, ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಮಾಡಿ. ಅವಶ್ಯಕತೆ ಇದ್ದರೆ ಉಪಲೋಕಾಯುಕ್ತ ತರಹ ಒಂದು ವ್ಯವಸ್ಥೆ ಮಾಡಿ. ಅಲ್ಲಿ ನಡೆದಿರುವ ಅಕ್ರಮ ಏನಿದೆ ಅದು ಕೋರ್ಟಿನಲ್ಲಿ ತೀರ್ಮಾನ ಆಗುವುದಾದರೆ ಆಗಲಿ, ಇಲ್ಲದಿದ್ದರೆ ಹತ್ತುತ್ತು ವರ್ಷ ಆದರೂ ಕೋರ್ಟಿಗೆ ಹೋಗಿ ಏನೂ ಪ್ರಯೋಜನವಾಗುವುದಿಲ್ಲ. You can consider having a upa-lokayukta only for this purpose. ಇಷ್ಟು ಮಾಡಿದರೆ ನಾವು ನೀವು ಮಾಡಿದ ಆಕ್ಟ್ ಸಾರ್ಥಕವಾಗುತ್ತದೆ. ಇಲ್ಲದೇಹೋದರೆ ಭ್ರಷ್ಟಾಚಾರದ ವಿಕೇಂದ್ರೀಕರಣ ಇವರೆಲ್ಲಾ ಸೇರಿ ಮಾಡಿದರು ಎಂದು ನಮ್ಮೆಲ್ಲರ ಮೇಲೆ ಅಪವಾದ ಬರುತ್ತದೆ. ಇದು ಕಾನೂನಿನ ಪ್ರಶ್ನೆಯಲ್ಲ, ರಾಜಕೀಯ ಇಚ್ಛಾಶಕ್ತಿಯ ಪ್ರಶ್ನೆ ಇದೆ. ಮತ್ತು ಆಡಳಿತದ ದಕ್ಷತೆ ಪ್ರಶ್ನೆ ಇದೆ. ಇವೆರಡೂ ತಮಗೆ, ತಮ್ಮ ಸರ್ಕಾರಕ್ಕೆ ಸಾಕಷ್ಟು ಇದೆ ಎಂದು ನಂಬಿ ನಾನು ಈ ಮಾತನ್ನು ಹೇಳಿದ್ದೇನೆ, ವಂದನೆಗಳು.

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಅಧ್ಯಕ್ಷರೇ, ಪಂಚಾಯಿತಿರಾಜ್‌ದ ಈ ಮಸೂದೆಗೆ ಮೂರನೇ ತಿದ್ದುಪಡಿಯನ್ನು ತಂದಿದ್ದೀರಿ. ಇದರಲ್ಲಿ ಸಾಕಷ್ಟು ತಮ್ಮ ಅನುಭವ ಮತ್ತು ಅಧಿಕಾರದಲ್ಲಿದ್ದವರನ್ನು ಕೇಳಿ ಇದನ್ನು ತಂದಿದ್ದೇನೆಂದು ಪ್ರಾಸ್ತಾವಿಕ ಭಾಷಣದಲ್ಲಿ ತಾವು ಹೇಳಿದ್ದೀರಿ. ಆದರೂ ನಮಗೆ ಅನೇಕ ಅನುಮಾನಗಳು ಉಳಿದೇ ಉಳಿಯುತ್ತವೆ. ಮೊದಲನೆಯದಾಗಿ ಹಿರಿಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಶೌಚಾಲಯ ಇಲ್ಲದವರು ಚುನಾವಣೆಗೆ ನಿಲ್ಲಲಿಕ್ಕೆ ಅನರ್ಹರು ಎಂದು ಏನು ಹೇಳಿದ್ದೀರಿ ಈ ಯೋಜನೆಯಲ್ಲಿ ಸರ್ಕಾರ ಶೌಚಾಲಯಗಳನ್ನು ಕೊಟ್ಟು ಸಂಪೂರ್ಣವಾಗಿ ಎಲ್ಲಾ ಬಡವರಿಗೂ ಅದು ತಲುಪುವಂತೆ ಮಾಡಿ ಆಮೇಲೆ ತಿದ್ದುಪಡಿ ತಂದಿದ್ದರೆ ತುಂಬ ಒಳ್ಳೆಯದಾಗುತ್ತಿತ್ತೇನೋ ಎಂಬುದು ನನ್ನ ಅನಿಸಿಕೆ. ಇನ್ನೊಂದು, ಗ್ರಾಮಸಭೆಗಳು. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಅತ್ಯಂತ ಸತ್ವಯುತವಾಗಿರಬೇಕು ಎನ್ನುವುದನ್ನು ತಾವು ಒಪ್ಪಿಕೊಂಡಿದ್ದೀರಿ ಇದು ಇವತ್ತು ಆಗುತ್ತಿಲ್ಲ. ಪ್ರತಿ ಗ್ರಾಮೀಣ ಪ್ರದೇಶದ ಪ್ರಜೆಯೂ ಕೂಡ ಸದಸ್ಯನಾಗಿರುವ ಒಂದು ಗ್ರಾಮಸಭೆಯಲ್ಲಿ ಹೋಗಿ

ಕೂತು ಗ್ರಾಮಕ್ಕೆ ಯಾವ ಕಾಮಗಾರಿಗಳು ಆಗಬೇಕೆಂದು ಕೇಳುವ ಒಂದು ಕ್ರಿಯೆ ಏನಿತ್ತು ಅದು ಇವತ್ತು ಸರಿಯಾಗಿ ನಡೆಯುತ್ತಿಲ್ಲ. ಗ್ರಾಮಸಭೆಗಳು 6 ತಿಂಗಳಿಗೊಮ್ಮೆ ನಡೆಯುವುದನ್ನು ಕಡ್ಡಾಯಪಡಿಸಬೇಕಾಗಿದೆ. ಅದು ಈ ಮೂಲ ನಿಯಮಾವಳಿಯಲ್ಲಿ ಎಲ್ಲೂ ಕೂಡ ಬರುವುದಿಲ್ಲ. ಈಗೇನಾಗಿದೆ ಏನು ಮಾಡಬೇಕಾಗಿದೆ ಎನ್ನುವುದು ಇದೆಯೇ ಹೊರತು ಮಾಡದಿದ್ದರೆ ಏನು ಅನ್ನುವುದು ಇಲ್ಲ. ಅಲ್ಲಿ ಏನಾದರೂ ನಿರ್ದಿಷ್ಟಪಡಿಸಬೇಕಲ್ಲಾ. 6 ತಿಂಗಳಿಗೊಮ್ಮೆ ಹೋಗಿ ಗ್ರಾಮದಲ್ಲಿ ಕೂತು ಗ್ರಾಮಸ್ಥರನ್ನು ಸೇರಿಸಿ ಟಾಂಟಾಂ ಹೊಡೆಸಿ ಅದನ್ನು ಮಾಡದೇ ಹೋದರೆ ಗ್ರಾಮಸಭೆ ಅಧ್ಯಕ್ಷನಿಗೆ ಕಾರ್ಯದರ್ಶಿಗೆ ಏನು ಶಿಕ್ಷೆ ಅನ್ನುವುದು ಇಲ್ಲವೇ ಇಲ್ಲ. ಈಗ ವರದಿಯನ್ನು ತರಿಸಿ ಬೇಕಾದರೆ. ರಾಜ್ಯದಲ್ಲಿ ಎಷ್ಟು ಗ್ರಾಮಪಂಚಾಯಿತಿಗಳು 6 ತಿಂಗಳಿಗೊಮ್ಮೆ ಎಷ್ಟು ಗ್ರಾಮಸಭೆಗಳನ್ನು ನಡೆಸಿವೆ ಎನ್ನುವುದಕ್ಕೆ ಉಲ್ಲೇಖವೇ ಇಲ್ಲ. ಬೇಕಾಬಿಟ್ಟಿಯಾಗಿ ನಡೆಯುತ್ತಿವೆ. ಕೆಲವು 8 ತಿಂಗಳಿಗೆ ನಡೆಯುತ್ತದೆ ಕೆಲವು ವರ್ಷಕ್ಕೊಂದು ನಡೆಸುತ್ತಿದ್ದಾರೆ ಕೆಲವು ನಡೆಯದೆ ಇರುವಂಥವು, ಬಹುಶಃ ಚುನಾವಣೆ ಆದನಂತರ ಮೊದಲನೇ ಗ್ರಾಮಸಭೆ ನಡೆದಿದೆ. ಆಮೇಲೆ ನಡೆಯಲೇ ಇಲ್ಲ. ಇಂತಹ ಪಂಚಾಯಿತಿಗಳು ಅನೇಕವು ಇವೆ. ಇದನ್ನು ಕಡ್ಡಾಯಗೊಳಿಸಿದಾಗ ಮಾತ್ರ ಅರ್ಥ ಬರುತ್ತದೆ. ಮತ್ತು ಗ್ರಾಮಸಭೆಗಳಲ್ಲಿ ಏನನ್ನು ಹೇಳಬೇಕು ಎನ್ನುವುದನ್ನೂ ಕೂಡ ರೂಲ್ಸ್‌ನಲ್ಲಾದರೂ ಸ್ಪಷ್ಟಪಡಿಸಬೇಕಾಗುತ್ತದೆ. ವರದಿಯನ್ನು ಯಾವರೀತಿ ಓದಬೇಕು ಅದರಲ್ಲಿ ಯಾವ್ಯಾವ ಅಂಶಗಳು ಇರಬೇಕು ಎಂಬ ಫಾರ್ಮ್ಯಾಟನ್ನು ಹಾಕಿಕೊಟ್ಟರೆ ತುಂಬ ಒಳ್ಳೆಯದಾಗುತ್ತದೆ. ಅಧ್ಯಕ್ಷರೇ, ನನ್ನ ಆಲೋಚನ ಇಷ್ಟೇನೆ 6 ತಿಂಗಳ ಕಾಲದಲ್ಲಿ ಪಂಚಾಯಿತಿಯಲ್ಲಿ ಯಾವ್ಯಾವ ಕಾಮಗಾರಿಗಳನ್ನು ಮಾಡಿದ್ದೇವೆ ಅವುಗಳಿಗೆ ಎಷ್ಟೆಷ್ಟು ಹಣವನ್ನು ವ್ಯಯ ಮಾಡಿದ್ದೇವೆ ಎಷ್ಟು ಅಳತೆ ಮತ್ತು ಏನೇನು ಸರಂಜಾಮುಗಳನ್ನು ಅಲ್ಲಿ ಉಪಯೋಗಿಸಿದ್ದೇವೆ ಇಂತಹ ಅನೇಕ ಮಾಹಿತಿಗಳನ್ನು ಗ್ರಾಮ ಸಭೆಗಳಿಗೆ ಕಡ್ಡಾಯವಾಗಿ ಕೊಟ್ಟಾಗ ಮಾತ್ರ ಸಭೆಯ ಪ್ರತಿ ಸದಸ್ಯನೂ ಅದನ್ನು ನೋಡಿ ನೀನು ಇದನ್ನು ಉಪಯೋಗಿಸಲಿಲ್ಲ ಇಲ್ಲಿ ಕಳಪೆಯಾಗಿದೆ ಏಕೆಂದರೆ ಪ್ರತಿನಿತ್ಯ ಆತ ನೋಡುತ್ತಾ ಇರುತ್ತಾನೆ. ಇದನ್ನು ಕಡ್ಡಾಯಪಡಿಸುವುದು ತುಂಬ ಒಳ್ಳೆಯದು. ಹಾಗೆ ದುರ್ನಡತೆ ಬಗ್ಗೆ ತಾವೊಂದು ತಿದ್ದುಪಡಿ ತಂದಿದ್ದೀರಿ. ದುರ್ನಡತೆ ಯಾವುದು ಅದನ್ನು ನಿರ್ಧಾರ ಮಾಡುವುದು ಹೇಗೆ ಅದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಏಕೆಂದರೆ ಯಾವುದೋ ರಾಜಕೀಯ ಕಾರಣಕ್ಕೋಸ್ಕರ ಏನೋ ಕುಡಿದುಬಂದಿದ್ದ ಎಂದು ಮೆಜಾರಿಟಿ ಇರುವ ಪಕ್ಷ ಅವನ ಅನರ್ಹತೆಗೆ ನಿರ್ಣಯ ಮಾಡಿಬಿಟ್ಟರೆ ತುಂಬಾ ಕಷ್ಟವಾಗುತ್ತದೆ. ಅನಾವಶ್ಯಕವಾಗಿ ಒಬ್ಬ ಸದಸ್ಯನ ಹಕ್ಕಿಗೆ ಚ್ಯುತಿಯಾಗುವ ಸಂದರ್ಭಗಳು ಇಲ್ಲಿ ಬರಬಾರದು. ಇನ್ನೊಂದು, ತಾಲ್ಲೂಕುಪಂಚಾಯಿತಿಯಲ್ಲಿ ಉಪಸಮಿತಿಗಳು ಮೂರಿವೆ; ಆ ಮೂರರಲ್ಲಿ ಎರಡಕ್ಕೆ ಅಧ್ಯಕ್ಷ - ಅಧ್ಯಕ್ಷನಾಗಿರುತ್ತಾನೆ ಒಂದರಲ್ಲಿ ಉಪಾಧ್ಯಕ್ಷ - ಅಧ್ಯಕ್ಷನಾಗಿರುತ್ತಾನೆ. ಇವುಗಳಲ್ಲಿ ಒಂದರಲ್ಲಾದರೂ ಸದಸ್ಯ ಅಧ್ಯಕ್ಷನಾಗುವ ಹಾಗೆ ಮಾಡಿದರೆ ತುಂಬ ಒಳ್ಳೆಯದು. ಉಪಸಮಿತಿಯಲ್ಲಿ ಅಧ್ಯಕ್ಷನಾಗಲು ಸದಸ್ಯನಿಗೆ ಚಾನ್ಸೂ

ಇರುವುದಿಲ್ಲ. ಜಿಲ್ಲಾಪಂಚಾಯಿತಿಗಳಲ್ಲಿ ಸದಸ್ಯ ಅಧ್ಯಕ್ಷನಾಗಲು ಬರುತ್ತದೆ. ಉಪಸಮಿತಿಗಳಲ್ಲಿ ಒಂದರಲ್ಲಾದರೂ ಸದಸ್ಯ ಅಧ್ಯಕ್ಷನಾಗಲು ಬದಲಾವಣೆ ಮಾಡುವುದು ಒಳ್ಳೆಯದು ಎಂಬುದು ನನ್ನ ಸಲಹೆ. ಇನ್ನೊಂದು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ ಪಂಚಾಯಿತ್‌ರಾಜ್ ಸಂಸ್ಥೆಗಳು ಸ್ಥಳೀಯ ಸ್ವಯಂ ಸರ್ಕಾರದ ಘಟಕಗಳಂತೆ ಕಾರ್ಯನಿರ್ವಹಿಸತಕ್ಕದ್ದೆಂಬುದನ್ನು ಅಧಿನಿಯಮದ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ಸೂಚಿಸುವಂತೆ ಮಾಡುವುದು ಎಂದು. ಸರ್ಕಾರಕ್ಕೆ ಏನೆಲ್ಲಾ ಅಧಿಕಾರ ಇದೆ ಎಂಬುದು ನನಗಂತೂ ಅನಿಸುವುದಿಲ್ಲ. ಏಕೆಂದರೆ ನೇಮಕಾತಿಯೇ ಇಲ್ಲ. ತಮ್ಮ ಬಳಿನೇ ನಾನು ಬಂದು ಒಬ್ಬ ಇಂಜಿನಿಯರನ್ನು ಕೊಡಿ ಅಂದರೆ ನೀವು ಉದಾಸಿಯವರ ಕಡೆ ನೋಡಬೇಕಾಗುತ್ತದೆ. ಪಂಚಾಯತ್‌ರಾಜ್ ವ್ಯವಸ್ಥೆಗೆ ಏನಾದರೂ ನೇಮಕಾತಿ ವ್ಯವಸ್ಥೆ ಅದರದ್ದೇ ಆದದ್ದು ಇರಬೇಕಾಗುತ್ತದೆ. ಇಲ್ಲದಿದ್ದರೆ ಇವತ್ತು ಎಲ್ಲವೂ ಕೂಡ ನೀವು ತಾಲ್ಲೂಕು ಜಿಲ್ಲಾಪಂಚಾಯಿತಿಗಳನ್ನು ನೋಡಿ, ಅಲ್ಲಿ ಸಿಬ್ಬಂದಿ ಕೊರತೆ ವ್ಯಾಪಕವಾಗಿದೆ. ನಾಲ್ಕನೇ ದರ್ಜೆ ಜವಾನನಿಂದ ಹಿಡಿದು ಪ್ರತಿಯೊಂದು ಹುದ್ದೆಯೂ ಖಾಲಿ ಇವೆ. ಬಿಡಿಒ ಹುದ್ದೆ ಖಾಲಿ ಇದೆ ಕೆಲವು ಕಡೆ ಅಕೌಂಟೆಂಟ್ಸ್ ಇಲ್ಲ ಇದಕ್ಕೆ ಸರ್ಕಾರದಲ್ಲಿ ಏನಾದರೂ ಒಂದು ವ್ಯವಸ್ಥೆ ಮಾಡಬೇಕಾಗುತ್ತದೆ. ಅಥವಾ ಆಕ್ಟ್‌ನಲ್ಲೇ ಇದನ್ನು ತಂದು ಆ ಸಂಸ್ಥೆಗಳು ನೇಮಕಾತಿಗೆ ಅವಕಾಶ ಮಾಡಿಕೊಳ್ಳುವುದು ಅಥವಾ ಸರ್ಕಾರದ ಮಟ್ಟದಲ್ಲಿ ಆ ಸಂಸ್ಥೆಗಳಿಗೇ ರಿಕ್ರೂಟ್ ಮಾಡುವಂಥದ್ದು ತುಂಬ ಒಳ್ಳೆಯದು. ಈಗ ಜಿಲ್ಲಾಪಂಚಾಯತಿ, ತಾಲ್ಲೂಕುಪಂಚಾಯಿತಿಯ, ಅಧಿನಿಯಮಗಳಲ್ಲಿ ಏನಿದೆ ಅಂದರೆ ಉಪಸಮಿತಿಯಲ್ಲಾಗುವ ನಿರ್ಣಯಗಳು ಪೂರ್ಣಬಾರಿಗೆ ಸಭೆಯಲ್ಲಿ ಬಂದು ಚರ್ಚೆಯಾಗಿ ಅನಂತರವೇ ಕಾರ್ಯರೂಪಕ್ಕೆ ಬರುವಂಥದ್ದು. ಇವತ್ತು ಹಾಗಿಲ್ಲ. ನಿಯಮಾವಳಿಯಲ್ಲಿ ಅದಿಲ್ಲವೇ ಇಲ್ಲ. ಜಿಲ್ಲಾ ತಾಲ್ಲೂಕುಪಂಚಾಯಿತಿಗಳಲ್ಲಿ ಇವರ ಪರಿಸ್ಥಿತಿ ಏನಾಗಿದೆ ಅಂದರೆ ಉಪಸಮಿತಿಗಳಲ್ಲಿ ಮೂರು ಜನ ಕುಳಿತುಕೊಳ್ಳುವುದು ಅಧಿಕಾರಿಗಳು ಸೇರಿಕೊಳ್ಳುವುದು ಒಂದು ನಿರ್ಣಯ ಪಾಸ್ ಮಾಡಿಸಿಬಿಡುತ್ತಾರೆ ಮಾರನೇ ದಿವಸವೇ ಇಂಪ್ಲಿಮೆಂಟ್ ಮಾಡುತ್ತಾರೆ ಅಥವಾ ಮೊದಲೇ ಮಾಡಿರುವುದನ್ನು ತಂದು ಅಲ್ಲಿಟ್ಟು ಇದರಿಂದಾಗಿ ಅವಿದ್ಯಾವಂತರು, ಹೆಚ್ಚು ಜ್ಞಾನ ಇಲ್ಲದಿರುವವರೂ ಕೂಡ ಆಯ್ಕೆಯಾಗಿ ಹೋಗಿದ್ದಾರೆ. ಇದರ ದುರ್ಲಾಭ ಆಗುತ್ತಿದೆ ಆ ಸಂಸ್ಥೆಗಳಲ್ಲಿ. ಇದನ್ನು ತಡೆಯುವುದಕ್ಕಾಗಿ ಪೂರ್ಣಬಾಡಿಗೆ ಅದು ಬಂದು ಚರ್ಚೆಯಾದ ನಂತರವೇ ಅದು ಇಂಪ್ಲಿಮೆಂಟಾಗುವ ಹಾಗೆ ನಿಯಮಾವಳಿಯಲ್ಲಿ ತಿದ್ದುಪಡಿ ತರುವುದು ತುಂಬ ಒಳ್ಳೆಯದು. ಉಪಸಮಿತಿ ಸಭೆಗಳಲ್ಲಿ ಕೋರಂ ವ್ಯವಸ್ಥೆ ಏನೂ ಕೂಡ ಇಲ್ಲ. ಎಷ್ಟು ಜನ ಇದ್ದರೆ ಮಾತ್ರ ಸಭೆ ನಡೆಸಬೇಕೆನ್ನುವುದು ಇಲ್ಲ. ಬಹಳ ಪ್ರಮುಖವಾಗಿರುವಂತಹ ಅನೇಕ ನಿರ್ಣಯಗಳು ಇಲ್ಲಿ ಆಗುತ್ತವೆ. ಇಬ್ಬರಿದ್ದರೂ ನಿರ್ಣಯಗಳು ಪಾಸಾಗುತ್ತಿವೆ. ಅದು ಮೇನ್‌ಬಾಡಿಗೆ ಬರದೇನೇ ಇಂಪ್ಲಿಮೆಂಟಾಗಿರುವಂತಹ ಅನೇಕ ನಿದರ್ಶನಗಳು ಶಿವಮೊಗ್ಗ ಜಿಲ್ಲಾ ಪರಿಷತ್ತಿನಿಂದ ಹಿಡಿದು ಅನೇಕ ಜಿಲ್ಲಾಪರಿಷತ್ತುಗಳಲ್ಲಿ ಸಾಕಷ್ಟು ಸಮಸ್ಯೆ ಉಂಟು ಮಾಡಿವೆ. ಹೀಗಾಗಿ ನಿಯಮಾವಳಿಯಲ್ಲೇ ಕೋರಂ ವ್ಯವಸ್ಥೆ ಬಗ್ಗೆ

ತೋರಿಸುವುದು ಒಳ್ಳೆಯದು. ಆಮೇಲೆ ಅನೇ ಲಾಖೆಗಳನ್ನು ಬೇರೆಬೇರೆ ಸಂಸ್ಥೆಗಳಿಗೆ ಮಾಡಿದ್ದೀರಿ.

ಮಾನ್ಯ ಸದಸ್ಯರು: ಸದನದೊಳಕ್ಕೆ ಫೋನ್ ತರಬಾರದು ಎಂದು ಹಿಂದೆ ಹೇಳಿದ್ದೀರಿ ಆದರೆ ಈಗ ಸೆಲ್ಯುಲರ್ ಫೋನ್‌ನ ರಿಂಗ್ ಸದ್ದು ಬರುತ್ತಿದೆ, ಕೇಳಿ, ಏನಿದು?

ಉಪಾಧ್ಯಕ್ಷರು: ಹೌದು ಯಾರೂ ತರಬಾರದು.

5.40 ಪಿ.ಎಂ

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಸನ್ಮಾನ್ಯ ಉಪಾಧ್ಯಕ್ಷರೆ, ಸದನಕ್ಕೆ ಫೋನ್ ತರಬಾರದು ಎಂದು ಕಳೆದ ಸಾರಿ ಸಭಾಧ್ಯಕ್ಷರು ಹೇಳಿದ್ದರು. ಆದರೆ ಇವತ್ತು ಫೋನಿನ ರಿಂಗ್ ಶಬ್ದ ಬರುತ್ತಾ ಇದೆ ನೋಡಿ, ಇದು ಏನಿದು? ಸದನಕ್ಕೆ ಫೋನ್ ತರುವುದು ಅಂದರೆ, ಇದರಲ್ಲಿ ಅರ್ಥವಿಲ್ಲ. ಮೊಬೈಲ್ ಫೋನ್, ಸೆಲ್ಯೂಲಾರ್ ಫೋನ್, ಒಂದು ಸಲ ಸದನಕ್ಕೆ ಫೋನ್ ತರಬಾರದು ಎಂದು ತೀರ್ಮಾನ ಆದಮೇಲೆ ಯಾರಾದರೂ ಸರಿ ಫೋನ್ ತರಬಾರದು. ಅವರು ತಂದಿದ್ದರೆ ಹೊರಗಡೆ ಹೋಗಿ ಮಾತನಾಡಿ ಬರಲಿ.

ಉಪಾಧ್ಯಕ್ಷರು: ಸದನಕ್ಕೆ ಫೋನ್ ಯಾರೂ ತರಬಾರದು.

ಶ್ರೀ ಜೆ.ಸಿ.ಮಾಧುಸ್ವಾಮಿ: ಅದು ಫೋನ್ ಯಾರದ್ದೋ, ಗ್ರಹಚಾರಕ್ಕೆ ಅವರಿಗೆ ಫೋನ್ ಆಫ್ ಮಾಡುವುದಕ್ಕೆ ಬರುತ್ತಾ ಇಲ್ಲ. ಆಫ್ ಮಾಡವುದಕ್ಕೆ ಬರದೇ ಇದ್ದ ಕಾರಣ ಇಲ್ಲಿಗೆ ತಂದರು.

ಉಪಾಧ್ಯಕ್ಷರು: ಆಯಿತು, ಆ ಫೋನ್ ತೆಗೆದುಇಟ್ಟು ಬಿಡಿ. ಹೊರಗೆ ಕಳುಹಿಸಿ. ಆಯಿತು, ಜ್ಞಾನೇಂದ್ರ ಅವರೇ, ತಾವು ಮುಂದುವರೆಸಿ. ಈಗಾಗಲೇ ಒಮ್ಮೆ ಅಧ್ಯಕ್ಷರು ಸದನದ ಒಳಗ ಫೋನ್ ತರಬಾರದು ಎಂದು ರೂಲಿಂಗ್ ಕೊಟ್ಟಿದ್ದಾರೆ. ಆ ಪ್ರಕಾರ ಎಲ್ಲರೂ ನಡೆದುಕೊಳ್ಳಬೇಕು. ದಯಮಾಡಿ ಎಲ್ಲರೂ ಆ ರೀತಿ ನಡೆದುಕೊಳ್ಳಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಲ್ಲಿ ರಿಂಗ್ ಆಗುತ್ತಾ ಇದೆ, ಅದನ್ನು ಆಫ್ ಮಾಡುವುದಕ್ಕೆ ಗೊತ್ತಿಲ್ಲ.

ಶ್ರೀ ಹೆಚ್.ಶಿವಪ್ಪ: ಸದನಕ್ಕೆ ಫೋನ್ ತಂದರೆ ಯಾವ ರೀತಿ ಪರಿಣಾಮ ಆಗುತ್ತದೆ ಎಂದು ಗೊತ್ತಾದರ ಅವರು ತರುವುದನ್ನು ಬಿಡುತ್ತಾರೆ. ಬರೀ ಹೇಳಿದರೆ ಆಗುವುದಿಲ್ಲ, ಅದರ ಪರಿಣಾಮ ಏನು ಎಂಬುದು ಗೊತ್ತಾದರೆ ಅವರು ತರುವುದಿಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಸನ್ಮಾನ್ಯ ಉಪಾಧ್ಯಕ್ಷರೆ, ಸಭೆಗೆ ಬರಬೇಕು ಎಂದು ಇಟ್ಟುಕೊಳ್ಳಿ, ಆ ಸಮಯದಲ್ಲಿ ಲಕ್ಷ ಹೊಡೆದುಬಿಡುತ್ತವೆ. ಓಡಾಡುವುದಕ್ಕೆ

ಆಗುವುದಿಲ್ಲ, ಆ ಸಮಯದಲ್ಲಿ ದೊಣ್ಣೆ ಹಿಡಿದುಕೊಂಡು ಓಡಾಡಬೇಕಾಗುತ್ತದೆ; ಆದರೆ ಸಭೆಯಲ್ಲಿ ದೊಣ್ಣೆ ಅಲೋ ಮಾಡುವುದಿಲ್ಲ ಕೈಯಲ್ಲಿ ಅವರನ್ನು ಹಿಡಿದುಕೊಂಡು ಬಂದು ಕೂರಿಸುತ್ತಾರೆ. ಅಂದರೆ We have to maintain certain sanctity inside the House. ಇದೆಲ್ಲಾ ಸಭೆಗೆ ತರಬಾರದು, ಇದನ್ನು ಪರಿಗಣಿಸಬೇಡಿ. ಈ ರೀತಿ ಮಾಡಬಾರದು.

ಉಪಾಧ್ಯಕ್ಷರು: ತರಬಾರದು ಎಂದು ಹೇಳಿದ್ದಾರೆ.

ಶ್ರೀ ಉಮೇಶ್.ವಿ.ಕತ್ತಿ: ತಂದವರು ಬೇರೆ, ಅದನ್ನು ಬಿಟ್ಟು ಹೋಗಿದ್ದಾರೆ, ಅದನ್ನು ಇವರಿಗೆ ಆಫ್ ಮಾಡುವುದಕ್ಕೆ ಬರುತ್ತಾ ಇಲ್ಲ.

ಶ್ರೀ ಹೆಚ್.ಡಿ.ಬಸವರಾಜ್: ಈಗ ಅದನ್ನು ಹೊರಗಡೆ ಹಾಕಿಸಿ, ಪುನಃ ಅದು ಬಡಿದುಕೊಳ್ಳುತ್ತಾ ಇದೆ,....

(ಗೊಂದಲ)

ಶ್ರೀ ವಾಟಾಳ್ ನಾಗ್‌ರಾಜ್: ಸನ್ಮಾನ್ಯ ಉಪಾಧ್ಯಕ್ಷರೇ, ಆ ಫೋನ್ ಯಾರದ್ದು ಎಂದು ಗೊತ್ತಾಗಿಲ್ಲ, ಅದನ್ನು ತಾವು ತಮ್ಮ ವಶಕ್ಕೆ ತೆಗೆದುಕೊಳ್ಳಿ. ದಯವಿಟ್ಟು ತಮ್ಮ ವಶಕ್ಕೆ ತೆಗೆದುಕೊಂಡು ಇಟ್ಟುಕೊಳ್ಳಿ. ನಂತರ ಅದು ಯಾರದ್ದು ಎಂದು ಗೊತ್ತಾಗುತ್ತದೆ. ಉಪಾಧ್ಯಕ್ಷರೇ, ಆ ಫೋನ್ ತರಿಸಿ, ಏನು ಇದು ಹುಡುಗಾಟದ ಮಾತಾ? ಈ ಸಭೆಗೆ ಕೆಲವು ನಿಯಮಾವಳಿಗಳು ಇದೆ, ಆ ನಿಯಮಾವಳಿಗಳೆ ಉಲ್ಲಂಘನೆ ಆಗುತ್ತಿದೆ.

ಉಪಾಧ್ಯಕ್ಷರು: ಆಗ ಬಹುದು. ಸನ್ಮಾನ್ಯ ಅರಗ ಜ್ಞಾನೇಂದ್ರ ಅವರೇ, ತಾವು ಮುಂದುವರೆಸಿ.

ಶ್ರೀ ಅರಗ ಜ್ಞಾನೇಂದ್ರ: ಈ ಫೋನನ್ನು ಸೀಜ್ ಮಾಡುವುದಕ್ಕೆ ತಾವು ಆದೇಶ ಕೊಡುವುದು ತುಂಬಾ ಒಳ್ಳೆಯದೆಂದು ನನಗೆ ಅನ್ನಿಸುತ್ತದೆ.

ಶ್ರೀ ಹೆಚ್.ಡಿ.ಬಸವರಾಜ್: ಈ ಫೋನ್ ತೆಗೆದುಕೊಂಡು ತಮ್ಮ ಬಳಿ ಇಟ್ಟುಕೊಳ್ಳಿ. ಅದು ಉತ್ತಮವಾಗುತ್ತದೆ. ಇಲ್ಲಾ ಅಂದರೆ ಅದು ಮತ್ತೆ ಮತ್ತೆ ಬಡಿದುಕೊಳ್ಳುತ್ತಾ ಇರುತ್ತದೆ.

ಉಪಾಧ್ಯಕ್ಷರು: ಆಯಿತು, ತಾವು ಮುಂದುವರೆಸಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ಬೇರೆ ಏನಾದರೂ ಇದ್ದರೆ ನಮ್ಮ ಗತಿ ಏನು? ಆದ್ದರಿಂದ ದಯಮಾಡಿ ತಾವು ತಮ್ಮ ಬಳಿ ತರಿಸಿ ಇಟ್ಟುಕೊಳ್ಳಿ.

ಉಪಾಧ್ಯಕ್ಷರು: ತರಿಸುತ್ತೇನೆ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ಅದರಿಂದ ಏನಾದರೂ ಆಗಲಿ ಅನ್ನುವುದು ಇದ್ದರೆ, ನಮ್ಮದೇನೂ ಅಭ್ಯಂತರವಿಲ್ಲ.

ಉಪಾಧ್ಯಕ್ಷರು: ನೋಡಿ ನೀವು ಈ ರೀತಿ ಮಾತನಾಡಬೇಡಿ, ತರಿಸುವುದಕ್ಕೆ ಹೇಳಿದ್ದೇನೆ ಎಂದ ಮೇಲೆ ತಾವು ತಿಳಿದುಕೊಳ್ಳಬೇಕು.

ಶ್ರೀ ಅರಗ ಜ್ಞಾನೇಂದ್ರ: ಸನ್ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಯಾವ ಯಾವ ಇಲಾಖೆಗಳು ಯಾವ ಯಾವ ಸಂಸ್ಥೆಯ ಅಧೀನದಲ್ಲಿ ಬರಬೇಕು ಎಂದು ನಿರ್ಧಾರ ಮಾಡುವಾಗ ಸ್ವಲ್ಪ ಆಲೋಚನೆ ಮಾಡುವಂತಹದ್ದು ತುಂಬಾ ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ, ಆರೋಗ್ಯ ಇಲಾಖೆಗೆ ಸಂಬಂಧಪಟ್ಟಿದ್ದನ್ನೆಲ್ಲಾ ತಾಲ್ಲೂಕು ಪಂಚಾಯಿತಿಗೆ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಅದು ಜಿಲ್ಲಾ ಪಂಚಾಯಿತಿಯಲ್ಲಿ ಇರತಕ್ಕಂತಹದ್ದು ತುಂಬಾ ಒಳ್ಳೆಯದು. ಇನ್ನು ರಸ್ತೆಗಳ ವಿಷಯದ ಬಗ್ಗೆ ಹೇಳಬೇಕು ಎಂದರೆ, ಯಾವ ರಸ್ತೆಗಳು ತಾಲ್ಲೂಕು ಪಂಚಾಯಿತಿಗೆ ಬರುತ್ತದೆ, ಯಾವ ರಸ್ತೆಗಳು ಜಿಲ್ಲಾ ಪಂಚಾಯಿತಿಗೆ ಎಂಬುದು ಗೊತ್ತೇ ಇಲ್ಲ. ಆದುದರಿಂದ ಅದನ್ನು ಎಲ್ಲಾದರು ಒಂದು ಕಡೆ ತಂದು ಸ್ಟೀಮ್ ಲೈನ್ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಇದನ್ನು ಜಿಲ್ಲಾ ಪರಿಷತ್ ರೋಡು, ತಾಲ್ಲೂಕು ಪಂಚಾಯಿತಿ ರೋಡ್ ನೋಟಿಫಿಕೇಷನ್ ಮಾಡುವಂತಹದ್ದು ಮೊದಲು ಮಾಡಬೇಕಾಗುತ್ತದೆ. ತಾಲ್ಲೂಕು ಪಂಚಾಯಿತಿಗಳು ಯಾವ ರಸ್ತೆಗಳ ನಿರ್ವಹಣೆ ಮಾಡಬೇಕು, ಅದಕ್ಕೆ ಹಣ ಹೇಗೆ ಇಟ್ಟುಕೊಳ್ಳಬೇಕು ಎನ್ನುವಂತಹದ್ದು ಎಲ್ಲೂ ಕೂಡ ಇಲ್ಲ. ಇದನ್ನು ತಾವು ಮಾಡಿದರೆ ಅದಕ್ಕೆ ಒಂದು ಶಕ್ತಿಯನ್ನು ಕೊಟ್ಟ ಹಾಗೆ ಆಗುತ್ತದೆ. ಇನ್ನೊಂದು ಪಂಚಾಯಿತಿಗಳು ಮಾಡಿರತಕ್ಕಂತಹ ಕಾಮಗಾರಿಗಳು. ಏಕೆಂದರೆ ಇದು ಬಹಳ ಕಷ್ಟಕ್ಕೆ ಇಟ್ಟುಕೊಂಡಿದೆ, ಅಂದರೆ ಒಂದು ಕಾಮಗಾರಿ ಮಾಡಬೇಕು ಎಂದು ಹೇಳಿ ಆ ಎಸ್ಟಿಮೇಟ್ ತಯಾರು ಮಾಡುವುದಕ್ಕಾಗಿ ತಾಲ್ಲೂಕು ಮಟ್ಟದ ಜೂನಿಯರ್ ಇಂಜಿನಿಯರ್ ಅನ್ನು ಕರೆದುಕೊಂಡು ಬರುವುದು. ಒಬ್ಬ ಜೂನಿಯರ್ ಇಂಜಿನಿಯರ್ ಐದು, ಆರು, ಏಳೋ ಪಂಚಾಯಿತಿಗಳನ್ನು ನಿಯುಕ್ತಿ ಮಾಡಿರುತ್ತಾರೆ. ಆ ಜೂನಿಯರ್ ಇಂಜಿನಿಯರ್‌ಗಳ ಹುದ್ದೆಗಳು ಬಹಳ ಇಲ್ಲ. ಆದರೆ ನಿಯುಕ್ತಿ ಮಾಡಿರತಕ್ಕಂತಹ ಜೂನಿಯರ್ ಇಂಜಿನಿಯರ್ ಬರುವುದೇ ಇಲ್ಲ. ಅವನು ಎಷ್ಟು ದಿವಸಕ್ಕೆ ಬರಬೇಕು, ಯಾವಾಗ ಎಸ್ಟಿಮೇಟ್ ಮಾಡಿಕೊಡಬೇಕು, ಯಾವಾಗ ಕಾರ್ಯ ಪ್ರಾರಂಭ ಮಾಡಬೇಕು, ಇದರಿಂದಾಗಿ ಸಾಕಷ್ಟು ಹಣ ಪಂಚಾಯಿತಿಯಲ್ಲಿ ಖರ್ಚು ಮಾಡುವುದಕ್ಕೆ ಆಗುತ್ತಾ ಇಲ್ಲ. ಅವರು ದಿವಸ ತಾಲ್ಲೂಕು ಹೆಡ್ ಕ್ವಾರ್ಟಸ್‌ಗೆ ಬರುವಂತಹದ್ದು, ವಾಪಸ್ಸು ಹೋಗುವಂತಹದ್ದು. ಟಿ.ಎ, ಡಿ.ಎ. ಖರ್ಚಾಗುವಂತಹ ಕಾರ್ಯ ಮಾತ್ರ ನಡೆದಿದೆ. ಅದನ್ನು ಹೋಗಲಾಡಿಸಿ, ಅದಕ್ಕೆ ಏನಾದರೂ ತಾವು ಒಂದು ವ್ಯವಸ್ಥೆಯನ್ನು ಮಾಡಬೇಕು. ಇಂಥ ಜೆ.ಇ. ಇಂತಿಷ್ಟೇ ಪಂಚಾಯಿತಿಯಲ್ಲಿ ಇರಬೇಕು;

ಮತ್ತು ಅವನು ಸೂಚನೆ ಕೊಟ್ಟ ಇಷ್ಟು ದಿವಸದೊಳಗಾಗಿ ಎಸ್ಟಿಮೇಟ್‌ನ್ನು ಮಾಡಿಕೊಡತಕ್ಕದ್ದು ಎಂದು ಜವಾಬ್ದಾರಿಯ ಚೌಕಟ್ಟನ್ನು ಹಾಕಿದಾಗ ಮಾತ್ರ ಇದು ಸರಿ ಆಗುತ್ತದೆ. ಇಲ್ಲದಿದ್ದರೆ ಪಂಚಾಯಿತಿಗಳಿಗೆ ತುಂಬಾ ಕಿರುಕುಳವಾಗುತ್ತದೆ. ಹಾಗೆ ಪಂಚಾಯತ್ ರಾಜ್ ವ್ಯವಸ್ಥೆ ಕಾಮಗಾರಿಯಲ್ಲಿ ಸಾಕಷ್ಟು ಪಾರದರ್ಶಕತೆ ಇರಬೇಕಾಗುತ್ತದೆ. ಇವತ್ತು ನಾವು ಸಾಕಷ್ಟು ವರದಿಗಳನ್ನು ಪತ್ರಿಕೆಗಳಲ್ಲಿ ಓದುತ್ತೇವೆ, ಜಿಲ್ಲಾ ಪಂಚಾಯಿತಿ ಖರೀದಿ ಸಮಿತಿಯಲ್ಲಿ ಅವ್ಯವಹಾರವಾಯಿತು, ಅದರ ಖರೀದಿಯಲ್ಲಿ ಅವ್ಯವಹಾರವಾಯಿತು ಎಂದು ದಿನನಿತ್ಯದ ಪತ್ರಿಕೆಯಲ್ಲಿ ಬರುತ್ತದೆ. ಇದು ಯಾರಿಗೂ ಗೌರವ ತರುವ ಸಂಗತಿ ಅಲ್ಲ. ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ತಾವು ಏನು ಮಾಡಿದ್ದೀರಾ? ಇದರಲ್ಲಿರುವ ಭ್ರಷ್ಟಾಚಾರವನ್ನು ತಡೆಗಟ್ಟಬೇಕು. ಆದುದರಿಂದ ಇದರ ಬಗ್ಗೆ ಪ್ರತಿಯೊಬ್ಬ ವ್ಯಕ್ತಿಗೂ ಸಂಪೂರ್ಣ ಅರಿವು ಇರಬೇಕು. ಜನರು ಸಂಪೂರ್ಣವಾಗಿ ಆಡಳಿತದಲ್ಲಿ ಭಾಗಿಗಳಾಗಬೇಕು ಎಂಬ ಮೂಲ ಕಲ್ಪನೆ, ಉದ್ದೇಶ ಏನಿತ್ತು ಅದು ಇವತ್ತು ಕಾರ್ಯಗತವಾಗಲಿಲ್ಲ ಎಂಬ ವಿಷಯ ಸಾಮಾನ್ಯ ಜನತೆಗೂ ಕೂಡ ಮೇಲ್ನೋಟಕ್ಕೆ ಅರ್ಥವಾಗುತ್ತದೆ. ಹೀಗಾಗಿ ಅದು ಪಾರದರ್ಶಕತೆಗೆ ಬರಬೇಕಾದರೆ ಉದಾಹರಣೆಗೆ ಒಂದು ಕಾಮಗಾರಿಯನ್ನು ಮಾಡುತ್ತಾರೆ, ಅದಕ್ಕೆ ಒಂದು ಎಸ್ಟಿಮೇಟ್ ಹಾಕುತ್ತಾರೆ, ಅವರು ಹಾಕುವಂತಹ ಎಸ್ಟಿಮೇಟ್ ಯಾರಿಗೂ ಕೂಡ ಗೊತ್ತಾಗುವುದಿಲ್ಲ. ಅದು ಯಾರ್ಯಾರಿಗೆ ಗೊತ್ತಾಗುತ್ತದೆ ಎಂದರೆ ಇಂಜಿನಿಯರ್‌ಗೆ ಗೊತ್ತಾಗುತ್ತದೆ, ಗುತ್ತಿಗೆದಾರನಿಗೆ ಗೊತ್ತಾಗುತ್ತದೆ, ಕಾರ್ಯದರ್ಶಿಗಳಿಗೆ ಗೊತ್ತಾಗುತ್ತದೆ. ಆದರೆ ಪಂಚಾಯಿತಿಯಲ್ಲಿ ಒಬ್ಬ ಮಹಿಳೆ ಇರುತ್ತಾರೆ, ಅವರಿಗೂ ಸಹ ಇದು ಗೊತ್ತಾಗುವುದಿಲ್ಲ. ಒಂದು ಕಾಮಗಾರಿಯನ್ನು ಮಾಡಬೇಕು ಅಂತ ಅಂದರೆ ಇಂತಿಷ್ಟು ಹಣ ಎಂದು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿರುತ್ತಾರೆ. ನಿಜವಾಗಿಯೂ ಆ ಕಾಮಗಾರಿಯಲ್ಲಿ ಎಷ್ಟು ಹಣ ಖರ್ಚಾಯಿತು ಎಂದು ಯಾರು ಹೇಳಬೇಕು? ಎಲ್ಲಿ ಗೊತ್ತಾಗಬೇಕು? ಇಲ್ಲಿ ಹೇಳುವವರು, ಕೇಳುವವರೂ ಯಾರೂ ಇಲ್ಲ. ಯಾರಾದರು ಪಂಚಾಯಿತಿ ಸದಸ್ಯರು ಕೇಳಿದರೆ, ನಿಮಗೆ ಏನೂ ಗೊತ್ತಾಗುವುದಿಲ್ಲ ಸುಮ್ಮನೆ ಕುಳಿತುಕೊಳ್ಳಿ ಎಂದು ಹೇಳುವಂತಹ ಕಾರ್ಯದರ್ಶಿಗಳು ಕೂಡ ಇವತ್ತು ಇದ್ದಾರೆ. ಆ ರೀತಿಯಾದಂತಹ ಪಂಚಾಯಿತಿಗಳು ಇದೆ ಎಂದು ತಿಳಿದಾಗ ಅದನ್ನು ಸರಿಪಡಿಸಬೇಕು. ಇವತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಮತ್ತು ಜಿಲ್ಲಾಪಂಚಾಯಿತಿಯಲ್ಲಿ ತಿಳಿಸುವಂತಹ ವ್ಯವಸ್ಥೆ ಇರುವುದೇ ಇಲ್ಲ. ಇದಕ್ಕಾಗಿ ಎಸ್ಟಿಮೇಟಿನ ಒಂದು ಕಾಪಿಯನ್ನು ಈಗ ಜಿಲ್ಲಾ ಪಂಚಾಯಿತಿ ಕಾಮಾಗಾರಿ ಆದರೆ ಜಿಲ್ಲಾ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗದ ನೋಟೀಸ್ ಬೋರ್ಡ್‌ನಲ್ಲಿ ಹಾಕುವಂತಹದ್ದು. ತಾಲ್ಲೂಕು ಪಂಚಾಯಿತಿ ಕಾಮಗಾರಿ ಆಗಿದ್ದರೆ, ತಾಲ್ಲೂಕು ಪಂಚಾಯಿತಿ ಇಂಜಿನಿಯರಿಂಗ್ ವಿಭಾಗದ ನೋಟೀಸ್ ಬೋರ್ಡ್‌ನಲ್ಲಿ ಒಂದು ಎಸ್ಟಿಮೇಟ್ ಕಾಪಿಯನ್ನು ಹಾಕುವಂತಹದ್ದು. ಅಥವಾ ಅದರ ಫೈಲನ್ನು ಸಾರ್ವಜನಿಕರು ನೋಡುವುದಕ್ಕೆ ಮುಕ್ತವಾಗಿ ಇಡತಕ್ಕಂತಹದ್ದು. ಯಾರಿಗಾದರೂ

ಅನುಮಾನ ಬಂದು ಕೇಳಿದಾಗ ಅದನ್ನು ನೋಡಬೇಕಾಗುತ್ತದ. ಈ ರೀತಿಯಲ್ಲಿ ಕೆಲವು ವಿಧಾನಗಳನ್ನು ಅನುಸರಿಸಿದರೆ ಇದಕ್ಕೆ ತುಂಬಾ ಶಕ್ತಿ ಬರುತ್ತದೆ ಎಂದು ನನ್ನ ಅನಿಸಿಕೆ. ಕೊನೆಯದಾಗಿ ರಾಜ್ಯ ಪಂಚಾಯತ್ ಪರಿಷತ್, ಬಗ್ಗೆ ತಾವು ಏನು ಸೂಚನೆ ಮಾಡಿದ್ದೀರಿ, ಇದರಲ್ಲಿ ಶಾಸಕರನ್ನು ವರ್ಷಕ್ಕೆ ಒಂದು ಸಾರಿನೋ ಎರಡು ಸಾರಿನೋ ಸೇರಿಸಿ, ಕೂತು ಇದರ ಬಗ್ಗೆ ಚಿಂತನೆ ಮಾಡಿದಾಗ ಎಲ್ಲಿ ತಪ್ಪಿದ್ದೇವೆ, ಎಲ್ಲಿ ಸರಿಪಡಿಸಬೇಕು ಎಂದು ಮತ್ತು ನಾವು ಶಾಸಕರಾಗಿ ನಮ್ಮ ಚಿಂತನೆಯನ್ನೂ ಅವರ ಜೊತೆಗೆ ಜೋಡಿಸುತ್ತಾ, ಮತ್ತು ಅವರ ಸಮಸ್ಯೆಯನ್ನು ಮತ್ತು ಇಡೀ ರಾಜ್ಯದ ಸಮಸ್ಯೆಯನ್ನು ಒಟ್ಟಾರೆ ನಾವೂ ಕೂಡ ಅಧ್ಯಯನ ಮಾಡುವಂತಹ ಕೆಲಸವನ್ನು ಮಾಡಿದರೆ ಅದು ಸುಲಭವಾಗುತ್ತದೆ ಎಂದು ನನಗೆ ಅನ್ನಿಸುತ್ತದೆ. ನಾನೂ ಕೂಡ ಹಿಂದೆ ಜಿಲ್ಲಾ ಪಂಚಾಯಿತಿಯಲ್ಲಿ ಇದ್ದೆ. ಸನ್ಮಾನ್ಯ ಮಂತ್ರಿಯವರೇ, ಇವತ್ತು ಜಿಲ್ಲಾ ಪಂಚಾಯಿತಿಯಲ್ಲಿ ಏನಾಗಿದೆ ಅಂದರೆ ಬಹಳಷ್ಟು ಅಧ್ಯಕ್ಷರುಗಳಿಗೆ ಅಂದರೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಪಂಚಾಯಿತಿಯ ಅಧ್ಯಕ್ಷರುಗಳಿಗೆ ತರಬೇತು ಸಾಲದು. ಸನ್ಮಾನ್ಯ ಅಬ್ದುಲ್ ನಜೀರ್ ಸಾಬ್ ಅವರು ಚಿಕಿತ್ಸೆಗೆ ಹೋಗುವ ಮುನ್ನ ನಾನು ಶಿವಮೊಗ್ಗ ಜಿಲ್ಲೆಯ ಪರಿಷತ್ತಿನಲ್ಲಿ ಸ್ಥಾಯಿ ಸಮಿತಿಯ ಅಧ್ಯಕ್ಷನಾಗಿದ್ದೆ. ಸ್ಥಾಯಿ ಸಮಿತಿಯ ಅಧ್ಯಕ್ಷರುಗಳನ್ನು ಮೇಲೆ ಒಂದು ಸಭೆಗೆ ಕರೆದರು. ಬೆಳಿಗ್ಗೆ ಸುಮಾರು ಎಂಟು ಗಂಟೆಯಿಂದ ಸಂಜೆ ಆರೂವರೆ ಏಳು ಗಂಟೆಯವರೆಗೆ ನಮಗೆ ಒಂದೇ ಸಮನೆ ಒಬ್ಬನೇ ವ್ಯಕ್ತಿ ನಮ್ಮ ಸಾಕಷ್ಟು ಪ್ರಶ್ನೆಗಳಿಗೆ, ನಮ್ಮ ಅನುಮಾನಗಳಿಗೆಲ್ಲಾ ಉತ್ತರ ಕೊಡುತ್ತಾ, ಕೊಡುತ್ತಾ ಹೋದರು. ನಿಮಗೂ ಆ ಶಕ್ತಿ ಖಂಡಿತ ಇದೆ. ಇದನ್ನು ಕನಿಷ್ಠ ವರ್ಷಕ್ಕೆ ಒಂದು ಸಲನೋ, ಎರಡು ಸಲನೋ ಈಗಲೇ ಕರೆದು ಸಭೆಯನ್ನು ಮಾಡಬೇಕು. ಮತ್ತು ಬೇರೆ ಬೇರೆಯವರಿಂದ ತರಬೇತಿಯನ್ನು ಕೊಡಬೇಕು. ಏಕೆಂದರೆ, ಹೇಗೆ ಸಭೆ ನಡೆಸಬೇಕು, ಯಾವ್ಯಾವುದನ್ನು ನಾವು ಚಿಂತನೆ ಮಾಡಬೇಕು ಎಂಬುದು ಇಲ್ಲವೇ ಇಲ್ಲ. ಏಕೆಂದರೆ ಒಂದು ಸಭೆಯಲ್ಲಿ ಹೇಗಾಗಿದೆ ಎಂದರೆ, ಅಂದರೆ ನಮ್ಮ ಜಿಲ್ಲಾ ಪಂಚಾಯಿತಿ ಸಭೆಯಲ್ಲಿ, ಒಬ್ಬ ಹಿರಿಯ ಸದಸ್ಯರು ಎದ್ದುನಿಂತು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು. ಮಾತನಾಡುತ್ತಾ ವೆರ್ಟನರಿ ಬಗ್ಗೆ ಮಾತನಾಡಿದರು, ಹೆಲ್ತ್ ಬಗ್ಗೆ ಮಾತನಾಡಿದರು, ಕಾಮಗಾರಿ ಬಗ್ಗೆ ಮಾತನಾಡಿದರು, ಎಲ್ಲದರ ಬಗ್ಗೆ ಮಾತನಾಡಿದರು ನಾವು ಎದ್ದು ಬೊಬ್ಬೆ ಹೊಡೆಯುತ್ತೇವೆ, ಅಜೆಂಡಾ ಬಗ್ಗೆ ಮಾತನಾಡಿ ಎಂದು, ಅಧ್ಯಕ್ಷರಿಗೆ ಹೇಳಿದೆ, ಅವರಿಗೆ ಅಜೆಂಡಾ ಮೇಲೆ ಮಾತನಾಡುವುದಕ್ಕೆ ಸೂಚನೆ ಕೊಡಬೇಕು ಎಂದು. ಅಲ್ಲಿರುವ ಸದಸ್ಯರು ಏನು ಹೇಳುತ್ತಾರೆ ಅಂದರೆ, ಅಜೆಂಡಾ, ಪಜೆಂಡಾ ಅದೆಲ್ಲಾ ನಮಗೆ ಏನೂ ಗೊತ್ತಿಲ್ಲ, ನಾನು ಎಲ್ಲೋ ತುರ್ತಾಗಿ ಹೊರಗಡೆ ಹೋಗಬೇಕಾಗಿದೆ. ನಾನು ಮಾತನಾಡುತ್ತೇನೆ, ಆಮೇಲೆ ಅಜೆಂಡಾ ಬಂದಮೇಲೆ ನೀವು ಹಾಕಿಕೊಳ್ಳಿ ಎಂದು ಹೇಳಿದರು. ಹೀಗೆ ಹೇಳುವಂತಹ ಅನೇಕ ಸದಸ್ಯರು ಇವತ್ತು ಸಹ ಇದ್ದಾರೆ. ಆದುದರಿಂದ ಸಭೆ ಹೇಗೆ ನಡೆಸಬೇಕು, ಅಜೆಂಡ ಹೇಗೆ ಫಿಕ್ಸ್ ಮಾಡಬೇಕು ಇದು ಅಧ್ಯಕ್ಷರುಗಳಿಗೆ ಗೊತ್ತಿಲ್ಲದೆ ಹೋದರೆ,

ಕಾರ್ಯದರ್ಶಿಗಳು ಆಟ ಆಡಿಸಿದಂತೆ ಆಡಬೇಕು. ಇವತ್ತು ಎಲ್ಲಾ ಕಾರ್ಯದ್ಧರ್ಶಿಗಳು ಒಳ್ಳೆಯವರು ಇದ್ದಾರೆ, ಯೋಗ್ಯರಿದ್ದಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇವತ್ತು ರಿಸರ್ವೇಷನ್‌ನಲ್ಲಿ ಬಂದಿರತಕ್ಕಂತಹ ಅನೇಕ ಹೆಣ್ಣು ಮಕ್ಕಳು ಹರಿಜನ-ಗಿರಿಜನರಿಂದ ಬಂದಂತಹ ಅವಿದ್ಯಾವಂತಹ ಹೆಣ್ಣು ಮಕ್ಕಳೂ ಕೂಡ ಆ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದಾಗ, ಅದು ಬಹಳ ಶಕ್ತಿಯುತವಾಗಿ ನಡೆಯದೆ ಹೋದರೆ, ಇಡೀ ಅರ್ಥವನ್ನೇ ಕಳೆದುಕೊಳ್ಳುತ್ತದೆ, ಆ ಸ್ಥಾನ ಮಾನಗಳು ಅತ್ಯಂತ ಶಕ್ತಿ ಪಡೆಯಬೇಕಾದರೆ ತಾವು ಕೊಡುವಂತಹ ತರಬೇತು ತುಂಬಾ ಅಗತ್ಯವಾಗುತ್ತದೆ. ಆದುದರಿಂದ ಆರ್.ಡಿ.ಪಿ.ಆರ್. ಇಲಾಖೆ ವತಿಯಿಂದ ಸೂಕ್ತ ರೀತಿಯಲ್ಲಿ ವ್ಯವಸ್ಥಿತವಾದಂತಹ ತರಬೇತಿಯನ್ನು ಅವರಿಗೆ ಕೊಟ್ಟು, ಈ ಗ್ರಾಮಾಂತರ ಪ್ರದೇಶದ ಕಾಮಗಾರಿಯನ್ನು ಈ ಒಂದು ವ್ಯವಸ್ಥೆಯನ್ನು ಯಶಸ್ವಿಯಾಗಿ ಮಾಡಬೇಕಾದರೆ ಏನೆಲ್ಲಾ ಮಾಡಬೇಕು ಅನ್ನುವಂತಹದ್ದನ್ನು ಅವರ ಹೃದಯದಲ್ಲಿ, ಅವರ ಮನಸ್ಸಿನಲ್ಲಿ ತುಂಬತಕ್ಕಂಥದ್ದು ತುಂಬಾ ಒಳ್ಳೆಯದು ಎಂದು ಹೇಳಿ, ತಮಗೆ ಸಲಹೆಯನ್ನು ಕೊಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸದಲಗಾ): ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದಲ್ಲಿ ಬೇಡ್ಕಿಹಾಳ ಎಂಬ ಗ್ರಾಮ ಪಂಚಾಯಿತಿ ಇದ್ದು, ಸದರಿ ಗ್ರಾಮ ಪಂಚಾಯಿತಿಯಲ್ಲಿ ಪರಿಶಿಷ್ಟ ವರ್ಗದ ಮಹಿಳೆಗೆ ಅಧ್ಯಕ್ಷ ಸ್ಥಾನವನ್ನು ಮೀಸಲಾಗಿಡದೆ ಉಪಾಧ್ಯಕ್ಷರಿಗೆ ಸಾಮಾನ್ಯ ಸ್ಥಾನದವರಿಗೆ ಮೀಸಲಾಗಿಡಲಾಗಿದೆ. ಅಲ್ಲಿ ಏನು ಮಾಡುತ್ತಾರೆಂದರೆ, ಚುನಾವಣೆಗೆ ನಾಮಿನೇಷನ್ ತುಂಬಿದ ನಂತರ ಅಲ್ಲಿ ಒಬ್ಬರೇ ಪರಿಶಿಷ್ಟ ವರ್ಗದ ಮಹಿಳೆಯಿರುವುದರಿಂದ ಬೇರಾರೂ ಕೂಡ ಚುನಾವಣೆಗೆ ನಿಲ್ಲುವಂಥ ವ್ಯವಸ್ಥೆಯಿಲ್ಲದಿರುವುದರಿಂದ ಆ ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ ಆ ವರ್ಗದ ಮಹಿಳೆ ಆರಿಸಿ ಬರುತ್ತಾರೆ, ಉಪಾಧ್ಯಕ್ಷರಾಗಿ ಸಾಮಾನ್ಯ ವರ್ಗದವರು ಬರುತ್ತಾರೆ. ಆದರೆ, 5-6 ತಿಂಗಳುಗಳಾದ ನಂತರ ಮೂರನೇ ಎರಡು ಭಾಗದ ಸಂಖ್ಯೆಯಷ್ಟು ಸದಸ್ಯರು ಅಧ್ಯಕ್ಷರಾಗಿರುವ ಆ ಮಹಿಳೆ ಮೇಲೆ ಅವಿಶ್ವಾಸ ನಿರ್ಣಯ ತಂದು ಅವರನ್ನು ಅಧ್ಯಕ್ಷ ಸ್ಥಾನದಿಂದ ಕಿತ್ತು ಹಾಕಿ ಉಪಾಧ್ಯಕ್ಷರು ಗ್ರಾಮ ಪಂಚಾಯಿತಿಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಐದಾರು ತಿಂಗಳು ಕಳೆದ ನಂತರ ಮತ್ತೆ ಎ.ಸಿ.ಯವರು ಚುನಾವಣೆ ಕರೆದಾಗ ಅಲ್ಲಿ ಬೇರೆ ಯಾವುದೇ ಅರ್ಜಿಗಳು ಬರುವುದಿಲ್ಲ. ಏಕೆಂದರೆ, ಅಲ್ಲಿ ಒಬ್ಬರೇ ಪರಿಶಿಷ್ಟ ವರ್ಗದ ಮಹಿಳೆಯಿರುವುದರಿಂದ ಪುನಃ ಅವರೇ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗುತ್ತಾರೆ. ಆದರೆ, ನಮ್ಮ ಚುನಾಯಿತ ಪ್ರತಿನಿಧಿಗಳು ಏನು ಮಾಡುತ್ತಾರೆಂದರೆ ಉದ್ದೇಶಪೂರ್ವಕವಾಗಿ ಆಕೆಯನ್ನು ಅಧ್ಯಕ್ಷ ಸ್ಥಾನದಿಂದ ತೆಗೆದುಹಾಕಬೇಕೆಂದು ಮೂರನೇ ಎರಡು ಭಾಗದಷ್ಟು ಮೆಜಾರಿಟಿ ಮಾಡಿಕೊಂಡು ಆಕೆಯನ್ನು ಕೆಳಗಿಳಿಸುತ್ತಾರೆ ಮತ್ತು ಸಾಮಾನ್ಯ ವರ್ಗದವರಿಗಿರುವ ಉಪಾಧ್ಯಕ್ಷ ಸ್ಥಾನವೇನಿದೆ, ಅವರಿದಂಲೇ ಗ್ರಾಮ ಪಂಚಾಯಿತಿ ನಡೆದುಕೊಂಡು

ಹೋಗುವ ವ್ಯವಸ್ಥೆಯೇನಿದೆ, ಇದರ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರೆಂಬುದನ್ನು ಹೇಳಬೇಕು. ಆ. ಗ್ರಾಮ ಪಂಚಾಯಿತಿಯಲ್ಲಿ ಮೂರು ವರ್ಷಗಳಿಂದ ಈ ತರಹದ ಪದ್ಧತಿ ನಡೆಯುತ್ತಿದೆ. ಮಹಿಳೆಯರಿಗೆ ಸೂಕ್ತ ಸ್ಥಾನಮಾನ ಕೊಡಬೇಕೆಂದು ನೀವು ಹೇಳುತ್ತೀರಿ. ಹಾಗೆ ಸ್ಥಾನ ಕೊಟ್ಟಾಗ ಇಂತಹ ಪರಿಸ್ಥಿತಿಯಿರುವುದರಿಂದ, ಅವರ ಮೇಲೆ ಎರಡು ಸಲ ಅವಿಶ್ವಾಸ ನಿರ್ಣಯ ತಂದು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುವಂಥ ವ್ಯವಸ್ಥೆ ಮಾಡಿದ್ದಾರೆ. ಆದುದರಿಂದ, ಇವೊತ್ತು ತಾವು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ ಏನು ತರುತ್ತಿದ್ದೀರಿ, ಇದರಲ್ಲಿ ಏನು ವ್ಯವಸ್ಥೆ ಕಲ್ಪಿಸುತ್ತೀರೆಂಬುದರ ಬಗ್ಗೆ ತಿಳಿಸಬೇಕು.

ಶ್ರೀ ಎಂ.ಪಿ.ಪ್ರಕಾಶ್: ಈಗಾಗಲೇ ಈ ವಿಚಾರದಲ್ಲಿ ಹೇಳಿದ್ದೇವೆ. ಮೀಸಲಾತಿಯ ಇಡೀ ಪರಿಕಲ್ಪನೆಯನ್ನೇ ಅವರು ದುರುದ್ದೇಶಪೂರಿತವಾಗಿ ಕಡಿಮೆ ಮಾಡತಕ್ಕಂಥ ಪ್ರಯತ್ನ ಮಾಡಿ ಮೂರು ಬಾರಿ ಆ ರೀತಿ ಮಾಡಿದರೆ ಇಡೀ ಪಂಚಾಯಿತಿಯನ್ನೇ ನಾವು ರದ್ದುಗೊಳಿಸುತ್ತೇವೆಂದು ಮಾಡಿದ್ದೇವಲ್ಲಾ.

ಮಾನ್ಯ ಸದಸ್ಯರು: ಆ ರೀತಿ ಈಗಾಗಲೇ ಎಷ್ಟು ಪಂಚಾಯಿತಿಯನ್ನು ತಾವು ರದ್ದುಗೊಳಿಸಿದ್ದೀರಿ?

ಶ್ರೀ ಎಂ.ಪಿ.ಪ್ರಕಾಶ್: ಇಲ್ಲಿಯವರೆಗೆ ನಮ್ಮ ಗಮನಕ್ಕೆ ಆ ರೀತಿ ಮೂರು ಬಾರಿ ಆಗಿರುವ ಯಾವುದೇ ಪ್ರಕರಣ ಬಂದಿಲ್ಲದಿರುವುದರಿಂದ ಪಂಚಾಯಿತಿಗಳನ್ನು ರದ್ದುಗೊಳಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗ ಗ್ರಾಮ ಪಂಚಾಯಿತಿಯಲ್ಲಿ ಐದು ವರ್ಷ ಅಂದರೆ ಇಪ್ಪತ್ತು ತಿಂಗಳುಗಳ ಅವಧಿ ಇದೆ. ಮೂರು ಬಾರಿ ಎಂದರೆ ಈಗಿರುವ ಪ್ರಕಾರ ವರ್ಷಕ್ಕೊಮ್ಮೆ ಇದೆ. ಈ ರೀತಿ ಇರುವುದರಿಂದ ಪ್ರತಿ ಸಾರಿಯೂ ಇದೇ ಕೆಲಸ ಮಾಡಿಕೊಂಡು ಹೋಗುತ್ತರಾದ್ದರಿಂದ ಅದರ ಬದಲು ಅದನ್ನು ಎರಡು ಸಲ ಎಂದು ಮಾಡಿ. ಆ ರೀತಿ ಮಾಡಿದರೆ ಬಹುಶಃ ಮೊದಲು ಏನೋ ಪ್ರಾಮಾಣಿಕ ಕಾರಣಕ್ಕಾಗಿ ಅವಿಶ್ವಾಸ ನಿರ್ಣಯ ತಂದರೆನ್ನಬಹುದು. ಆದರೆ, ಎರಡನೇ ಸಾರಿ ಅದೇ ಪ್ರಯತ್ನ ಮಾಡಿದರೆ ಆಗ ಗ್ರಾಮ ಪಂಚಾಯಿತಿಯನ್ನು ರದ್ದುಗೊಳಿಸುತ್ತೇವೆಂದರೆ ಭಯವಿರುತ್ತದೆ. ಇದರ ಬಗ್ಗೆ ತಾವು ಯೋಚಿಸಬೇಕು.

ಶ್ರೀ ಎಂ.ಪಿ.ಪ್ರಕಾಶ್: ಇಲ್ಲಿಯವರೆಗೆ ಇರುವ ಸಂಪ್ರದಾಯಗಳು ಇದೊಂದಕ್ಕೆ ಸಂಬಂಧಿಸಿದ್ದಲ್ಲ. ಎಲ್ಲಾ ಕಡೆಗಳಲ್ಲೂ ಕೂಡ 'ನೋಡು, ಮೂರು ಬಾರಿ ತಪ್ಪು ಮಾಡಿದರೆ ನಾನು ನಿನ್ನನ್ನು ಮುಗಿಸುತ್ತೇನೆ' ಎಂದು ಹೇಳುತ್ತಾರೆ. ಅಂದರೆ, ಆ ಸಂಪ್ರದಾಯಕ್ಕನುಗುಣವಾಗಿ ಮೂರು ಬಾರಿ ಎಂದರೆ ನಾವು ಹೆಚ್ಚು ಅವಕಾಶ ಕೊಟ್ಟಿದ್ದೇವೆ ಅವರು ಸರಿಪಡಿಸಿಕೊಳ್ಳುತ್ತಾರೆಂಬುದು ಹಿಂದಿರುವ ಉದ್ದೇಶ ತಾವು

ಹೇಳಿದಂತೆ ಎರಡು ಸಲವಾದರೂ ಆಗಬಹುದು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ದಯವಿಟ್ಟು ಮೂರು ಸಲ ಇರುವುದನ್ನು ಎರಡು ಸಲ ಎಂದು ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ಅದರ ಬಗ್ಗೆ ಪರಿಶೀಲಿಸುತ್ತೇನೆ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ ರಾಜ್ ವಿಧೇಯಕಕ್ಕೆ ಈಗಾಗಲೇ ಎರಡು ಬಾರಿ ತಿದ್ದುಪಡಿಗಳಾಯಿತು, ಈಗ ಮೂರನೇ ತಿದ್ದುಪಡಿಯನ್ನು ತರುತ್ತಿದ್ದಾರೆ. ನಾವು ಹಲವಾರು ಬಾರಿ ಪ್ರಸ್ತಾಪ ಮಾಡಿದ್ದೇವಲ್ಲದೆ ಒತ್ತಾಯ ಕೂಡ ಮಾಡಿದ್ದೇವೆ. ಏನೆಂದರೆ, ಕರ್ನಾಟಕ ರಾಜ್ ಪಂಚಾಯಿತಿ ನೌಕರರ ಬಗ್ಗೆ ಸದರಿ ಮೂರನೇ ತಿದ್ದುಪಡಿ ವಿಧೇಯಕದಲ್ಲಿ ಯಾವುದೇ ಒಂದು ಅಂಶವನ್ನೂ ಕೂಡ ಸೇರಿಸಿಲ್ಲ. ಇವೊತ್ತಿನ ದಿವಸ ಸಾವಿರಾರು ನೌಕರರುಗಳು ಹಲವಾರು ವರ್ಷಗಳಿಂದ ಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಯಾವುದೇ ರೀತಿಯಾದಂಥ ನಿಗದಿತ ವೇತನವಿಲ್ಲ, ಅವರ ಕೆಲಸಕ್ಕೆ ಭದ್ರತೆಯಿಲ್ಲ. ಇದರ ಬಗ್ಗೆ ತಿದ್ದುಪಡಿಯಲ್ಲಿ ತರುತ್ತಾರೆಂದು ನಾವು ನಿರೀಕ್ಷಿಸಿದ್ದೆವು. ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವ ಬಗ್ಗೆ ತಂದಿರುವುದು ಸ್ವಾಗತಾರ್ಹ, ಮತ್ತು ಕೆಲವು ಒಳ್ಳೆಯ ಅಂಶಗಳೂ ಕೂಡ ಇದರಲ್ಲಿದೆ. ಸ್ವಯಂ ಅಧಿಕಾರಿ ನಡೆಸುವುದಕ್ಕೆ ಬೇಕಾದಂಥ ವ್ಯವಸ್ಥೆ ನಿರ್ಮಿಸುವ ಒಳ್ಳೆಯ ಉದ್ದೇಶದಿಂದ ಸದರಿ ತಿದ್ದುಪಡಿ ವಿಧೇಯಕ ತಂದಿದ್ದಾರೆ. ಸ್ವಯಂ ಅಧಿಕಾರ ನಡೆಸತಕ್ಕಂಥ ಒಂದು ಸ್ವಾಯತ್ತ ಸಂಸ್ಥೆಯಾಗಬೇಕೆಂದರೆ ನೌಕರರುಗಳ ಪಾತ್ರ ಕೂಡ ಬಹಳ ಮುಖ್ಯ. ತಿದ್ದುಪಡಿಯಲ್ಲಿ ನೌಕರರುಗಳ ಬಗ್ಗೆ ಎಲ್ಲಿಯೂ ಒಂದು ಅಂಶ ಕೂಡ ಪ್ರಸ್ತಾಪವಾಗಿಲ್ಲ. ಅವರ ಕೆಲಸದ ಭದ್ರತೆ, ನಿಗದಿತ ವೇತನದ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಸಂಸ್ಥೆ ಬೆಳೆಯಬೇಕಾದರೆ ಇವರ ಪಾತ್ರವೂ ಬಹಳ ಮುಖ್ಯ. ಈ ದಿಸೆಯಲ್ಲಿ ನಾನು ಒಂದು ಸಲಹೆ ಕೊಡಲಿಚ್ಛಿಸುತ್ತೇನೆ. ಈಗ ಪಶ್ಚಿಮ ಬಂಗಾಳದಲ್ಲಿ ಇದಕ್ಕೆ ಪ್ರತ್ಯೇಕವಾದ ಒಂದು ಡೈರೆಕ್ಟೊರೇಟ್ ಆಫ್ ಪಂಚಾಯತ್ ರಾಜ್ ಇದೆ. ನೌಕರರುಗಳನ್ನು ನೇಮಕ ಮಾಡಿಕೊಳ್ಳುವಂಥಾದ್ದಕ್ಕೆ ಮತ್ತು ಇಡೀ ಪಂಚಾಯತ್ ವ್ಯವಸ್ಥೆ ನೋಡಿಕೊಳ್ಳುವುದಕ್ಕೆ ಒಂದು ಪ್ರತ್ಯೇಕ ನಿರ್ದೇಶನಾಲಯವಿದೆ. ಅದು ಪ್ರತ್ಯೇಕ ಸಂಸ್ಥೆಯಾಗಿ ಕೆಲಸ ನಿರ್ವಹಿಸುತ್ತಿದೆ. ಆ ರೀತಿಯಲ್ಲಿ ತಾವು ಈ ಪಂಚಾಯಿತಿಗೆ ತಿದ್ದುಪಡಿ ತಂದರೆ ಬಹುಶಃ ಪಂಚಾಯಿತಿಯನ್ನು ಹೆಚ್ಚು ಶಕ್ತಿಯುತಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಎರಡು ಅಂಶಗಳನ್ನು ತಿದ್ದುಪಡಿ ಮೂಲಕ ತರಬೇಕೆಂದು ನಾನು ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಪ್ರಕಾಶ್‌ರವರಿಗೆ ಗೊತ್ತಿರುವಂತೆ ಗ್ರಾಮ ಪಂಚಾಯಿತಿಯಲ್ಲಿರುವ ನೌಕರರುಗಳು ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಅವರಿಗೆ ವೇತನವಿಲ್ಲ, ಕೆಲಸದ

ಭದ್ರತೆಯಿಲ್ಲ. ಇದರ ಜೊತೆಗೆ ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು ಹೇಳಿದಂತೆ ನೌಕರರುಗಳ ಸಂಖ್ಯೆ ಕೂಡ ಕಡಿಮೆಯಿದೆ. ನಮ್ಮ ರಾಜ್ಯಕ್ಕೆ ಹಾಗೂ ಪಶ್ಚಿಮ ಬಂಗಾಳಕ್ಕೆ ಹೋಲಿಸಿದರೆ ಅಲ್ಲಿ ನೌಕರರುಗಳ ಸಂಖ್ಯೆ ಕಡಿಮೆಯಿದೆ. ಏಕೆಂದರೆ, ನಮ್ಮಲ್ಲಿ ಕಿರುನೀರು ಸರಬರಾಜು ಯೋಜನೆಯಿದ್ದು, ಅಲ್ಲಿ ಶೇಕಡಾ 80ಕ್ಕಿಂತಲೂ ಹೆಚ್ಚು ಕಡೆ ಹ್ಯಾಂಡ್ ಪಂಪ್ಸ್ ಅಥವಾ ಎನ್.ಆರ್.ಡಬ್ಲ್ಯೂ.ಎಸ್. ಇದೆ. ಹಾಗಾಗಿ, ವಾಟರ್‌ಮನ್ ಎನ್ನುವ ಪ್ರಶ್ನೆಯೇ ಅಲ್ಲಿಲ್ಲ. ಆದರೆ, ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಕಿರು ನೀರು ಸರಬರಾಜು ಯೋಜನೆಯಿರುವುದರಿಂದ ಹೆಚ್ಚು ನೌಕರರುಗಳಿದ್ದಾರೆ. ನಾನು ಮೊನ್ನೆ ತಾನೆ ಪಶ್ಚಿಮ ಬಂಗಾಳಕ್ಕೆ ಅದನ್ನೇ ಅಭ್ಯಸಿಸಲು ಹೋಗಿದ್ದೆ. ಅಲ್ಲಿ ಕಿರು ನೀರು ಸರಬರಾಜು ಯೋಜನೆ ಇಲ್ಲದಿರುವುದರಿಂದ ಹ್ಯಾಂಡ್ ಪಂಪ್‌ಗಳು ಇರುವುದಕ್ಕೋಸ್ಕರ ಅವರು ಕೆಲಸಗಾರರನ್ನು ಇಟ್ಟಿಲ್ಲ. ಏಕೆಂದರೆ, ಅಲ್ಲಿ ಅಂತರ್ಜಲದ ಮಟ್ಟ ಬಹಳ ಮೇಲಿದೆ. ಹಾಗಾಗಿ, ಅಲ್ಲಿ ನೌಕರರುಗಳನ್ನು ನೇಮಿಸುವ ಪ್ರಶ್ನೆಯಿಲ್ಲ. ಅಲ್ಲಿ ಎನ್.ಆರ್.ಡಬ್ಲ್ಯೂ.ಎಸ್. ಸ್ಕೀಮ್‌ನಲ್ಲಿ ವಾಟರ್‌ಮನ್‌ಗಳಿದ್ದಾರೆ. ಐದಾರು ಹಳ್ಳಿಗಳಿಗೆ ಸೇರಿಸಿದಂತೆ ವಾಟರ್‌ಮನ್‌ಗಳಿದ್ದಾರೆ. ಇದನ್ನು ಪಂಚಾಯಿತಿ, ಮುನಿಸಿಪಾಲಿಟಿಯವರೇ ಎಲ್ಲವನ್ನೂ ನೋಡಿಕೊಳ್ಳುತ್ತಾರೆ. ಆದರೆ, ನಮ್ಮ ರಾಜ್ಯದಲ್ಲಿ ಪರಿಸ್ಥಿತಿ ಬೇರೆ ಇದೆ. ನಮ್ಮಲ್ಲಿ ಕಿರು ನೀರು ಸರಬರಾಜು ಯೋಜನೆ ನೂರಕ್ಕೆ ಶೇಕಡಾ 80ರಷ್ಟು ಇರುವ ಕಾರಣಕ್ಕೋಸ್ಕರ ವಾಟರ್‌ಮನ್‌ಗಳಿದ್ದಾರೆ. ಒಂದು ಗ್ರಾಮ ಪಂಚಾಯಿತಿಯಲ್ಲಿ 3-4 ವಾಟರ್‌ಮನ್‌ಗಳಿರುವ ಪರಿಸ್ಥಿತಿಯಿದೆ, ಅವಶ್ಯಕತೆಯೂ ಇದೆ. ಆದಕಾರಣ, ಅಲ್ಲಿರುವ ಒಳ್ಳೆಯ ಅಂಶಗಳನ್ನೂ ನಾವು ತೆಗೆದುಕೊಳ್ಳಬೇಕಾಗುತ್ತದೆ ಅಥವಾ ನಿಮಗೆ ಯಾವುದನ್ನು ಅಳವಡಿಸಿಕೊಳ್ಳಲು ಸಾಧ್ಯವಿಲ್ಲವೋ ಅದನ್ನು ಕೈಬಿಡಬೇಕಾಗುತ್ತದೆ. ಒಟ್ಟಾರೆ ಹೇಳಬೇಕೆಂದರೆ ಈಗ ತಂದಿರುವ ತಿದ್ದುಪಡಿಯಲ್ಲಿ ನೌಕರರುಗಳ ಬಗ್ಗೆ ಚಿಂತನೆ ಇಲ್ಲ. ಈಗ ಕಸ ಗುಡಿಸುವವರು, ನೀರು ಬಿಡುವವರು, ಬಿಲ್ ಕಲೆಕ್ಟರ್ ಈ ರೀತಿಯ ಮುಂತಾದ ನೌಕರರುಗಳೇನಿದ್ದಾರೆ, ಇವರುಗಳು ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಕೆಲಸ ಮಾಡಿದರೆ ಮಾತ್ರ ಪರಿಪೂರ್ಣವಾಗಿ ಸ್ವಯಂ ಆಡಳಿತದ ವಿಕೇಂದ್ರೀಕರಣವಾಗುತ್ತದೆ. ನೌಕರರುಗಳನ್ನು ಬಿಟ್ಟು ಪಂಚಾಯಿತಿ ನಡೆಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ಪ್ರತ್ಯೇಕ ಪಂಚಾಯತ್ ರಾಜ್ ನಿರ್ದೇಶನಾಲಯವೆಂದು ತಂದು ಅದನ್ನು ಪ್ರತ್ಯೇಕ ಸಂಸ್ಥೆಯನ್ನಾಗಿಸಿ ಅದಕ್ಕೆ ಹೆಚ್ಚು ಸ್ವಾಯತ್ತ ಅಧಿಕಾರ ನೀಡಿ ಕೆಲಸ ಮಾಡುವುದು ಮತ್ತು ನೌಕರರುಗಳ ವೇತನ ಹಾಗೂ ಅವರಿಗೆ ಕೆಲಸದ ಭದ್ರತೆ ಒದಗಿಸಿಕೊಡುವ ಬಗ್ಗೆ ತಾವು ತಿದ್ದುಪಡಿಯಲ್ಲಿ ಸೂಚಿಸಿ ಅಂಗೀಕರಿಸಬೇಕು. ತಿದ್ದುಪಡಿಯಲ್ಲಿ ಕೆಲವು ಒಳ್ಳೆಯ ಅಂಶಗಳಿದ್ದು ಅದನ್ನು ನಾನು ಸ್ವಾಗತಿಸುತ್ತಾ ಸಲಹೆ ಕೊಡುತ್ತಿದ್ದೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜ್‌ನಗರ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ 'ರಾಜ್ ವಿಧೇಯಕ ಮೂರನೇ ಬಾರಿ ತಿದ್ದುಪಡಿಯಾಗುತ್ತಿದೆ.

ತಿದ್ದುಪಡಿಯಲ್ಲಿ ಸ್ವಾಗತಿಸುವ ಅನೇಕ ವಿಚಾರಗಳನ್ನು ತಂದಿರುವುದನ್ನು ನಾವು ಮೆಚ್ಚುತ್ತೇವೆ. ಕೆಲವೊಂದನ್ನು ತಾವು ಅತಿ ಪ್ರಾಮುಖ್ಯವಾಗಿ ಮಾಡಿದ್ದೀರಿ. ಮಾನ್ಯ ಹಿರಿಯ ಸದಸ್ಯರಾದ ಎಂ.ವೈ.ಘೋರ್ಪಡೆಯವರು ಅದನ್ನು ಹೇಳಿದ್ದಾರೆ. ಶೌಚಾಲಯಗಳ ಬಗ್ಗೆ ನಾನು ತಮಗೆ ಹಿಂದೆಯೇ ಹೇಳಿದ್ದೆ. ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಶೌಚಾಲಯಗಳ ವ್ಯವಸ್ಥೆಯಿಲ್ಲದಿರುವುದರಿಂದ ಅತ್ಯಂತ ಘೋರವಾದ ಪರಿಸ್ಥಿತಿ ಉಂಟಾಗಿದೆ. ತಾವು ನೋಡಿದ್ದೀರಿ: ಇಡೀ ದೇಶದ ಹಳ್ಳಿಗಳಲ್ಲಿ ಮತ್ತು ಕರ್ನಾಟಕದಲ್ಲಿ ಸಂಜೆ ಆರು ಗಂಟೆ ಬಳಿಕವೇ ಶೌಚಕ್ಕೆ ಬೇಲಿ ಪಕ್ಕ ಹೋಗುತ್ತಾರೆ. ಬೆಳಿಗ್ಗೆಯಿಂದ ಸಂಜೆಯವರೆವಿಗೂ ಅವರು ಶೌಚಕ್ಕೆ ಹೋಗುವ ಸ್ವಾತಂತ್ರ್ಯವೇ ಇಲ್ಲ. ಕಾರಣವೇನೆಂದರೆ, ಹಳ್ಳಿಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡುವ ಅನೇಕ ಯೋಜನೆಗಳನ್ನು ತಾವು ಕೈಗೊಂಡಿದ್ದರೂ ಅವೆಲ್ಲವೂ ವಿಫಲವಾಗುತ್ತಿದೆ. ಇದು ಸಫಲವಾಗಬೇಕಾದರೆ ನೀರಿನ ವ್ಯವಸ್ಥೆ ಮತ್ತು ಶೌಚಾಲಯವನ್ನು ಪ್ರತಿ ಹಳ್ಳಿಗೂ ಕನಿಷ್ಠ ಒಂದು ಊರಿಗೆ ಮೂಲೆಯಲ್ಲಾದರೂ ಶೌಚಾಲಯ ವ್ಯವಸ್ಥೆ ಇರುವಂಥ ವ್ಯವಸ್ಥೆ ಬಗ್ಗೆ ತಾವು ಪ್ರಾಮಾಣಿಕವಾದ ಚಿಂತನೆ ಮಾಡಬೇಕು. ಇದಕ್ಕೆ ಎಷ್ಟು ಹಣಕಾಸಿನ ವ್ಯವಸ್ಥೆ ಬೇಕು, ಯಾವ ರೀತಿಯಲ್ಲಿ ಯೋಜನೆ ಕೈಗೊಳ್ಳಬೇಕೆಂಬ ಬಗ್ಗೆ ಚಿಂತನೆ ಮಾಡಿ. ಹಿಂದೆ ಇದರ ಬಗ್ಗೆ ಪ್ರಸ್ತಾಪವಾದಾಗ 'ನಿರ್ಮಲ ಕರ್ನಾಟಕ' ಯೋಜನೆಯಡಿ ಶೌಚಾಲಯಗಳ ನಿರ್ಮಾಣದ ಕೆಲಸ ಕೂಡ ಇರುತ್ತದೆಂದು ತಾವು ಹೇಳಿದ್ದೀರಿ, ನಾನೂ ಒಪ್ಪುತ್ತೇನೆ. ಆದರೆ, ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ ಮಹಿಳೆಯರಿಗೆ ಹಳ್ಳಿಗಳಲ್ಲಿ ಸಾರ್ವಜನಿಕ ಪ್ರತ್ಯೇಕ ಶೌಚಾಲಯಗಳಿಲ್ಲ. ಪ್ರಸ್ತುತ ಪರಿಸ್ಥಿತಿಯಲ್ಲಿ ಅವರಿಗೆ ಶೌಚಾಲಯವೆಂದರೆ ಬೇಲಿ ಪಕ್ಕ ಬಿಟ್ಟರೆ ಬೇರೆ ಪ್ರಶ್ನೆಯೇ ಇಲ್ಲ. ಆದುದರಿಂದ, ಇದರ ಬಗ್ಗೆ ತಾವು ಪ್ರಾಮಾಣಿಕ ರೀತಿಯಲ್ಲಿ ಯಾವ ರೀತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂಬ ಬಗ್ಗೆ ಪ್ರಾಮಾಣಿಕ ಚಿಂತನೆ ನಡೆಸಬೇಕು. ಏಕೆಂದರೆ, ಪಿ.ಆರ್.ನಾಯಕ್‌ರವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ಮಾಡಿದಾಗ ಇದರಲ್ಲಿ ಅನೇಕ ವಿಚಾರಗಳು, ಸಲಹೆಗಳು ಬರುತ್ತವೆಂದು ತಾವು ಅನೇಕ ಬಾರಿ ಸದನದಲ್ಲಿ ಚರ್ಚಿಸಿದಾಗ ಹೇಳಿದ್ದಿರಿ. ಈ ವಿಚಾರದಲ್ಲಿ ಅವರು ಏನೂ ಬೆಳಕು ಚೆಲ್ಲಲಿಲ್ಲ, ನನಗೆ ಅನ್ನಿಸುತ್ತದೆ ನಾಯಕ್‌ರವರು ಕೊಟ್ಟಂತಹ ಸಲಹೆಗಳನ್ನು; ಶಿಫಾರಸ್ಸುಗಳಲ್ಲಿ ಈ ಯಾವ ವಿಚಾರಗಳೂ ಬೆಳಕಿಗೆ ಬಂದಿಲ್ಲ. ಆದ್ದರಿಂದ ನಾನು ನಿಮಗೆ ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಅದನ್ನು ಬಹಳ ಪ್ರಾಮಾಣಿಕವಾಗಿ ಗುರುತರವಾಗಿ ಜವಾಬ್ದಾರಿಯುತವಾಗಿ ಮಹಿಳೆಯರಿಗಾಗಿ ಪ್ರತ್ಯೇಕ ಶೌಚಾಲಾಯಗಳನ್ನು ಮಾಡಿ ಅವುಗಳನ್ನು ಶುದ್ಧವಾಗಿ ಸ್ವಚ್ಛವಾಗಿ ಇಡಲು ಏನೇನು ಮಾಡಬೇಕು ಅದನ್ನು ಮಾಡಿ. ನೀರಿನ ವ್ಯವಸ್ಥೆ ಮಾಡಿ. ಎರಡನೆಯದಾಗಿ ತಮ್ಮ ಉದ್ದೇಶಗಳು ಮತ್ತು ಕಾರಣಗಳಲ್ಲಿ ಈ ''ಪಾರಿಭಾಷಿಸಲ್ಪಟ್ಟ ದುರ್ನಡತೆಗಾಗಿ'' ಯಾವುದು ದುರ್ನಡತೆ ಅದನ್ನು ತಾವು ಸ್ಪಷ್ಟಪಡಿಸಬೇಕು. ಒಬ್ಬ ಸದಸ್ಯರನ್ನು ತೆಗೆಯಲು ಕಾರಣ ದುರ್ನಡತೆ ಎಂದು ಹೇಳಿ ಬಿಟ್ಟರೆ ಸಾಲದು. ಆ ದುರ್ನಡತೆ ಎಂದರೆ ಯಾವುವು

ಎಂಬುದನ್ನು ಸ್ಪಷ್ಟವಾಗಿ ವಿಶಾಲವಾಗಿ ತಾವು ಹೇಳಬೇಕು. ಇದರ ಜೊತೆಗೆ ನಾನು ಅನೇಕ ಬಾರಿ ಈ ವಿಕೇಂದ್ರಿಕರಣದ ಬಗ್ಗೆ ಚರ್ಚೆ ಮಾಡಿದ್ದೇನೆ, ನನಗೆ ವಿಕೇಂದ್ರಿಕರಣದ ಬಗ್ಗೆ ತಕರಾರು ಇಲ್ಲ. ನೀವು ಮತ್ತು ನಮ್ಮ ಎ.ನಜೀರ್‌ಸಾಬ್ ಮತ್ತು ಫೋರ್ಪ್‌ಡೆಯವರಿಗೆ ಇದರ ಬಗ್ಗೆ ಇರುವ ಚಿಂತನೆಯನ್ನು ನಾನು ಒಪ್ಪುತ್ತೇನೆ. ಇದನ್ನು ನೀವು ಬೇರೆ ಉದ್ದೇಶದಿಂದ ಮಾಡಿದ್ದೀರಿ ಎಂದು ನಾನು ಹೇಳಲು ತಯಾರು ಇಲ್ಲ. ಇದನ್ನು ನಾವು ಮುಕ್ತಕಂಠದಿಂದ ಸ್ವಾಗತಿಸುತ್ತೇವೆ. ಇದರ ಬಗ್ಗೆ ಹಿಂದೆ ಶ್ರೀ ಡಿ.ಬಿ.ಚಂದ್ರೇಗೌಡರು ಇದ್ದಾಗ ಇದರ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಈ ಶಾಸಕರ ಸ್ಥಾನ-ಮಾನಗಳು ಏನು, ಗ್ರಾಮ ಪಂಚಾಯತ್‌ಗಳಲ್ಲಿ ಏನು, ತಾಲ್ಲೂಕು ಪಂಚಾಯತ್‌ಗಳಲ್ಲಿ ಏನು, ಜಿಲ್ಲಾ ಪಂಚಾಯತ್‌ಗಳಲ್ಲಿ ಏನು; ಈ ಮೂರು ಕಡೆಗಳಲ್ಲಿ ನಾವು ಶೂನ್ಯವಾಗಿದ್ದೇವೆ. ಇದು ಬಹುಶಃ ಸಚಿವರಿಗೆ ಇದರ ಕಾವು-ನೋವು ತಟ್ಟುವುದಿಲ್ಲ. ಆದರೆ, ಸಾಮಾನ್ಯ ಶಾಸಕರಿಗೆ ಅದರ ಕಾವು-ನೋವು ಎರಡು ತಟ್ಟುತ್ತದೆ. ನಾನೇನೂ ವಿಕೇಂದ್ರೀಕರಣವನ್ನು ವಿರೋಧ ಮಾಡಿ ಎಲ್ಲಾ ಅಧಿಕಾರಗಳನ್ನು ಶಾಸಕರಿಗೆ ಕೊಡಿ ಎಂದು ಹೇಳಲು ಹೋಗುವುದಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ತಾಲ್ಲೂಕು ಪಂಚಾಯತ್ ಶಾಸಕನೊಬ್ಬ ಅಲ್ಲಿ ನಡೆಯುವ ಸಭೆಗಳಲ್ಲಿ ಕೂಡುವುದು, ಅಲ್ಲಿ ನಡೆಯುವ ಚರ್ಚೆಗಳನ್ನು ಕೇಳುವುದಕ್ಕೆ, ಯಾವುದೇ ಒಂದು ಸಣ್ಣ ಕೊಳವೆ ಬಾವಿ ಕೊರೆಸುವುದಾಗಲಿ, ಅಂಗನವಾಡಿ ಕಟ್ಟಿಸುವುದಾಗಲಿ, ರಸ್ತೆಗಳ ದುರಸ್ತಿಯಾಗುವುದಾಗಲಿ ಇಲ್ಲಿ.ಒಂದು ಅಭಿಪ್ರಾಯವನ್ನು ಹೇಳುವುದಕ್ಕೂ ಶಾಸಕರಿಗೆ ಅಧಿಕಾರ ಇಲ್ಲ. ಆದರೆ ಏನು ಅರ್ಥ? ಯಾವುದೇ ತಾಲ್ಲೂಕುಗಳಲ್ಲಿ, ಯಾವುದೇ ಕ್ಷೇತ್ರಗಳಲ್ಲಿ ಜನರು ನಿರೀಕ್ಷಣೆ ಮಾಡುವುದು ಈ ತಾಲ್ಲೂಕು ಪಂಚಾಯತ್‌ಗಿಂತ, ಜಿಲ್ಲಾ ಪಂಚಾಯತ್‌ಗಿಂತ, ಸದಸ್ಯರಿಗಿಂತ ನೇರವಾಗಿ ಶಾಸಕರನ್ನು ಕೇಳುತ್ತಾರೆ ರಸ್ತೆ ಕೊಡುತ್ತೀವೆ ಎಂದಿರಿ, ಕೊಳವೆ ಬಾವಿಗಳನ್ನು ಕೊಡುತ್ತೇವೆ ಎಂದಿರಿ ಆದರೆ ಯಾವುದೂ ಆಗಲಿಲ್ಲ ಎನ್ನುತ್ತಾರೆ. ಹೀಗೆ ಪ್ರತಿಯೊಂದು ಹಂತದಲ್ಲಿ ಶಾಸಕರ ಸ್ಥಾನ-ಮಾನ ಶೂನ್ಯವಾಗಿದೆ. ಒಂದು ರೀತಿಯ ಮೈಲಿಗೆ ಜನ ಎನ್ನುವಂತಹ ರೀತಿಯಲ್ಲಿ ಕಡೆಗಣಿಸಿದ್ದಾರೆ. ತಾವು ಅನೇಕ ಸಾರಿ ಈ ನಾಯಕ್‌ರವರ ವರದಿ ಬರಲಿ ಆ ವರದಿಯಲ್ಲಿ ಏನಾದರೂ ಬರಬಹುದು ಎಂದು ಹೇಳಿದ್ದೀರಿ. ಈಗ ನಾನು ನಿಮಗೆ ಸ್ಪಷ್ಟವಾಗಿ ಹೇಳುತ್ತೇನೆ, ಈಗ ಚುನಾವಣೆಗಳು ಬರುತ್ತಿವೆ, ನಾವು ಏನೂ ನಾಮಕರಣ ಸದಸ್ಯರು ಅಲ್ಲ, ನಾಮಕರಣ ಸದಸ್ಯರಾಗಿದ್ದರೆ ನಮಗೆ ತಾಲ್ಲೂಕು ಪಂಚಾಯತ್‌ಗಳು ಬೇಡ, ಜಿಲ್ಲಾ ಪಂಚಾಯತ್‌ಗಳು ಬೇಡ. ನಾವು ಚುನಾವಣೆಗೆಯಲ್ಲೆ ಗೆದ್ದು ಬಂದರೆ ಅಲ್ಲಿಯ ಜನರಿಗೆ ಬೇಕಾದ ಒಳ್ಳೆಯ ಆಡಳಿತವನ್ನು ನಡೆಸುವಂತೆ ಶಾಸಕರಿಗೆ ಒತ್ತಾಯಿಸಬಹುದು. ಇದರ ಬಗ್ಗೆ ತಾವು ಬಹಳ ಚಿಂತನೆ ಮಾಡಬೇಕು. ಈ ಆಶ್ರಯ ಕಮಿಟಿಗೆ ಕಾಲು ಇಲ್ಲ, ಕೈ ಇಲ್ಲ ಹೆಳವನ ಹಾಗೆ ಇದೆ. ಅದಕ್ಕೆ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಯಾವುದೇ ಚಿಂತನೆ ಮಾಡಿ ಅಧ್ಯಕ್ಷರಿಗೆ ಯಾವುದೇ ಅಧಿಕಾರ ಇಲ್ಲದ ಕಮಿಟಿ ಬೇಕಾಗಿಲ್ಲ. ಇದು ಕಣ್ಣು ಇದ್ದು ಕುರುಡರಾದ ಹಾಗೆ, ನಾವು ಅಲ್ಲಿ ಕುಳಿತುಕೊಳ್ಳುವುದು ಯಾರೋ ತಂದು ಕೊಡುವುದು ಅದಕ್ಕೆ ನಾವು

ಸಹಿ ಹಾಕುವುದು; ಫಲಾನುಭವಿಗಳನ್ನು ನೇರವಾಗಿ ಗುರುತಿಸುವಂತಹ ಅಧಿಕಾರ ಈ ಕಮಿಟಿಗೆ ಇರಬೇಕಾಗಿತ್ತು. ತಾವು ಸಚಿವರಾಗಿದ್ದೀರಿ. ಇದರ ನೋವು ತಮಗೆ ಗೊತ್ತಾಗುವುದಿಲ್ಲ, ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಎಲ್ಲಾ ಕ್ಷೇತ್ರಗಳಿಗೆ ಒಂದೊಂದು ಕಾರ್ಯಾಲಯ ಕೊಡಬೇಕು ಎಂದು ತಾವು ಹೇಳಿದ್ದೀರಿ ಸಂತೋಷ. ಈಗ ಕಾರ್ಯಾಲಯ ಎಂದರೆ ಸತ್ತ ಹೆಣವನ್ನು ಕುಯ್ಯುವ ಮನೆಗಾದರೂ ಒಂದು ಬಲ್ಬ್ ಇದೆ ಟೇಬಲ್ ಇದೆ, ಈ ಶಾಸಕರ ಕಾರ್ಯಾಲಯದಲ್ಲಿ ಒಂದು ಬೆಂಚ್ ಇಲ್ಲ, ಖುರ್ಚಿ ಇಲ್ಲ ಒಂದು ಬಲ್ಬ್ ಇಲ್ಲ ಕೆಲವು ಕ್ಷೇತ್ರಗಳಲ್ಲಿ ಕಾರ್ಯಾಲಯವನ್ನೇ ಕೊಟ್ಟಿಲ್ಲ. ಈ ರೀತಿಯ ಧೋರಣೆ ಭೇದ ಭಾವ ಏಕೆ? ಶಾಸಕರಿಗೆ ಕಾರ್ಯಾಲಯ ಬೇಕು ಎಂದು ನಿರಂತರವಾಗಿ ಸರ್ಕಾರದ ಜೊತೆಗೆ ಒಂದು ವರ್ಷದಿಂದ ಹೋರಾಟ ಮಾಡಿದ್ದಕ್ಕೆ ಇಂತವುಗಳನ್ನು ಕೊಟ್ಟಿದ್ದೀರಿ, ಇದರ ಕೀರ್ತಿ ನಿಮಗೆ ಹೋಗಲಿ, ಇದರ ಚಿತ್ರಣವನ್ನು ತಮಗೆ ಕೊಡುತ್ತೇನೆ. ಅಧ್ಯಕ್ಷರೆ, ತಮಗೆ ಅದರ ಅನುಭವವಾಗಿದೆಯೋ ಇಲ್ಲವೋ ಎಂಬುದು ಗೊತ್ತಿಲ್ಲ ಏಕೆಂದರೆ ತಾವು ಅಧ್ಯಕ್ಷರಾಗಿದ್ದೀರಿ ಆ ಕಾರ್ಯಾಲಯಕ್ಕೆ ಹೋಗುವ ಸಂಭವ ಇಲ್ಲ. ಇವರು ಮಂತ್ರಿಗಳಾಗಿದ್ದಾರೆ ಅದಕ್ಕೆ ಇವರು ಹೋಗುವುದಿಲ್ಲ, ನಾವು ಕಾರ್ಯಾಲಯಕ್ಕೆ ಹೋಗಬೇಕು ಎಂದರೆ ನನಗೆ ಇನ್ನೂ ಕಾರ್ಯಾಲಯ ಸಿಕ್ಕಿಲ್ಲ. ಇರಲಿ, ಅದರ ಬಗ್ಗೆ ಚರ್ಚೆಗೆ ಈಗ ನಾನು ಹೋಗುವುದಿಲ್ಲ. ಎಷ್ಟೋ ಜನ ಕಾರ್ಯಾಲಯ ಕೊಡಿ ಎಂದು ಜಿಲ್ಲಾಧಿಕಾರಿಗೆ ಕೇಳಿದರೆ ಆ ಜಿಲ್ಲಾಧಿಕಾರಿ ಅವರ ಮುಖವನ್ನು ನೋಡುವುದಿಲ್ಲ. ಕಾರ್ಯಲಯಗಳಿಗೆ ಸುಣ್ಣ ಹೊಡೆಯಿರಿ ಎಂದರೆ ಕೇಳುವವರು ಇಲ್ಲ, ಲೋಕೋಪಯೋಗಿ ಇಲಾಖೆಯವರು ಇದರ ಬಗ್ಗೆ ಕೇಳುವುದಿಲ್ಲ. ಈ ರೀತಿಯಾಗಿ ಒಬ್ಬ ಶಾಸಕರನ್ನು ಈ ಪರಿಸ್ಥಿತಿಗೆ ತಂದು ಇಟ್ಟಿದ್ದೀರಿ. ಇದರ ಉದ್ದೇಶ ಏನು ನಿಮಗೆ ಶಾಸಕರ ಬಗ್ಗೆ ಒಳ್ಳೆಯ ಅಭಿಪ್ರಾಯ ಇದೆಯಾ ಇಲ್ಲವೇ; ಅಲ್ಲಿ ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಕಾರ್ಯಾಲಯ ಇದೆ, ವ್ಯವಸ್ಥೆ ಇದೆ, ತಾಲ್ಲೂಕು ಪಂಚಾಯತ್ ಅಧ್ಯಕ್ಷರ ಸುತ್ತ 12 ಜನ ಅಧಿಕಾರಿಗಳು ಇರಬಹುದು. ಆದರೆ ಈ ಶಾಸಕನ ಪರಿಸ್ಥಿತಿ, ನಾನು ನನ್ನ ಬಗ್ಗೆ ಹೇಳುತ್ತಾ ಇಲ್ಲ, ಒಟ್ಟಾರೆ ಶಾಸಕರ ಬಗ್ಗೆ ಅವರ ಪರವಾಗಿ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಶಾಸಕರ ಪರಿಸ್ಥಿತಿ ಏನು ಆಗಿದೆ ಎಂದರೆ ಮನೆಯಲ್ಲಿ ಗಂಡ ಹೆಂಡರು ಜಗಳ ಮಾಡಿದರೆ ಹೆಂಡತಿ ಗಂಡನನ್ನು ಹೊಡೆದಳು ಎಂದು ಇಟ್ಟುಕೊಳ್ಳಿ. ಅದನ್ನು ನಾವು ಹೊರಗೆ ಬಂದು ಹೇಳಿಕೊಳ್ಳುವುದಿಲ್ಲ ನನ್ನ ಹೆಂಡತಿ ಹೊಡೆದಳು ಆದರೂ ನಾವು ಜೋರಾಗಿ ಇದ್ದೇವೆ ಎಂದು. ಆ ಪರಿಸ್ಥಿತಿ ನಮಗಾಗಿದೆ. ನಮಗೆ ಏನೇ ಅಗೌರವವಾದರೂ ಮಾನ ಹೋದರೂ ನಾವು ಏನೂ ಇದರಲ್ಲಿ ತಲೆ ಹಾಕುವ ಹಾಗೆ ಇಲ್ಲ. ಹೇಳಿಕೊಳ್ಳುವ ಹಾಗೆ ಇಲ್ಲ.

ಶ್ರೀ ಎಚ್.ಎಸ್.ನಂಜೇಗೌಡ: ಮಾನ್ಯ ಅಧ್ಯಕ್ಷರೆ, ನನ್ನದೊಂದು ಅಬ್ಜೆಕ್ಷನ್, ಹೆಂಡತಿಯರು ಹೊಡೆದರೆ ನಾವು ಹೇಳಿಕೊಳ್ಳುವುದಿಲ್ಲ ಎನ್ನುತ್ತಾರೆ. ಆದರೆ

ಹೆಂಡತಿಯರು ಹೊಡೆಯಬಾರದು ಎಂದು ಕಾನೂನು ಏನಾದರೂ ಇದೆಯಾ? ಅವರೇನು ಇನ್‌ಫೀರಿಯರ್ ಏನು? ಇವರು ಮಾತ್ರ ಅವರಿಗೆ ಹೊಡೆಯಬೇಕಾ; ಅವರೂ ಹೊಡೆಯಲಿ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರನ್ನು ಈ ವಿಷಯವನ್ನು ಸಹ ಚರ್ಚೆಯಲ್ಲಿ ತರಬೇಕು ಎಂದು ಬಹಳ ಪ್ರಯತ್ನ ಮಾಡುತ್ತಿದ್ದೇನೆ. ಆದರೆ ಅವರು ಏಕೋ ಸ್ಪಂದಿಸುತ್ತಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಂಜೇಗೌಡರ ಪ್ರೇರಣೆಯಿಂದ ಯಾರಾದರೂ ಇವತ್ತು ಗಂಡನನ್ನು ಹೊಡೆದು ಸಾಯಿಸೇಬಿಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರು ಏಕೋ ಸ್ಪಂದಿಸುತ್ತಿಲ್ಲ. ಇದರಿಂದ ನಮ್ಮ ಮನಸ್ಸಿಗೆ ನೋವಾಗುತ್ತದೆ. ಇಂಥ ಸಂದರ್ಭ ಬಂದಾಗ ನೀವು ಸ್ಪಂದಿಸಿ ಒಂದು ಬೆಳಕನ್ನು ಚಲ್ಲುತ್ತಿದ್ದಿರಿ; ಯಾಕೋ ಇವತ್ತು ಸ್ಪಂದಿಸುತ್ತಿಲ್ಲ. ನಾನು ಈ ಕೆಲವೊಂದು ವಿಚಾರಗಳನ್ನು ಪ್ರಕಾಶ್‌ರವರ ಗಮನಕ್ಕೆ ತಂದಿದ್ದೇನೆ, ತಾವು ಉತ್ತರ ಕೊಡುವಾಗ ಈ ತಿದ್ದುಪಡಿಯಲ್ಲಿ ಏನೇನು ಮಾಡುತ್ತೀರಿ ಎಂಬುದನ್ನು ತಿಳಿಸಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ): ಮಾನ್ಯ ಅಧ್ಯಕ್ಷರೆ, 1993ನೆ ಕಾಯಿದೆಗೆ ಏನು ತಿದ್ದುಪಡಿ ತಂದಿದ್ದಾರೆ ಸನ್ಮಾನ್ಯ ಸಚಿವರು ಅದನ್ನು, ಸ್ವಾಗತಿಸಲೇಬೇಕಾಗುತ್ತದೆ. ಅಧಿಕಾರಿಗಳಿಗೆ ಎಲ್ಲೆಲ್ಲಿ ನಿಯಂತ್ರಣ ಹೆಚ್ಚಾಗಿತ್ತು ಅದನ್ನು ಸ್ವಲ್ಪ ಕಡಿತ ಮಾಡಿ, ಅಧಿಕಾರೇತರ ಸದಸ್ಯರಿಗೆ ಹೆಚ್ಚು ಅಧಿಕಾರ ಕೊಡಲು ಮಾಡಿರುವ ಪ್ರಯತ್ನವನ್ನು ನಾನು ಅಭಿನಂದಿಸುತ್ತೇನೆ. 31ಬಿನಲ್ಲಿ ತಾವು ಏನು ಮಾಡಿದ್ದೀರಿ, ಸರ್ಕಾರಿ ಸೇವೆಯಲ್ಲಿರುವ ನೌಕರರ ಜೊತೆಗೆ, ಏಡೆಡ್ ಇನ್‌ಸ್ಟ್ಯೂಷನ್, ಮತ್ತು ಕೋ-ಆಪ್‌ರೇಟಿವ್ ಇನ್‌ಸ್ಟ್ಯೂಷನ್‌ಗಳಲ್ಲಿ ಇರುವ ನೌಕರರನ್ನು ಸೇರಿಸಿಕೊಂಡು ಬಿಟ್ಟರೆ ಒಳ್ಳೆಯದಾಗುತ್ತದೆ. ಈ ಪ್ರೈವೇಟ್ ಸ್ಕೂಲ್‌ಗಳಲ್ಲಿ ಇರುವವರು, ಪ್ರೈವೇಟ್ ಕಾಲೇಜುಗಳಲ್ಲಿ ಮತ್ತು ಕೋ ಆಪರೇಟೀವ್ ಇನ್‌ಸ್ಟಿಟ್ಯೂಷನ್‌ಗಳಲ್ಲಿರುವವರು ಎಲೆಕ್ಷನ್ ಪ್ರಕ್ರಿಯೆಗಳಲ್ಲಿ ಪಕ್ಷದ ಪರವಾಗಿ ಅಥವಾ ಅಭ್ಯರ್ಥಿಗಳ ಪರವಾಗಿ ಬರುವುದನ್ನು ತಾವು ತಪ್ಪಿಸಬೇಕಾಗುತ್ತದೆ. ಮತ್ತು ದುರ್ನಡತೆ ಎಂದರೆ ಏನು? ಏನೇನು ಆದಾಗ ದುರ್ನಡತೆ ಆಗುತ್ತದೆ, ಎಂದು ಸೆಕ್ಷನ್ 43ಎ ನಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಯಾರ ಮೇಲಾದರೂ ಪಕ್ಷ ಭೇದಕ್ಕೆ ಅಥವಾ ಸಭೆನಲ್ಲಿ ಏನಾದರೂ ಕೇಳುತ್ತಾರೆ ಎನ್ನೋ ಕಾರಣಕ್ಕೆ ಸಭೆಯನ್ನು ನಡೆಸತಕ್ಕ ಅಧ್ಯಕ್ಷರು ದುರ್ನಡತೆ ಮಾಡಿದರು ಎಂದು ಯಾರೋ ಒಬ್ಬ ಸದಸ್ಯನನ್ನು ಅಮಾನತ್ತು ಮಾಡುವುದು ಅಥವಾ ಸದಸ್ಯತ್ವದಿಂದ ಕಿತ್ತು ಹಾಕುವ ಸ್ಥಿತಿ ನಿರ್ಮಾಣ ಮಾಡಬಾರದು ಎಂದು ಹೇಳಿ, ತಾವು ಏನು 49ನೇ ಪ್ರಕರಣಕ್ಕೆ ಅಮೆಂಡ್‌ಮೆಂಟನ್ನು ತಂದಿದ್ದೀರಿ, ಅದನ್ನು ಪ್ರಜಾ ಪ್ರಭುತ್ವದ

ದೃಷ್ಟಿಯಲ್ಲಿ ಯೋಚನೆ ಮಾಡಿದಾಗ, ಅವಿಶ್ವಾಸ ನಿರ್ಣಯವನ್ನು ಒಂದು ವರ್ಷ ಆರು ತಿಂಗಳೊಳಗೆ ತರಬಾರದು ಎಂದು ಇದ್ದರೂ, ಒಬ್ಬ ಅಧ್ಯಕ್ಷ ಯಾವ ಸಪೋರ್ಟ್ ಇಲ್ಲದೆ ಒಂದು ವರ್ಷ ಒಂದು ಸಂಸ್ಥೆಯ ಅಧ್ಯಕ್ಷನಾಗಿ ಮುಂದುವರೆಯುವುದು ಖಂಡಿತ ಆಗಬಾರದು. ಇದರಲ್ಲಿ ನನ್ನದು ಭಿನ್ನಾಭಿಪ್ರಾಯ ಇದೆ. ಒಂದು ಸಂಸ್ಥೆಯ ಅಧ್ಯಕ್ಷನಿಗೆ ಅವಿಶ್ವಾಸ ನಿರ್ಣಯ ತಂದು ಒಂದು ವರ್ಷ ಸಹಕಾರ ಸಿಗದಂತಹ ಸ್ಥಿತಿ ಬಂದಾಗ ಆ ಸಂಸ್ಥೆಯ ಅಭಿವೃದ್ಧಿ ಆಗುವುದು ಸ್ವಲ್ಪ ಕಷ್ಟವಾಗುತ್ತದೆ. ತಾವು ಸ್ವಲ್ಪ ಇದರ ಬಗ್ಗೆ ಯೋಚನೆ ಮಾಡಿ ಅದನ್ನು ಅರ್ಧಕ್ಕೆ ಎಂದರೆ ಮೂರು ಅಥವಾ ಆರು ತಿಂಗಳಿಗೆ ಇಳಿಸಿದರೆ ಬಹುಶಃ ಒಳ್ಳೆಯದಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸಚಿವರು 120ನೇ ಪ್ರಕರಣಕ್ಕೆ ತಿದ್ದುಪಡಿ ತಂದು ಅಸಿಸ್ಟೆಂಟ್ ಕಮೀಷನರ್ ಎನ್ನುವ ಕಡೆ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಎಂದು ಮಾಡಿದ್ದೀರಿ, ಇದೊಂದು ಎಲೆಕ್ಷನ್ ಪ್ರಕ್ರಿಯೆ, ಪಂಚಾಯಿತಿ ಅಧ್ಯಕ್ಷರ ಪೈಕಿ ಮೂರನೇ ಒಂದು ಭಾಗದಷ್ಟು ಗುಂಪನ್ನು ಆರಿಸುವ ಕಡೆ ಅಸಿಸ್ಟೆಂಟ್ ಕಮೀಷನರ್ ಮಾಡುವ ಕೆಲಸವನ್ನು ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಕೊಟ್ಟರೆ ಖಂಡಿತ ಇರಿಸುಮುರಿಸು ಆಗುತ್ತದೆ. ಇದರಲ್ಲಿ ಅಧಿಕಾರ ಚಲಾಯಿಸುವ ಪ್ರಶ್ನೆ ಇಲ್ಲ. ಈ ಯಾವ ಅಧಿಕಾರಿಗಳ ಕೈಯಲ್ಲಿ ಕೊಟ್ಟರೂ ಕೂಡ ಚೆನ್ನಾಗಿ ಇರುತ್ತದೆ. ಅದನ್ನು ಅಸಿಸ್ಟೆಂಟ್ ಕಮೀಷನರ್ ಕೈಯಲ್ಲಿ ಕೊಡಿ ಅಥವಾ ಎಕ್ಸಿಕ್ಯೂಟೀವ್ ಆಫೀಸರ್ ಕೈಯಲ್ಲಿ ಕೊಡಬೇಕಾಗುತ್ತದೆ. ಅಧ್ಯಕ್ಷರು ನಾನ್ ಅಫಿಷಿಯಲ್ ಎಲೆಕ್ಷನ್ ಪ್ರಕ್ರಿಯೆಗಳಲ್ಲಿ ನೇರವಾಗಿ ಭಾಗವಹಿಸುವುದಕ್ಕೆ ಸಾಧ್ಯವಿಲ್ಲ; ತಪ್ಪಾಗುತ್ತದೆ, ಅದನ್ನು ತಾವು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ಶೌಚಾಗೃಹಗಳ ಬಗ್ಗೆ ನಾನೂ ಕೂಡ ಘೋರ್ಪಡೆಯವರಿಗೆ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಇದೊಂದು ಸಭೆಯ ಸದಸ್ಯನಾಗುವುದಕ್ಕೆ ಅರ್ಹತೆ ಆಗಬಾರದು. ಅದರ ಮೇಲೆ ನಿಮಗಿರುವ ಅಭಿಪ್ರಾಯ ಮತ್ತು ಆಕಾಂಕ್ಷೆಯನ್ನು ನಿಜವಾಗಿ ಮೆಚ್ಚತಕ್ಕದ್ದು. ಆದರೆ ಅದು ಒಂದು ನಿರ್ಬಂಧನೆ ಆಗಬಾರದು. ಅದು ಇಲ್ಲ ಎನ್ನುವ ಕಾರಣಕ್ಕೆ ಒಬ್ಬ ಸದಸ್ಯನನ್ನು ಅನರ್ಹ ಮಾಡುವುದು, ಅಥವಾ ಸದಸ್ಯತ್ವದಿಂದ ಕಿತ್ತು ಹಾಕುವುದು ಆಗಬಾರದು. ಮನೆಯಲ್ಲಿ ಶೌಚಾಲಯ ಇಲ್ಲದ ಕಾರಣಕ್ಕೆ ನೀನು ಅನರ್ಹ ಎನ್ನುವುದು ನಿಜವಾಗಿ ಕೆಟ್ಟದಾಗುತ್ತದೆ. ಆನಂತರ ತಾಲ್ಲೂಕು ಪಂಚಾಯತಿ ಪ್ರಕ್ರಿಯೆಗಳನ್ನು ತಾವು ನಿಗದಿ ಮಾಡಬೇಕಾದರೆ ಸಿವಿಲ್ ಅಮೆನಿಟಿಸ್ ಅಂದಿದ್ದರೆ ಸಾಕಾಗಿತ್ತು, ಅದು ಬಿಟ್ಟು 40 ಲೀಟರ್ ನೀರು ಕೊಡಲೇಬೇಕು, ಇದನ್ನೆಲ್ಲಾ ಮಾಡದಿದ್ದರೆ, ಅವರ ಪರಿಚಾಯತ್‌ನ್ನು, ಸೊಸೈಟಿಯನ್ನು ಸೂಪರ್‌ಸೀಡ್ ಮಾಡಲಿಕ್ಕೆ ಅವಕಾಶ ಇದೆ, ಆದರೆ ಅಲ್ಲಿನ ಪರಿಸ್ಥಿತಿಗಳಿಗನುಗುಣವಾಗಿ ಪಂಚಾಯಿತಿ ನಡೆದುಕೊಳ್ಳಬೇಕಾಗುತ್ತದೆ. ನಾಗರೀಕ ಸೌಲಭ್ಯಗಳನ್ನು ಒದಗಿಸುವಂತಹ ಕಡೆ ಪಂಚಾಯತಿ ಕೆಲಸ ಮಾಡಿದ್ದರೆ ಬಹುಶಃ ಚೆನ್ನಾಗಿ ಇರುತ್ತಿತ್ತು. ಮತ್ತೆ ತಾವು 179ನೇ ಪ್ರಕರಣಕ್ಕೆ ತಿದ್ದುಪಡಿ ತಂದಿರುವುದನ್ನು ಮತ್ತೊಮ್ಮೆ ಆಲೋಚನೆ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ, ಏಕೆಂದರೆ ಅಲ್ಲಿಯ ಅಧ್ಯಕ್ಷನಿಗೆ ಹಿಂಸೆ ಮಾಡಿ ಒಂದು ವರ್ಷ ಅಲ್ಲಿ

ಅಧ್ಯಕ್ಷನನ್ನಾಗಿ ಮುಂದುವರೆಸುವುದಕ್ಕೆ ಆಗುವುದಿಲ್ಲ. ತಾವು ಅಲ್ಲಿ ಅವಿಶ್ವಾಸ ನಿರ್ಣಯ ತಂದರೆ ಆ ಸಂಸ್ಥೆಯ ಆಡಳಿತಕ್ಕೆ ಪದೇ ಪದೇ ತೊಂದರೆ ಆಗುತ್ತಿದೆ ಎಂದು ಹೇಳಿದ್ದೀರಿ, ಅದೊಂದು ಬಾಧ್ಯತೆ ಆದರೆ ಅವನು ಉಳಿದುಕೊಳ್ಳುವುದು ಒಂದು ಬಾಧ್ಯತೆ ಆಗುತ್ತದೆ. ಅದರ ಬಗ್ಗೆ ಯೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಈ ರೆಸಲ್ಯೂಷನ್‌ಗಳು ಅಷ್ಟೆ, ಪಂಚಾಯತ್ ರೆಸಲ್ಯೂಷನ್‌ಗಳನ್ನು ತೆಗೆದು ಹಾಕುವುದು, ತಿದ್ದುಪಡಿ ಮಾಡುವುದೂ ಕೂಡ ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಅಧಿಕಾರ ಇರುವುದಕ್ಕಿಂತ, ತಾಲ್ಲೂಕು ಪಂಚಾಯತಿಗೆ ಎಂದು ಮಾಡಿದ್ದರೆ ಚೆನ್ನಾಗಿ ಇರುತ್ತಿತ್ತು. ಸಾಮಾನ್ಯವಾಗಿ ಹಿಂದೆ ನಿಮ್ಮ ಹಳೆಯ ಕಾಯಿದೆಗಳಲ್ಲಿ ಜಿಲ್ಲಾ ಪಂಚಾಯಿತಿಯ ಸ್ಥಾಯಿ ಸಮಿತಿಗಳಲ್ಲಿ ಒಂದಾದ ಸಾರ್ವಜನಿಕ ಸ್ಥಾಯಿ ಸಮಿತಿಯ ಉಪಾಧ್ಯಕ್ಷರು ಅಲ್ಲಿ ಕುಳಿತುಕೊಂಡು ಅಲ್ಲಿ ಅಪೀಲ್‌ಗಳನ್ನು ಹಿಯರ್ ಮಾಡುತ್ತಿದ್ದರು. ಒಬ್ಬ ಮನುಷ್ಯನ ಕೈಯಲ್ಲಿ ಒಂದು ಪಂಚಾಯಿತಿಯ ಅಪೀಲನ್ನು ಕೊಡುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಮತ್ತೆ ಸೆಕ್ಷನ್ 237ಕ್ಕೆ ತಾವು ಏನು ತಂದಿದ್ದೀರಿ, ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಎಂದು ಇರುವ ಕಡೆ ಅದನ್ನು ತಾಲ್ಲೂಕು ಪಂಚಾಯತ್ ಎಂದು ಮಾಡಿದ್ದರೆ ಚೆನ್ನಾಗಿ ಇರುತ್ತದೆ ಎಂದು ನನ್ನ ಒಂದು ಅಭಿಪ್ರಾಯ. ಮತ್ತೆ 4ನೇ ಉಪ ಪ್ರಕರಣದಲ್ಲೂ ಕೂಡ ಜಿಲ್ಲಾ ಪಂಚಾಯತ್ ಅಧ್ಯಕ್ಷರನ್ನು ಅನ್ನುವ ಕಡೆ ಜಿಲ್ಲಾ ಪಂಚಾಯತ್ ಎಂದು ಮಾಡಿ, ಮೂರ್ನಾಲ್ಕು ಜನ ಕೂತು ಸಿಂಗಲ್ ಬೆಂಚ್ ಆಗಿರುವುದಕ್ಕಿಂತ ಡಿವಿಶನ್ ಬೆಂಚ್‌ಗೆ ಅಪೀಲ್ ಹಾಕಿದ ಹಾಗೆ ಇರಬೇಕು. ಯಾರೋ ಒಬ್ಬರು ರಾಜಕೀಯಕೋಸ್ಕರ ಅದನ್ನು ಬಳಸುವಂತಹ ಸ್ಥಿತಿಯನ್ನು ನೀವು ನಿರ್ಮಾಣ ಮಾಡಬಾರದು. ಇನ್ನು ತಾವು ರಾಜ್ಯ ಪಂಚಾಯತ್ ಪರಿಷತ್ ಎಂದು ಏನು ಮಾಡಿದ್ದೀರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಕಾರ್ಯದರ್ಶಿ ಬದಲು

6. 10 ಪಿ.ಎಂ

ಡೆವಲಪ್‌ಮೆಂಟ್ ಕಮೀಷನವರು ಅದರ ಕಾರ್ಯದರ್ಶಿಯಾದರೆ ಒಳ್ಳೆಯದು. ಹಿಂದಿನ ಡೆವಲಪ್‌ಮೆಂಟ್ ಕಮೀಷನರ್ ಈ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳನ್ನು ರಿವ್ಯೂ ಮಾಡುತ್ತಾರೆ. ಅವರು ಸರ್ಕಾರಕ್ಕೆ ಒಂದು ವರದಿಯನ್ನು ಕೊಡುತ್ತಿದ್ದರು, ಇವತ್ತು ಡೆವಲಪ್‌ಮೆಂಟ್ ಕಮೀಷನರ್ ಅನ್ನು ಆ ಸಮಿತಿಗೆ ಪದನಿಮಿತ್ತ ಕಾರ್ಯದರ್ಶಿ ಮಾಡುವುದು ಒಳ್ಳೆಯದಾಗುತ್ತದೆ. ಆಮೇಲೆ ತಾವು ಏನು ಜಿಲ್ಲಾ ಪ್ಲಾನಿಂಗ್ ಕಮೀಷನ್ ಮಾಡಿದ್ದೀರಿ; ಮುನ್ಸಿಪಾಲಿಟಿ ಅಧ್ಯಕ್ಷ ಅಧ್ಯಕ್ಷರಾಗಿರುವುದು ಉಪಾಧ್ಯಕ್ಷರಾಗಬೇಕು ಎಂದರೆ ಸ್ವಲ್ಪ ಕಷ್ಟವಾಗುತ್ತದೆ. ಅವರು ಒಂದು ಜಿಲ್ಲೆಗೆ ಮೂರು ಮುನ್ಸಿಪಾಲಟಿಯಿಂದ ಚುನಾಯಿತರಾಗಿ ಬಂದಿರುತ್ತಾರೆ. ಅಕಸ್ಮಾತ್ ಮುಖ್ಯ ಕೇಂದ್ರದವರು ಚುನಾಯಿತರಾಗಿಲ್ಲದೆ ಹೋದರೆ, ಅಲ್ಲಿ ಉಪಾಧ್ಯಕ್ಷರನ್ನು ತಾವು ಮಾಡುವುದಕ್ಕೆ ಆಗುವುದಿಲ್ಲ. ಕಾನೂನಿನಲ್ಲಿ ಅವರೇ

ಆಗಬೇಕೆಂದು ಮಾಡಿದರೆ ಆ ಸ್ಥಾನ ತಪ್ಪಿ ಹೋಗುತ್ತದೆ. ಆದ್ದರಿಂದ ಅಮಾಂಗ್ಸ್ ಎಂದು ಮಾಡಿ, ಮುನ್ಸಿಪಾಲಿಟಿಗಳಿಂದ ಒಬ್ಬರನ್ನು ಉಪಾಧ್ಯಕ್ಷರನ್ನು ಮಾಡಲಿಕ್ಕೆ ನಮ್ಮದೇನೂ ತಕರಾರು ಇಲ್ಲ. ಇವರೆ ಆಗಬೇಕೆಂದು ಸ್ಪಷ್ಟವಾಗಿ ಹೇಳಿ, ಅವರು ಮೆಂಬರ್ ಆಗಲಿಕ್ಕೆ ಅವಕಾಶ ಇಲ್ಲದಂತಹ ಸ್ಥಿತಿಯಲ್ಲಿ ಲ್ಯಾಕೂನಾ ಸೃಷ್ಟಿ ಆಗಬಹುದು ಎಂದು ಹೇಳಿ, ನಾನು ಈ ಬಿಲ್ಲನ್ನು ಸ್ವಾಗತಿಸುತ್ತೇನೆ. ತಾವು ಏನು ಅಧಿಕಾರಿಗಳಿಗೆ ಆಬ್ಸಲ್ಯೂಟ್ ಪವರ್ಸ್ ಕೊಡಬಾರದೆಂದು ಏನು ಚಿಂತನೆ ಮಾಡಿದ್ದೀರಿ ಅಷ್ಟೇ ಸತ್ಯವಾಗಿ ಒಬ್ಬ ಮನುಷ್ಯನ ಕೈಯಲ್ಲಿ ಎಲ್ಲಾ ಅಧಿಕಾರ ಕೊಡುವುದು ಕೆಲವು ಸಮಯ ತಪ್ಪಾಗುತ್ತದೆ ಅದನ್ನು ಸ್ವಲ್ಪ ಬೈಫರ್ಕೇಟ್ ಮಾಡಿಕೊಡುವುದು ಉತ್ತಮ, ಮತ್ತು ಅವಿಶ್ವಾಸ ನಿರ್ಣಯ ಒಂದು ವರ್ಷಕ್ಕೆ ತರಬಾರದು ಎನ್ನುವುದು ಕೆಲವು ಸಾರಿ ಭಾರಿ ತಪ್ಪಾಗುತ್ತದೆ. ಇದರಿಂದ ಒಂದು ವರ್ಷ ಕಾರ್ಯಗಳು ಸ್ಥಗಿತವಾಗುವ ಸ್ಥಿತಿನೂ ಕೆಲವು ಸಲ ನಿರ್ಮಾಣವಾಗುತ್ತದೆ. ಅದರ ಪೀರಿಯೆಡ್ ಅನ್ನು ಸ್ವಲ್ಪ ಕಡಿಮೆ ಮಾಡಬೇಕೆಂದು ಕೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್‌ರಾಜ್ 3ನೇ ತಿದ್ದುಪಡಿ ವಿಧೇಯಕವನ್ನು ಸ್ವಾಗತ ಮಾಡುತ್ತಾ, ನಿಜವಾದ ಪ್ರಜಾಪ್ರಭುತ್ವದ ವಿಚಾರವನ್ನು ತಾವು ಇಲ್ಲಿ ಚಿಂತನೆ ಮಾಡಿದ್ದೀರಿ, ಆದರೆ ನೀವು ಆರ್ಥಿಕವಾಗಿ ಚಿಂತನೆ ಮಾಡಿಲ್ಲ ಎನ್ನುವುದು ನನ್ನ ಅಭಿಪ್ರಾಯ. ನಿಜವಾಗಿಯೂ ಗ್ರಾಮಪಂಚಾಯಿತಿಯ ಸ್ಟ್ರೆಂಗ್ಥನ್ ಮಾಡಬೇಕು. ಅಧಿಕಾರದ ವ್ಯಾಪ್ತಿ, ಮತ್ತು ಗ್ರಾಮಪಂಚಾಯತ್ ಬಗ್ಗೆ ತಾವು ತಿಳಿಸಿದ್ದೀರಿ. ಗ್ರಾಮ ಪಂಚಾಯತ್‌ನವರು ಯಾವ ಯಾವ ರೀತಿಯ ಕಾರ್ಯಕ್ರಮಗಳನ್ನು ಮಾಡಬೇಕು, ಉದಾಹರಣೆಗೆ ಜಿಲ್ಲಾಪಂಚಾಯತ್ ಮತ್ತು ಗ್ರಾಮಪಂಚಾಯತ್‌ಗಳಲ್ಲಿ, ಈ ನಾನ್ ಪ್ಲಾನಿಂಗ್ ಹಣವನ್ನು ಜಿಲ್ಲಾ ಪಂಚಾಯತ್‌ನವರು ಪಡೆಯಬೇಕು ಪ್ಲಾನಿಂಗ್ ಹಣವನ್ನು ತಾಲ್ಲೂಕು ಪಂಚಾಯತ್‌ನವರು ಪಡೆಯಬೇಕು. ಗ್ರಾಮಪಂಚಾಯತ್‌ಗೆ ಆರ್ಥಿಕವಾಗಿ ನಾವು ಏನು ಕೊಡುತ್ತೇವೆ, ಕೆಲವು ಗ್ರಾಮಪಂಚಾಯತ್‌ಗಳಿಗೆ ಜವಾಹರ್ ರೋಜ್‌ಗಾರ್ ಯೋಜನೆ, ಇ.ಎ.ಎಸ್. ಎಂದು ಹೇಳಿ ಹಣ ಬರುತ್ತದೆ. ಕೆಲವು ಗ್ರಾಮಪಂಚಾಯತ್‌ಗಳಿಗೆ ಕಂದಾಯದ ಹಣ ಬರುತ್ತದೆ. ಕನಿಷ್ಟ ಪಕ್ಷ ನಾನ್ ಪ್ಲಾನಿಂಗ್ ಹಣ ಒಂದು 30-40 ಲಕ್ಷ ಬಂದರೆ, ತಾವು ಹೇಳಿದಂತೆ ಪಂಚಾಯತ್‌ಗೆ ಸಂಬಂಧಪಟ್ಟ ರಸ್ತೆಗಳು, ಮತ್ತು ಸೇತುವೆಗಳನ್ನು ಆಯಾ ಗ್ರಾಮಪಂಚಾಯತ್‌ಗಳವರು ರಿಪೇರಿ ಮಾಡತಕ್ಕಂಥದ್ದು ಮಾಡಿಕೊಳ್ಳುತ್ತಾರೆ. ಆರ್ಥಿಕ ಸಂಪನ್ಮೂಲನೇ ಇಲ್ಲದೆ ಗ್ರಾಮಪಂಚಾಯತ್ ಸ್ಟ್ರೆಂಗ್ಥನ್ ಮಾಡಲಿಕ್ಕೆ ಹೇಗೆ ಸಾಧ್ಯ ನೀವೇ ಹೇಳಿ. ಆದುದರಿಂದ, ನಿಜವಾದ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತ್ ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮೊನ್ನೆ ನಮ್ಮ ಪಂಚಾಯತ್‌ನಲ್ಲಿ ಇಬ್ಬರು ನೌಕರರು ಸತ್ತರು, ಅವರು ಪರಿಶಿಷ್ಟ ವರ್ಗಕ್ಕೆ ಸೇರಿದ್ದು ಕಸವನ್ನು ಗುಡಿಸತಕ್ಕ ಕೆಲಸ ಮಾಡುತ್ತಿದ್ದರು.

ಅವರಿಗೆ ಜೀವನಕ್ಕೆ ಏನು ಭದ್ರತೆ ಇಲ್ಲ. ಅವರಿಗೆ 350 ರೂಪಾಯಿ ಸಂಬಳ ಕೊಡುತ್ತಿದ್ದರು, ಅವರು ನಮಗೋಸ್ಕರ ತಮ್ಮ ಆರೋಗ್ಯವನ್ನು ಹಾಳು ಮಾಡಿಕೊಂಡು ಅವರು ಸತ್ತರು. ನಿಜವಾಗಿ ಅವರಿಗೆ ಉದ್ಯೋಗದ ಭದ್ರತೆ ಇರಬೇಕು. ಜೊತೆಗೆ ವಿಮಾ ಭದ್ರತೆ ಕೊಡಬೇಕು, ಯಾರು ಈ ಸಮಾಜದ ಪರವಾಗಿ ಕೆಲಸ ಮಾಡುತ್ತಾರೆ, ಅವರನ್ನು ಪರಿಶಿಷ್ಟ ವರ್ಗದ ಜನರನ್ನು ತಾವು ನೇಮಕ ಮಾಡಿಕೊಂಡು, ಅವರ ಜೀವನ ಭದ್ರತೆಗೆ ಅವರಿಗೆ ಏನೂ ಕೊಡದೆ ಇದ್ದರೆ, ಸರಿಯಾಗಿಲ್ಲ. ಆದುದರಿಂದ ತಾವು ದಯವಿಟ್ಟು ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಆಮೇಲೆ ಪಂಚಾಯತ್ ಅಧ್ಯಕ್ಷರು ಸಮಯೋಚಿತವಾಗಿ, ಅಲ್ಲಿನ ಪಂಚಾಯತ್ ಕೆಲಸಕ್ಕೆ ತಕ್ಕಂತೆ ಕೆಲಸಗಾರರನ್ನು ನೇಮಿಸಿಕೊಳ್ಳತಕ್ಕ ಒಂದು ಜವಾಬ್ದಾರಿಯನ್ನು ಅವರಿಗೆ ಕೊಡಬೇಕು ಮತ್ತು ಆರೋಗ್ಯ ತಪಾಸಣೆ ಮಾಡತಕ್ಕ ವಿಚಾರದಲ್ಲಿ ಪಂಚಾಯತ್‌ನವರು ಪೂರ್ತಿ ಇನ್‌ವಾಲ್ವ್‌ಮೆಂಟ್ ಇರಬೇಕು. ಆರೋಗ್ಯ ತಪಾಸಣೆ ಮಾಡತಕ್ಕಂಥ ವಿಚಾರದಲ್ಲಿ ಪಂಚಾಯಿತಿಯವರ ಪೂರ್ತಿ ಇನ್‌ವಾಲ್ವ್‌ಮೆಂಟ್ ಇರಬೇಕು. ಅದರ ಹೊಣೆಗಾರಿಕೆಯನ್ನೂ ತಾವು ದಯವಿಟ್ಟು ಕೊಡಬೇಕು. ಅರಣ್ಯ ಬೆಳೆಸತಕ್ಕಂಥ ಹೊಣೆಗಾರಿಕೆಯಲ್ಲೂ ಆಯಾಯ ಪಂಚಾಯಿತಿಗೆ ಇನ್‌ವಾಲ್ವ್‌ಮೆಂಟ್ ಮಾಡಬೇಕು, ಅದಕ್ಕೆ ಅರಣ್ಯ ಇಲಾಖೆಯವರು ಸ್ಪಂದಿಸತಕ್ಕಂಥ ಒಂದು ಹೊಣೆಗಾರಿಕೆಯನ್ನೂ ತಾವು ಕೊಡಬೇಕು. ಪಂಚಾಯಿತಿಯಲ್ಲಿ ಈಗ ನಾವು ದಿವಸ ಜಗಳ ಕಾಯುತ್ತಿದ್ದೇವೆ, ಮರಳು ಹೀಗೆ ಆಗುತ್ತಿದೆ, ಕಲ್ಲು ಹೀಗೆ ಆಗುತ್ತಿದೆ ಎಂದು. ನಿಜವಾಗಿಯೂ ಯಾವುದೇ ನಿಯಂತ್ರಣವಿಲ್ಲ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಯಾವುದೇ ನಿಯಂತ್ರಣವಿಲ್ಲ. ಈ ಇಲಾಖೆಗೆ ಇದರಿಂದ ಯಾವುದೇ ತೆರಿಗೆ ಬರುತ್ತಿಲ್ಲ. ಆದ್ದರಿಂದ ದಯವಿಟ್ಟು ಆ ಕಲ್ಲು ಮತ್ತು ಮರಳನ್ನು ಪಂಚಾಯಿತಿಗೆ ಕೊಟ್ಟರೆ, ಅದರಿಂದ ಬರತಕ್ಕ ಹಣದ ಮೂಲಕ ಪಂಚಾಯಿತಿಯ ಕೆಲಸವನ್ನು ಮಾಡಬಹುದು ಎಂದು ಹೇಳುತ್ತೇನೆ. ಕುಟುಂಬ ಯೋಜನಾ ಕಾರ್ಯಕ್ರಮದಲ್ಲಿ ಪಂಚಾಯಿತಿಯ ಇನ್‌ವಾಲ್ವ್‌ಮೆಂಟ್ ಆಗಬೇಕು. ಶಿಕ್ಷಣದ ಬಗ್ಗೆ ಪಂಚಾಯಿತಿಯ ಇನ್‌ವಾಲ್ವ್‌ಮೆಂಟ್ ಆಗಬೇಕು. ರಾಜಕಾರಣ ಎಂದರೆ ಸೇವೆ. ಆ ಸೇವೆಗೆ ಸಂಬಂಧಪಟ್ಟಂಥ ಎಲ್ಲಾ ವಿಚಾರಗಳಲ್ಲೂ ಇನ್‌ವಾಲ್ವ್ ಮಾಡತಕ್ಕಂಥ ವಿಚಾರವನ್ನು ತಾವು ಚಿಂತನೆ ಮಾಡಬೇಕು ಎನ್ನುವುದನ್ನು ಅಧ್ಯಕ್ಷರ ಮೂಲಕ ಗ್ರಾಮೀಣಾಭಿವೃದ್ಧಿ ಸಚಿವರ ಗಮನಕ್ಕೆ ತರುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಶಿವಪ್ಪ (ಹರಿಹರ): ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಮಸೂದೆಗೆ ತಂದಿರತಕ್ಕಂಥ ತಿದ್ದುಪಡಿಗಳನ್ನು ಸಂಪೂರ್ಣವಾಗಿ ಸ್ವಾಗತಿಸಿ, ಸಚಿವರಿಗೆ ಅಭಿನಂದಿಸಿ ಒಂದೆರಡು ಸಲಹೆಗಳನ್ನು ಕೊಡಲು ಇಚ್ಛೆಪಡುತ್ತೇನೆ. ಈ ತಿದ್ದುಪಡಿಯ ಸೆಕ್ಷನ್ 12ರ ಕೊನೆಯಲ್ಲಿ ಇವರು "...If he is either directly or indirectly by himself or by his agent, partner or employee involved in obtaining or execution of any such work or contract on

behalf of the Grama Panchayat or of any contract for the supply of goods and services." ಎಂದು ಇದೆ. ಎಂದರೆ ಅದರ ಅರ್ಥ ಏನು ಎನ್ನುವುದು ಈಗ ಗೊತ್ತಾಗುವುದಿಲ್ಲ. ಕೇವಲ ಗೂಡ್ಸ್ ಎಂದಿದ್ದರೆ ಸಾಕಾಗುತ್ತಿತ್ತು. ಸರ್ವೀಸಸ್ ಎಂದರೆ ಅದು ದ್ವಂದ್ವವಾಗುತ್ತದೆ. ಅದರ ಬಗ್ಗೆ ತಾವು ಯೋಚನೆ ಮಾಡಬೇಕು.

43A: Removal of members for mis-conduct. Guilty of misconduct. ಅದನ್ನು ನೀವು ಡೆಫನಿಷನ್‌ನಲ್ಲಿ ಹೇಳಬೇಕಾಗಿತ್ತು. ಗಿಲ್ಟಿ ಆಫ್ ಮಿಸ್‌ಕಾಂಡಕ್ಟ್ ಎನ್ನುವುದನ್ನು ತೀರ್ಮಾನ ಮಾಡುವವರು ಯಾರು? ಅದರ ಬಗ್ಗೆ ಸ್ಪಷ್ಟವಾಗಿ ಹೇಳಿದರೆ ಮಾತ್ರ ಒಳ್ಳೆಯದು. "The Government if it thinks fit, on the recommendation of the Grama Panchayat, or otherwise..."

ಶ್ರೀ ಎಂ.ಪಿ.ಪ್ರಕಾಶ್: ಅಂದರೆ ಗ್ರಾಮ ಪಂಚಾಯಿತಿಯವರು ಅಲ್ಲದೇ, ಬೇರೆ ಯಾರಾದರೂ ಅದನ್ನು ಪ್ರತ್ಯಕ್ಷದರ್ಶಿಗಳಾದಂಥವರು ನೋಡಿ, ಇಂಥ ದುರ್ನಡತೆ ಮಾಡಿದ್ದಾರೆ ಎನ್ನುವುದು ಬಂದಾಗ, ಅದನ್ನು ಪರಿಗಣಿಸಬಹುದು.

ಶ್ರೀ ಹೆಚ್.ಶಿವಪ್ಪ: ಆಗ ಇದಕ್ಕೆ ಕೊನೆಯೇ ಇರುವುದಿಲ್ಲ. ಯಾರಾದರೂ ಆಗಿಂದ್ದಾಗ್ಗೆ ಪುನಃ ಪುನಃ ಅಂಥ ಬೇಡಿಕೆಗಳನ್ನು ಕೊಡಬಹುದು. ಅದಕ್ಕಾಗಿ, ಸ್ಪಷ್ಟವಾಗಿ ಇಂಥವರಿಂದ ಶಿಫಾರಸ್ಸು ಬಂದರೆ ಮಾತ್ರ ಕ್ರಮ ತೆಗೆದುಕೊಳ್ಳಬೇಕು ಎಂದು ಇದ್ದರೆ ಒಳ್ಳೆಯದು. ತಾವು ಅದರ ಬಗ್ಗೆ ಯೋಚನೆ ಮಾಡಬೇಕು. ಮಾಧುಸ್ವಾಮಿಯವರು ಹೇಳಿದ ಹಾಗೆ, ಒಂದು ವರ್ಷದವರೆಗೆ ಅವಿಶ್ವಾಸ ಸೂಚನೆಯನ್ನೇ ತರಬಾರದು ಎಂದರೆ, ಈ ಕೆಟಗರಿ ಮಾಡಿ ಒಂದು ವರ್ಷದತನಕ ಬಹುಮತವೇ ಇಲ್ಲದೆ ಈ ಸಭೆಗಳನ್ನು ನಡೆಸುವುದು ಹೇಗೆ? ಕಾರ್ಯಕ್ರಮಗಳನ್ನು ನಡೆಸುವುದು ಹೇಗೆ? ಜೊತೆಗೆ ಒಂದು ಕೆಟಗರಿಗೆ ಅಧ್ಯಕ್ಷಗಿರಿ ಕೊಟ್ಟರೆ, ಉದಾಹರಣೆಗೆ ಒಬ್ಬರೇ ಒಬ್ಬರು ಚುನಾಯಿತರಾಗಿರುತ್ತಾರೆ. ಅವರನ್ನು ತೆಗೆದುಹಾಕಿದರೆ ಬೇರೆಯವರು ಬರಲು ಸಾಧ್ಯವಿಲ್ಲ. ಆದ್ದರಿಂದ ಮುಂದಿನ ಕೆಟಗರಿಗೆ ಅಧ್ಯಕ್ಷರೆಂದಾಗಲೀ, ಉಪಾಧ್ಯಕ್ಷರೆಂದಾಗಲೀ ಕೊಡಲು ಏಕೆ ಯೋಚನೆ ಮಾಡಬಾರದು? ಇಂಥ ಸಮಯ ಪರಿಶಿಷ್ಟ ಜಾತಿಯವರಿಗೆ ಎಂದು ನಿಗದಿ ಮಾಡಿಬಿಡುತ್ತೀರಿ. ಆ ಪರಿಶಿಷ್ಟ ಜಾತಿಯ ಅಭ್ಯರ್ಥಿಯಾದ ಅಧ್ಯಕ್ಷರನ್ನು ತೆಗೆದು ಹಾಕಿದರೆ ಅಥವಾ ಅಂಥವರು ಇಲ್ಲದೇ ಇದ್ದರೆ ಪರಿಶಿಷ್ಟ ವರ್ಗದವರಿಗೆ ಕೊಡಿ. ರೊಟೇಷನ್ ಟೈಪ್ ಕೊಡಿ. ಆ ರೀತಿ ಯೋಚನೆ ಮಾಡಲು ತಾವು ಪ್ರಯತ್ನ ಮಾಡಬೇಕು. ನಂತರ, 45ನೇ ಸೆಕ್ಷನ್‌ನ ತಿದ್ದುಪಡಿಯ ಕೊನೆಯಲ್ಲಿ. ".. call for a meeting of the Grama Panchayat and preside over it, without right to vote, and in such

meeting the Adhyaksha or the upadhyaksha both, as the case may be, shall be elected." What is the mode of election? Is it by raising hands or secret ballot? ಅಲ್ಲಿ ತರಲೆ ಬರುತ್ತದೆ. ಸೀಕ್ರೆಟ್ ಬ್ಯಾಲೆಟ್ ಎಂದರೆ ಯಾವ ರೀತಿ ಮಾಡಬೇಕು ಎಂದು. ಅದನ್ನೂ ಸೇರಿಸಿದರೆ ಒಳ್ಳೆಯದು. ಇನ್ನು ಶೌಚಾಲಯಗಳ ಬಗ್ಗೆ ಹೇಳಬೇಕು ಎಂದರೆ, ನನಗನ್ನಿಸುತ್ತದೆ, ಕೆಲವು ಕಡೆ ಕುಡಿಯುವುದಕ್ಕೇ ನೀರು ಇಲ್ಲ, ತೊಳೆದುಕೊಳ್ಳುವುದಕ್ಕೆ ಎಲ್ಲಿಂದ ತರಬೇಕು? ಅಲ್ಲಿ ಕುಡಿಯುವುದಕ್ಕೇ ನೀರು ಇಲ್ಲ. ಇವತ್ತು ಅದಕ್ಕೋಸ್ಕರವಾಗಿ ಒಬ್ಬ ಚುನಾಯಿತ ಸದಸ್ಯನನ್ನು ಅನರ್ಹಗೊಳಿಸುವುದು ನಿಜವಾಗಲೂ ಒಂದು ಕಠಿಣವಾದ ಶಿಕ್ಷೆ ಎಂದು ನಾವು ಯೋಚನೆ ಮಾಡಬೇಕು. ಅದರ ಬಗ್ಗೆ ತಾವು ಚಿಂತನೆ ಮಾಡಬೇಕು. ಅದನ್ನು ಕೈ ಬಿಟ್ಟರೆ ಒಳ್ಳೆಯದು. ಏಕೆಂದರೆ, ಅವನು ಎಷ್ಟು ಕಷ್ಟಪಟ್ಟು ಚುನಾವಣೆಯಲ್ಲಿ ಗೆದ್ದು ಬಂದಿರುತ್ತಾನೆ. ಈ ಒಂದು ಕೊರತೆಗೋಸ್ಕರ, ಅವನು ಶೌಚಾಲಯಗಳನ್ನು ಕಟ್ಟಲಿಲ್ಲ ಎಂದು ಅನರ್ಹಗೊಳಿಸುವುದು ಬೇಡ. ನೀರೇ ಇಲ್ಲದಿದ್ದ ಮೇಲೆ ಅವನು ಹೇಗೆ ಶೌಚಾಲಯಗಳನ್ನು ಕಟ್ಟುವುದಕ್ಕಾಗುತ್ತದೆ? ಸಭೆ ಆದನಂತರ ವರದಿ ಕಳುಹಿಸಲು ನೀವು ಚೀಫ್ ಎಕ್ಸಿಕ್ಯುಟೀವ್‌ಗೆ 15 ದಿವಸಗಳ ವಾಯಿದೆಯನ್ನು ಕೊಟ್ಟಿದ್ದೀರಿ. ಅದು ಬಹಳ ಅಪಾಯಕಾರಿ. ನಾವು ತಪ್ಪು ತೀರ್ಮಾನ ಮಾಡಿ, 15 ದಿವಸಗಳೊಳಗೆ ಸರ್ಕಾರದಿಂದ ಅದಕ್ಕೆ ಒಪ್ಪಿಗೆ ಬರದಿದ್ದರೆ ನಾವು ತಪ್ಪು ತೀರ್ಮಾನವನ್ನೇ ಅನುಷ್ಠಾನಕ್ಕೆ ತರಬೇಕಾಗುತ್ತದೆ. It could be manouvered, managed. ಬಹುಶಃ ನಾವು ಏನಾದರೂ ತಪ್ಪು ಮಾಡಿದ್ದನ್ನು ಸರ್ಕಾರಕ್ಕೆ ಕಳುಹಿಸಿದರೆ, ಅದು ತಕ್ಷಣವೇ 15 ದಿವಸದಲ್ಲಿ ಬರದಿದ್ದರೆ, It may go against the spirit of the Act. ಅದರ ಬಗ್ಗೆಯೂ ತಾವು ಯೋಚನೆ ಮಾಡಬೇಕು. ನಂತರ, ನೌಕರರ ಬಗ್ಗೆ ಹೇಳಬೇಕೆಂದರೆ, ಇವತ್ತು ಏನಾಗಿದೆ ಎಂದರೆ ಸರ್ಕಾರದಿಂದ ಡೆಪ್ಯುಟೇಷನ್ ಮೇಲೆ ಬರುತ್ತಿದ್ದಾರೆ. ಇದರಿಂದ ಏನಾಗಿದೆ ಎಂದರೆ ಕುದುರೆ ಓಡಿಸುವವರು ಒಬ್ಬರು, ಲಗಾಮು ಇನ್ನೊಬ್ಬರ ಕೈಯ್ಯಲ್ಲಿ ಎಂದಾಗಿದೆ. ಈಗ ಆ ಕುದುರೆ ನಮ್ಮ ಹಿಡಿತದಲ್ಲಿ ಇರುವುದಿಲ್ಲ. ಲಗಾಮು ಇದ್ದರೆ ಅತ್ತ, ಇತ್ತ ತಿರುಗಿಸಿಕೊಂಡು ಹೋಗಬಹುದು. ಯಾರು ಆಡಳಿತ ಮಾಡುತ್ತಾರೆ, ಅವರು ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಳ್ಳುವುದಕ್ಕೆ ಅಧಿಕಾರವಿರಬೇಕು. ಹಾಗಾದರೆ ಮಾತ್ರ, transparency in administration can be ensured, stability can be ensured. ಆದ್ದರಿಂದ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ಪಶ್ಚಿಮ ಬಂಗಾಳದಲ್ಲಿರುವಂತೆ ಒಂದು ಡೈರೆಕ್ಟರೇಟನ್ನು, ಇಂಡಿಪೆಂಡೆಂಟ್ ರೆಕ್ರೂಟ್‌ಮೆಂಟ್ ಕಮೀಷನ್‌ಅನ್ನು ನಾವು ಸ್ಥಾಪನೆ ಮಾಡಿದರೆ ಒಳ್ಳೆಯದು. ಇನ್ನು ಸೆಕ್ಷನ್ 197, ಜ್ಯೂರಿಸ್‌ಡಿಕ್ಷನ್ ಬಗ್ಗೆ ನಮ್ಮ ಹಿರಿಯ ಸದಸ್ಯರಾದಂಥ ಘೋರ್ಪಡೆಯವರು ಹೇಳಿದರು, ಸರ್ಕಾರದಿಂದ ಹಣವನ್ನು ಅಧಿಕಾರಿಗಳಿಗೆ ಕೊಡುವುದರಿಂದ ಅದನ್ನು ವರ್ಗಾವಣೆ ಮಾಡತಕ್ಕಂಥ ಅಧಿಕಾರಿ ಸರ್ಕಾರಕ್ಕೆ ಇರಬೇಕು ಎಂದು. ಅಲ್ಲಿ ನನ್ನದು ಸ್ವಲ್ಪ

ಭಿನ್ನಾಭಿಪ್ರಾಯವಿದೆ. ಏಕೆಂದರೆ ಆಗಲೇ ಹೇಳಿದ ಹಾಗೆ ಕುದುರೆ ಓಡಿಸುವವರು ಒಬ್ಬರು, ಲಗಾಮು ಒಬ್ಬರ ಕೈಯ್ಯಲ್ಲಿ ಇದ್ದರೆ ಸರಿಯಾಗಿ ಆಡಳಿತ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಒಂದು ಪ್ರತ್ಯೇಕವಾದ ರೆಕ್ರೂಟ್‌ಮೆಂಟ್ ಕಮಿಷನ್‌ಅನ್ನು ನೇಮಿಸಬೇಕು ಎಂದು ಹೇಳುತ್ತಾ, ಇಷ್ಟು ಸಲಹೆಗಳನ್ನು ಕೊಟ್ಟು, ಮತ್ತೊಮ್ಮೆ ಸಂಪೂರ್ಣವಾಗಿ ಈ ತಿದ್ದುಪಡಿಗಳನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಹೆಚ್. ಡಿ. ಬಸವರಾಜು: ಸನ್ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ಪಂಚಾಯತ್‌ರಾಜ್ (ಮೂರನೇ ತಿದ್ದುಪಡಿ) ವಿಧೇಯಕ 1997ನ್ನು ಸ್ವಾಗತ ಮಾಡುತ್ತಿದ್ದೇನೆ. ಅದರಲ್ಲಿ 43(ಎ) ಇದರ ಬಗ್ಗೆ ಒಂದು ವಿಚಾರವನ್ನು ಈ ಸದನದಲ್ಲಿ ಮಂಡನೆ ಮಾಡಲು ಇಚ್ಛೆಪಡುತ್ತಿದ್ದೇನೆ. 'ದುರ್ನಡತೆಗಾಗಿ ಸದಸ್ಯರುಗಳನ್ನು ತೆಗೆದುಹಾಕುವುದು' ಈಗಾಗಲೇ ಸಾಕಷ್ಟು ಸದಸ್ಯರು ಅದರ ಬಗ್ಗೆ ಹೇಳಿದ್ದಾರೆ. ಆದರೆ ನಾನು ಇಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುವುದು ಏನೆಂದರೆ 'ಅನ್ಯಥಾ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥನಾದರೆ' ಎನ್ನುವಂಥ ಒಂದು ಪದದ ಬಳಕೆಯನ್ನು ಈ ತಿದ್ದುಪಡಿಯಲ್ಲಿ ತಂದಿದ್ದಾರೆ. ಇದನ್ನು ನಾನು ಇಲ್ಲಿ ಉಲ್ಲೇಖ ಮಾಡಲು ಏಕೆ ಇಚ್ಛೆಪಡುತ್ತಿದ್ದೇನೆ ಎಂದರೆ, ಬಹುಶಃ, ಪರಿಶಿಷ್ಟರು ಯಾರು ಆಯ್ಕೆಯಾಗಿದ್ದಾರೆ, ಅವರನ್ನು ತೆಗೆದುಹಾಕಬೇಕು ಎಂದರೆ, ಅವರು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ದುರ್ಬಲರಾಗಿರುವುದು ತಮಗೆ ಗೊತ್ತಿದೆ, ಅವರಿಗೆ ಬಹಳ ಹೊಡೆತ ಬೀಳುತ್ತದೆ. ಆದ್ದರಿಂದ ಈ ಕಾಯ್ದೆಗೆ ಈ ತಿದ್ದುಪಡಿಯನ್ನು ತರುವುದಕ್ಕೆ ಮುಂಚೆ ಇನ್ನೊಂದು ಸಲ ತಾವು ಬಹಳಷ್ಟು ಮರುವಿಮರ್ಶೆ ಮಾಡಬೇಕು ಎಂದು ಸಭಾಧ್ಯಕ್ಷರ ಮೂಲಕ ನಾನು ಕೇಳಿಕೊಳ್ಳುತ್ತಿದ್ದೇನೆ. ಇದನ್ನು ತೆಗೆದು ಹಾಕಿದರೇ ಉತ್ತಮ ಎಂದು ನನಗನ್ನಿಸುತ್ತದೆ. ಇಲ್ಲವೆಂದರೆ, ಅವರಿಗೆ ರಕ್ಷಣೆ ಇರುವುದಿಲ್ಲ. ಮಾನ್ಯ ಅಧ್ಯಕ್ಷರೆ ಇನ್ನು ಒಂದು ತಿದ್ದುಪಡಿ, ಸ್ಯಾನಿಟೇಷನ್ಸ್ ಬಗ್ಗೆ ಹೇಳಿದ್ದಾರೆ. ಆ ತಿದ್ದುಪಡಿನಲ್ಲಿ ಆರು ತಿಂಗಳೊಳಗಾಗಿ ಈ ಒಂದು ಶೌಚಾಲಯಗಳನ್ನು ಕಟ್ಟಿಸಲಿಲ್ಲ ಎಂದರೆ ಅವರ ಸದಸ್ಯತ್ವವನ್ನು ರದ್ದು ಮಾಡಬಹುದು ಎನ್ನತಕ್ಕಂಥ ನಿಬಂಧವನ್ನು ಹಾಕಿದ್ದಾರೆ, ಈ ಒಂದು ವಿಚಾರದಲ್ಲಿ ಕೂಡ ನಾನು ಪ್ರತಿಪಾದನೆ ಮಾಡತಕ್ಕಂಥದ್ದು ಏನು ಎಂದರೆ ಇದೂ ಕೂಡ ಪರಿಶಿಷ್ಟರಲ್ಲಿ ಬಹಳಷ್ಟು ಕಷ್ಟವಾಗುತ್ತದೆ. ಅವರು ಯಾವುದೋ ಒಂದು ಹಿನ್ನೆಲೆಯಿಂದ ಅವರು ಆ ಸ್ಥಾನಕ್ಕೆ ಬಂದಿರುತ್ತಾರೆ, ಅವರು ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಬಹಳ ಕಷ್ಟದಲ್ಲಿರುವುದರಿಂದ ಅವರಿಗೆ ನಾವು ಎಷ್ಟೋ ಅನುಕೂಲಗಳನ್ನು ಮಾಡಿಕೊಡಬೇಕೆಂದರೂ ಅವರ ಪರಿಸರಗಳಲ್ಲಿ ಬದಲಾವಣೆ ತರುವುದು ಅಷ್ಟೊಂದು ಸುಲಭ ಸಾಧ್ಯ ಇಲ್ಲದೇ ಇರುವುದರಿಂದ, ಅವರಲ್ಲಿ ಸಾಧ್ಯವಾಗದೇ ಇರಬಹುದು. ಇದರಿಂದ ಬಹಳಷ್ಟು ಪರಿಶಿಷ್ಟರಿಗೆ ಅನ್ಯಾಯವಾಗುತ್ತದೆ ಆದಕಾರಣ ದಯವಿಟ್ಟು ಈ ನಿರ್ಬಂಧವನ್ನು ತೆಗೆದುಹಾಕಭೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು 163ನೇ ತಿದ್ದುಪಡಿ ಪ್ರಕರಣ ಇದೆ. ಇದರಲ್ಲಿ ನೀವು ಹಿಂದೆ ಮಾಡಿದ್ದೀರಿ,

ಏನು ಎಂದರೆ ಒಟ್ಟು ಸಂಖ್ಯೆಯ ಶೇಕಡಾ 15ಕ್ಕಿಂತ ಕಡಿಮೆ ಇರತಕ್ಕಂಥದ್ದಲ್ಲ ಎನ್ನತಕ್ಕಂಥ ರೀತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀವು ಮಾಡಬೇಕು ಎಂದು ಹೇಳಿದ್ದೀರಿ; ಇದರಲ್ಲಿ ಏನಾಗುತ್ತದೆ ಎಂದರೆ ನೀವು ಅನುಪಾತವನ್ನು ಮಾಡುತ್ತಿದ್ದೀರಿ ನಾನು ಇಲ್ಲ ಎಂದು ಹೇಳುವುದಿಲ್ಲ ಈ ಅನುಪಾತವನ್ನು ಎಲ್ಲಾ ಜಿಲ್ಲೆಗೆ ಸಮರ್ಪಕವಾಗಿ ಹಂಚಿಕೆ ಮಾಡಿದರೆ ಬಹಳಷ್ಟು ರೀತಿನಲ್ಲಿ ಉತ್ತಮವಾದ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಕೆಲವು ಜಿಲ್ಲೆನಲ್ಲಿ ಪರಿಶಿಷ್ಟ ಜಾತಿಯವರೇ ಜಾಸ್ತಿ ಇದ್ದಾರೆಂದು ಆ ಜನಾಂಗದವರಿಗೆ ಹೆಚ್ಚಿನ ಸೀಟನ್ನು ಕೊಟ್ಟು ಬೇರೆ ಜಿಲ್ಲೆನಲ್ಲಿ ಕೊಡದೇ ಇರುವಂಥ ಸಂಗತಿಗಳನ್ನು ಹೋದ ಸಾರಿ ನಾವು ಈ ಸದನದಲ್ಲಿ ಉಲ್ಲೇಖ ಮಾಡಿದ್ದೇವೆ. ಆದ್ದರಿಂದ ಸಮಪಾತವಾಗಿ ಇವೊತ್ತು ಎಷ್ಟು ಜಿಲ್ಲೆಗಳನ್ನು ತಾವು ಮಾಡಿದ್ದೀರೋ ಆ 27 ಜಿಲ್ಲೆಗಳಲ್ಲೂ ಶೇ 15 ಪರಿಶಿಷ್ಟ ಜಾತಿಯವರಿಗೆ ಮತ್ತು 3 ಪರಿಶಿಷ್ಟ ಪಂಗಡದವರಿಗೆ ಮೀಸಲು ಇಡಬೇಕು. ಈ ಮೀಸಲು ಇಡುವುದರಿಂದ ಏನಾಗುತ್ತದೆ ಎಂದರೆ ಇವರಿಗೆ ನೀಡುತ್ತಿರುವಂಥ ವಿಶೇಷ ಘಟಕ ಹಣವನ್ನು ಟಿ.ಎಸ್.ಪಿ.ಯಾಗಲೀ ಎಸ್.ಸಿ.ಪಿಯಾಗಲೀ ಸರಿಯಾದ ರೀತಿಯಲ್ಲಿ ಹಂಚಿಕೆ ಮಾಡಲಿಕ್ಕೆ ಸಾಧ್ಯವಾಗುತ್ತದೆ, ಆ ಭಾಗಕ್ಕೆ ಸರಿಯಾದ ರೀತಿಯಲ್ಲಿ ತಲುಪಲಿಕ್ಕೆ ಸಾಧ್ಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಈ ಒಂದು ಸಲಹೆಯನ್ನು ನಾನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ಹಾಗೂ ಈ ಸಂದರ್ಭದಲ್ಲಿ ತಾವು ಅನುವು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

/ + ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲವೆಂದು ನಾನು ಭಾವಿಸಿದ್ದೇನೆ. ಈಗಾಗಲೇ ಮಾನ್ಯ ಘೋರ್ಪಡೆಯವರು ಸಾಕಷ್ಟು ಈ ಒಂದು ಅಮೆಂಡ್‌ಮೆಂಟ್ಸ್ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಸುಮಾರು ಎಂಭತ್ತು ಅಮೆಂಡ್‌ಮೆಂಟ್ಸ್ ಇವೆ. ಆದರೆ ಅವರು ಹೇಳಿದ ಹಾಗೆ ಕಾನ್ಸಿಕ್ವೆನ್ಸಿಯಲ್ ಅಮೆಂಡ್‌ಮೆಂಟ್ಸ್ ಹಲವಾರು ಇದ್ದ ಕಾರಣ ಅದರ ಮೇಲೆ ನಾನು ಹೆಚ್ಚಿಗೆ ಮಾತನಾಡತಕ್ಕಂಥ ಅವಶ್ಯಕತೆ ಇಲ್ಲ. ಒಂದು ವಿಚಾರವನ್ನು ಈಗಾಗಲೇ 2-3 ಸದಸ್ಯರು ತಮ್ಮ ಗಮನಕ್ಕೆ ತಂದಿದ್ದಾರೆ. Sec.43-A 'Removal of Members for mis-conduct' ಅಂತ ಏನು ಇದೆ ಇದು ಸ್ವಲ್ಪ ಮಿಸ್‌ಯೂಸ್ ಆಗತಕ್ಕಂಥ ಸಾಧ್ಯತೆ ಇದೆ. ಏಕೆಂದರೆ ಹಳ್ಳಿಗಳಲ್ಲಿ ಕೆಲವು ಸಲ ಅವರಿಗೆ ಆಗದೇಹೋದರೆ ಅವನ ಬಿಹೇವಿಯರ್ ಸರಿ ಇಲ್ಲ ಹಾಗಿದೆ, ಹೀಗಿದೆ ಎಂದು ತಿಳಿದುಕೊಂಡು ಅವನಿಗೆ ಡಿಸ್‌ಕ್ವಾಲಿಫೈ ಮಾಡತಕ್ಕಂಥ ಸಾಧ್ಯತೆ ಇದೆ. ತಮಗೂ ಕೂಡ ಗೊತ್ತಿದೆ ಅನೇಕ ಸಾರಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಅಥವಾ ಕೆಲವು ತಮಗೆ ಬೇಕಾಗದೇ ಇರತಕ್ಕಂಥ ಸದಸ್ಯನೇನಾದರು ಅಧ್ಯಕ್ಷನಾದರೆ ಅವರ ಮೀಟಿಂಗ್‌ಗೆ ಅವರು ಅಟೆಂಡ್ ಮಾಡುವುದಿಲ್ಲ. ಒಂದು ಸಾರಿ ಅಲ್ಲ ಎರಡು ಮೂರು ಸಾರಿ ಹಾಗೆ ಮಾಡುತ್ತಾರೆ. ಮೀಟಿಂಗ್‌ಗೆ ಕೋರಂ ಕೂಡ ಮಾಡುವುದಕ್ಕೆ ಬಿಡುವುದಿಲ್ಲ ಇಂತಹ ಪರಿಸ್ಥಿತಿ ನಮ್ಮ ದೇಶದೊಳಗೆ ಇದ್ದಾಗ ನ್ಯಾಚುರಲಿ ಇದರ ದುರುಪಯೋಗವನ್ನು

ಬೇರೆಯವರು ಪಡೆದುಕೊಳ್ಳುವುದಕ್ಕೆ ಸಾಧ್ಯತೆ ಇದೆ. ಇಂತಹ ಪರಿಸ್ಥಿತಿಯು ಸ್ವಲ್ಪ ಅಡ್ವಾಂಟೇಜ್ ಅನ್ನು ತೆಗೆದುಕೊಳ್ಳುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಆದಕಾರಣ ಇದರ ಬಗ್ಗೆ ತಾವು ಪುನರ್ ಪರಿಶೀಲಿಸಬೇಕಾಗುತ್ತದೆ, ಇಲ್ಲದಿದ್ದರೆ ಇದಕ್ಕೆ ತಾವು ಡೆಫಿನಿಶನ್ ಮಾಡಬೇಕಾಗುತ್ತದೆ. ಏನೆಂದರೆ

"If deems necessary if such members has been guilty of misconduct in the discharge of his duties...." ಮಿಸ್ ಕಂಡಕ್ಟ್ ಅಂದರೆ ಏನು ಎನ್ನತಕ್ಕಂಥದ್ದಕ್ಕೆ ಡೆಫಿನಿಷನ್ ಆದರೂ ನೀವು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಮನಸ್ಸಿಗೆ ಬಂದವರು ಯಾರು ಬೇಕಾದರೂ ಒಂದು ನೋಟೀಸ್ ಕೊಟ್ಟು, ಅವ ನಮಗೆ ನಮಸ್ಕಾರ ಮಾಡಲಿಲ್ಲ ಅಥವಾ ನಾನು ಕೂಡು ಎಂದು ಹೇಳಿದ ಜಾಗದಲ್ಲೇ ಕೂಡಲಿಲ್ಲ. ಅಥವಾ ಬೇರೆ ಇನ್ನು ಯಾವುದೇ ರೀತಿಯಾಗಿ ಭಿನ್ನಾಭಿಪ್ರಾಯಗಳು ಬರಬಹುದು. ಹೀಗೆ ಅನೇಕ ರೀತಿ ಬರಬಹುದು. ನಿಮಗೊಂದು ಉದಾಹರಣೆ ಹೇಳಿದೆ ಕೆಲವು ಸದಸ್ಯರು ಕುಡಿದು ಮೀಟಿಂಗಕ್ಕೆ ಬರುತ್ತಿದ್ದಾರೆ, ಮೀಟಿಂಗ್‌ಗೆ ಯಾರ್‍ಯಾರು ಹೇಗೆ ಬರುತ್ತಾರೆ ಎನ್ನತಕ್ಕಂಥದ್ದನ್ನು ನಾನು ಹೇಳಬಾರದು. ಅನೇಕ ಉದಾಹರಣೆಗಳು ಇವೆ ಅದನ್ನು ಹೇಳಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಆದಕಾರಣ ಮಿಸ್‌ಕಂಡಕ್ಟ್ ಏನು ಎನ್ನತಕ್ಕಂಥದ್ದಕ್ಕೆ ನೀವು ಡೆಫಿನಿಷನ್ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಅದನ್ನು ತೆಗದು ಹಾಕಿದರೆ ಒಳ್ಳೆಯದು. ಎರಡನೆಯದು ಏನು ಎಂದರೆ ಸೆಕ್ಷನ್ 58, 14ನೇ ಅಮೆಂಡ್‌ಮೆಂಟ್ ಅದರಲ್ಲಿ ಏನು ಹೇಳಿದ್ದೀರಿ ಎಂದರೆ ಮಾನ್ಯ ಅಧ್ಯಕ್ಷರೆ, ಇದು ತಾವು ಗಮನಿಸಬೇಕಾದ ಅಂಶ, ಏನು ಎಂದರೆ ಒಬ್ಬ ಮೆಂಬರ್‌ಗೆ ಡಿಸ್‌ಕ್ವಾಲಿಫೈ ಮಾಡುವುದಕ್ಕೆ ನಾಲ್ಕೈದು ಕಾರಣಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಈಗಾಗಲೇ ನಮ್ಮ ಬಸವರಾಜುರವರು, ಜ್ಞಾನೇಂದ್ರರವರು ಮತ್ತು ಘೋರ್ಪಡೆಯವರು ಪ್ರಸ್ತಾಪಮಾಡಿದ್ದಾರೆ. Providing sanitary latrines to not less than 10% of the households every year and achieve full coverage as early as possible; Constructing adequate number of community latrines for the use of men and women, maintaining them; Maintaining water supply works either on its own or by annual.... ಹೀಗೆ ಸುಮಾರು 16 ಕಂಡೀಷನ್ಸ್ ಇವೆ. ಅನೇಕ ಪಂಚಾಯತ್ ಅಧ್ಯಕ್ಷರ ಹಾಗೂ ಸದಸ್ಯರ ಮಾತು ಕೆಲವು ಕಡೆ ನಡೆಯುವುದಿಲ್ಲ. ಇನ್ನೂ ನಾವು ಆ ಪ್ರೋಸೆಸ್‌ನಲ್ಲಿದ್ದೇವೆ. ಅವನ ಮಾತು ನಡೆಯದೇ ಇದ್ದಾಗ ಅಂತಹ ಕಡೆ ಅವನಿಗೆ ಜಾಗ ಸಿಗಲಿಲ್ಲ ಎಂದರೆ ಅಥವಾ ಅವರು ಮಾಡುವುದಕ್ಕೆ ಆಗಲಿಲ್ಲ ಎಂದರೆ ಅಥವಾ ನೀರು ಇರಲಿಲ್ಲ ಎಂದರೆ ಅಂತಹ ಕಾರಣಕ್ಕೋಸ್ಕರ ಕೆಲವು ಜನ ಕಾಯ್ದುಕೊಂಡು ಕುಳಿತಿರುತ್ತಾರೆ ಅವರನ್ನು ಡಿಸ್‌ಕ್ವಾಲಿಫೈ ಮಾಡುವುದಕ್ಕೆ, ಅವನು ಮೆಂಬರ್ ಆಗುವುದೇ

ಸಹಿಸುವುದಿಲ್ಲ, ನೀವು ಲ್ಯಾಟ್ರಿನ್ ಕಟ್ಟಿಲ್ಲ, ಅಲ್ಲಿ ನಲ್ಲಿ ಇಲ್ಲ ಅಥವಾ ನೀವು ರಿಪೇರಿ ಮಾಡಿಲ್ಲ ಎಂದು ಈ ಸಣ್ಣ ಕಾರಣಕ್ಕೋಸ್ಕರ ನೀವು ಡಿಸ್‌ಕ್ವಾಲಿಫೈ ಮಾಡಿದರೆ ಖಂಡಿತವಾಗಿ ಒಂದು ಕಡೆ ನಾವು ಅವನಿಗೆ ಅಧಿಕಾರವನ್ನು ಕೊಟ್ಟು ಇನ್ನೊಂದು ಕಡೆ ಅವರ ಅಧಿಕಾರವನ್ನು ಕಸಿದುಕೊಂಡ ಹಾಗೆ ಆಗುತ್ತದೆ. ಆದಕಾರಣ ದಯವಿಟ್ಟು, ಈ ಒಂದು ಸೆಕ್ಷನ್ 58ನ್ನು ಕೂಡ ನೀವು ಪುನರ್ ಪರಿಶೀಲನೆ ಮಾಡಬೇಕು ಇಲ್ಲದಿದ್ದರೆ ಡ್ರಾಪ್ ಮಾಡಬೇಕು. ಆದಕಾರಣ ಇದನ್ನು ತೆಗೆದುಹಾಕಬೇಕು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ತಾವು 20 ತಿಂಗಳಿಗೆ ಅವನ ಅಧಿಕಾರವಧಿಯನ್ನು ಮಾಡುತ್ತಿದ್ದೀರಿ ಅದು ಪೂರ್ತಿ ಐದು ವರ್ಷ ಇರಲಿ ಇಲ್ಲದಿದ್ದರೆ, ಕನಿಷ್ಠಪಕ್ಷ 30 ತಿಂಗಳು ಇರಲಿ ಕೊನೆಯಪಕ್ಷ ಅವನು ಹೋಗಿ ಕೆಲಸ ಮಾಡಲಿಕ್ಕಾದರೂ ಅವಕಾಶ ಇರಬೇಕಲ್ಲ. ಇಲ್ಲದಿದ್ದರೆ ಮೇಯರ್ ಆದ ಹಾಗೆ ಆಗುತ್ತದೆ. ಹೋದಕೂಡಲೇ ಏನು ಮಾಡಿಕೊಳ್ಳಬೇಕು ಎನ್ನುವಂಥ ಧಾಟಿಯಲ್ಲಿ ವರ್ತನೆ ಮಾಡುತ್ತಾರೆ. ಹಾಗಾಗಬಾರದು. ಎಲ್ಲರೂ ಹಾಗೇ ಇದ್ದಾರೆ ಎಂದು ನಾನು ಹೇಳುತ್ತಿಲ್ಲ. ಆದರೆ ಇದು ಸೈಕಲಾಜಿಕಲಿ ಅವನು ಅಲ್ಲಿ ಹೋಗಿ ಕೂಡಬೇಕೆಂದರೆ ತಿಂಗಳು ಎರಡು ತಿಂಗಳು ಆಗುತ್ತದೆ, ಇಡೀ ಜಿಲ್ಲೆ ಅಥವಾ ತಾಲ್ಲೂಕು ತಿರುಗಾಡಿಕೊಂಡು ಐಡೆಂಟಿಫೈ ಮಾಡಿಕೊಳ್ಳಲು ಕಷ್ಟವಾಗುತ್ತದೆ. ಆದಕಾರಣ ದಯವಿಟ್ಟು ಇದನ್ನು ಕೂಡ ಪುನರ್ ಪರಿಶೀಲನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ಮಾನ್ಯ ಘೋರ್ಪಡೆಯವರು ಈಗಾಗಲೇ ಪ್ರಸ್ತಾಪವನ್ನು ಮಾಡಿದ್ದಾರೆ, ತಾವು ಒಪ್ಪಿಕೊಳ್ಳಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಏನು ಎಂದರೆ ಪಂಚಾಯತ್ ಮೆಂಬರ್ ಬಗ್ಗೆ ಡಿಸ್‌ಕ್ವಾಲಿಫೈ ಮಾಡತಕ್ಕಂಥ ಅಧಿಕಾರವನ್ನು ಜಿಲ್ಲಾಪಂಚಾಯತ್‌ನಿಂದ ತೆಗೆದುಕೊಂಡು ನೇರವಾಗಿ ಸರ್ಕಾರದವರೇ ತೆಗೆದುಕೊಳ್ಳುವುದು ಉತ್ತಮ ಎಂದು ಅವರು ಏಕೆ ಹೇಳಿದರು ಎಂದರೆ ಸರ್ಕಾರದಲ್ಲಾದರೂ ಕನಿಷ್ಟಪಕ್ಷ ಡಿಸ್‌ಪ್ಯಾಷನೇಟಲಿ ಯೋಚನೆ ಮಾಡಿ ಜ್ಯುಡಿಷಿಯಸ್ಸಾಗಿ ಒಂದು ಡಿಸಿಷನ್ ತೆಗೆದುಕೊಳ್ಳುತ್ತಾರೆ, ಆ ಡಿಸಿಷನ್ ನೀವು ಒಂದು ಸಾರಿ ತೆಗೆದುಕೊಂಡರೆ ಅದು ಪ್ರಿಸಿಡೆಂಟ್ ಆಗುತ್ತದೆ, ಎಲ್ಲಾ ಕಡೆ ಅಪ್ಲಿಕಬಲ್ ಆಗುತ್ತದೆ ಅದಕ್ಕಾಗಿ ಇನ್‌ಡಿಸ್‌ಕ್ರಿಮಿನೇಟ್ ಆಗಿ ಡಿಸಿಷನ್ ತೆಗೆದುಕೊಳ್ಳತಕ್ಕಂಥಾದ್ದಾಗಲೀ ಅಥವಾ ಸೂಪರ್‌ಸೀಡ್ ಮಾಡತಕ್ಕಂಥದ್ದಾಗಲೀ ಆಗುವುದಿಲ್ಲ. ಆದಕಾರಣ ದಯವಿಟ್ಟು ಅವರು ಹೇಳಿರುವಂಥ ಮಾತಿನ ಕಡೆ ಗಮನಕೊಡಬೇಕು ಎಂದು ಪುನಃ ನಾನು ಒತ್ತಾಯ ಮಾಡುತ್ತೇನೆ. ಆಮೇಲೆ ಸ್ಪೆಷಲ್ ಲೋಕಾಯುಕ್ತ ಬೇಕು. ಏಕೆಂದರೆ ವಿಲೇಜ್‌ಪಂಚಾಯತ್‌ದಿಂದ ಹಿಡಿದು ಜಿಲ್ಲಾಪಂಚಾಯತ್‌ನವರಿಗೆ ಸಾಕಷ್ಟು ಕಂಪ್ಲೇಂಟ್ಸ್ ಇದೆ ಇದರ ಕಡೆ ಯಾರೂ ಗಮನವನ್ನು ಕೊಡುತ್ತಿಲ್ಲ. ಇವೊತ್ತು ನಮ್ಮ ಲೋಕೋಪಯೋಗಿ ಇಲಾಖೆಯಲ್ಲಾಗಲೀ ಬೇರೆ ಯಾವುದೇ ಇಲಾಖೆಯಲ್ಲಿ ಅಷ್ಟು

ಹಣ ಇಲ್ಲ. ಇವೊತ್ತು ನಮ್ಮ ಜಿಲ್ಲಾಪರಿಷತ್‌ನಲ್ಲಿ ಎಷ್ಟು ಹಣ ಇದೆ ಎನ್ನತಕ್ಕಂಥದ್ದು ತಮಗೆಲ್ಲಾ ಗೊತ್ತಿದೆ. ಅದಕ್ಕಾಗಿ ನೇರವಾಗಿ ಜನರ ಕೆಲಸ ಮಾಡತಕ್ಕಂಥವರು ತಾಲ್ಲೂಕು ಪಂಚಾಯತ್, ಜಿಲ್ಲಾಪಂಚಾಯತ್ ಮತ್ತು ವಿಲೇಜ್ ಪಂಚಾಯತ್, ಅಂದಾಗ ಅದರ ಬಗ್ಗೆ ಒಂದ ಸ್ಪೆಷಲ್ ಲೋಕಾಯುಕ್ತ ಮಾಡತಕ್ಕಂಥದ್ದೇ ಆಗಲೀ ವಿಜಿಲೆನ್ಸ್ ಮಾಡತಕ್ಕಂಥದ್ದೇ ಆಗಲೀ, ಕಮಿಟಿ ಮಾಡತಕ್ಕಂಥದ್ದಾಗಲೀ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

6.40 ಪಿ.ಎಂ

ಇನ್ನೊಂದು ಪ್ರಸ್ತಾವನೆ ಇದೆ ಅದನ್ನು ನಾನು ಈ ಹಿಂದೆ ಕೂಡ ತಮ್ಮ ಗಮನಕ್ಕೆ ತಂದಿದ್ದೆ. ಏನು ಎಂದರೆ ಈ ಡಿಸ್ಟ್ರಿಕ್ಟ್ ಪ್ಲ್ಯಾನಿಂಗ್‌ನಲ್ಲಿ ಪ್ರಪೋರ್ಷನೇಟ್ ರೆಪ್ರಸಂಟೇಷನ್ ಇಲ್ಲ. ಈಗ ಏನು ನೀವು ಸೋಷಿಯಲ್ ಜಸ್ಟೀಸ್ ಕಮಿಟಿ ಎಂದು ಮಾಡಿದ್ದೀರಿ. ಆದರೆ ಡಿಸ್ಟ್ರಿಕ್ಟ್ ಪ್ಲ್ಯಾನಿಂಗಲ್ಲಿ ನಾನು ಮಾಡುತ್ತೇನೆ ನಾನೊಂದು ಅಮೆಂಡ್‌ಮೆಂಟನ್ನು ತರುತ್ತಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಅದು ಬರಲಿಲ್ಲ. ನ್ಯಾಚುರಲಿ ಅದರಿಂದ ಇನ್‌ಜಸ್ಟೀಸ್ ಆಗುತ್ತದೆ, ಮೆಜಾರಿಟಿ ಮೆಂಬರ್ಸ್ ಇದ್ದ ಕಡೆ ಪ್ಲ್ಯಾನಿಂಗ್ ಕಮಿಟಿ ಹೋಗುತ್ತದೆ. ಉದಾಹರಣೆಗೆ 49 ಪರ್ಸೆಂಟ್ ಮೆಂಬರ್ಸ್ ಒಂದು ಕಡೆ ಇದ್ದರೆ, 51 ಪರ್ಸೆಂಟ್ ಮೆಂಬರ್ಸ್ ಒಂದು ಕಡೆ ಇದ್ದರೆ ಪ್ಲ್ಯಾನಿಂಗ್ ಕಮಿಟಿ ಹೋದಾಗ 51 ಪರ್ಸೆಂಟ್ ಮೆಂಬರ್ಸ್, ರೈಟ್ ಇರಲಿ ರಾಂಗ್ ಇರಲಿ ಅವರು ಏನು ಹೇಳುತ್ತಾರೆ ಅವರದ್ದೇ ನಡೆಯುತ್ತದೆ. ಅಂದಾಗ ಅಲ್ಲಿ ಟ್ರಾನ್ಸ್‌ಫರೆನ್ಸಿ ಇರುವುದಿಲ್ಲ. ನಮ್ಮ ಲೆಜಿಸ್ಲೇಚರ್‌ನಲ್ಲಿ ನಾವು ಫಾಲೋ ಮಾಡುತ್ತೇವೆ, ಬೇರೆ ಕಮಿಟಿಗಳಲ್ಲಿ ಕೂಡ ನಾವು ಫಾಲೋ ಮಾಡುತ್ತೇವೆ ಆದರೆ ಇದರಲ್ಲಿ ನಾವು ಫಾಲೋ ಮಾಡುವುದಿಲ್ಲ ಏಕೆ? ಆದಕಾರಣ ಇದರಲ್ಲೂ ಕೂಡ ನೀವು ಅಮೆಂಡ್‌ಮೆಂಟ್ ಮುಖಾಂತರ ತರುತ್ತೀರೋ ಮತ್ತೆ ಇನ್ನ್ಯಾವುದರ ಮುಖಾಂತರ ನೀವು ತರುತ್ತೀರಿ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ?

ಕೊನೆಯದಾಗಿ ಇನ್ನೊಂದು ವಿಷಯ ಏನು ಎಂದರೆ ನೀವು ಸೋಷಿಯಲ್ ಜಸ್ಟೀಸ್ ಕಮಿಟಿಯಲ್ಲಿ ನೀವು ನಾಮಿನೇಟ್ ಮಾಡುತ್ತಿದ್ದೀರಿ. "To ensure reservation for women and for SC/STs" ಈಗ ಏನಾಗುತ್ತದೆ ಎಂದರೆ ಎಸ್‌ಸಿ/ಎಸ್‌ಟಿ ಎಂದು ಅಫೆಕ್ಷನ್ ಇಟ್ಟಮೇಲೆ ಅನೇಕ ಸಾರಿ ಕೆಲವು ಕಡೆ ಏ ಅವರು ಬೇಡಪ್ಪಾ ಎಂದು ಎಸ್.ಸಿಯವರಿಗೆ ಬಿಟ್ಟುಬಿಡತಕ್ಕಂಥ ಸಾಧ್ಯತೆ ಕೂಡ ಇದೆ. ಇಪ್ಪತ್ತು ಪರ್ಸೆಂಟ್ ಪಾಪ್ಯುಲೇಷನ್ ಇದ್ದವರನ್ನು ನೀವು ಕೈ ಬಿಟ್ಟು ಹೊಸ ಪಾಪ್ಯುಲೇಷನ್ ಸೆನ್ಸ್ ಪ್ರಕಾರ ಮೂರು ಪರ್ಸೆಂಟ್ ಅಥವಾ ಐದು ಪರ್ಸೆಂಟ್ ಇದ್ದವರಿಗೆ ಕೊಡತಕ್ಕಂಥ ಸಾಧ್ಯತೆ ಆಗುತ್ತದೆ. ಆದಕಾರಣ ನೀವು ಬಹಳಷ್ಟು ಪ್ರಾವಿಷನ್ ಇಟ್ಟರೆ ಈ ಎಸ್‌ಸಿಯವರ ಬಗ್ಗೆ ಯಾರಿಗೆ ಪ್ರಿಜ್ಯುಡೀಸ್ ಇರುತ್ತದೆ ಅವರಿಗೆ ಇದೊಂದೇ ಸಾಕು ಇದರ ಪ್ರಕಾರ ಅವರು

ಆ್ಯಕ್ಟ್ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ನೀವು ಏನು ಮಾಡಿ ಎಂದರೆ 27-30ಕಮಿಟಿ ಇದ್ದರೆ ಎಕ್ಸ್‌ಕ್ಲೂಸೀವ್ ಆಗಿ ಮೂರು ಕಮಿಟಿಗಳು ಅವರಿಗೆ ಹದಿನೈದು ಕಮಿಟಿಗಳು ಇವರಿಗೇ ಎಂದು ಮಾಡಿ. ಏನಾದರೂ ಮಾಡಿ. ಇಲ್ಲದಿದ್ದರೆ ಬಹಳ ಹೊಡೆತ ಬೀಳುತ್ತದೆ. ಈ ರೀತಿ ''ಆರ್'' ಎಂದು ಇರತಕ್ಕಂಥ ಪದವನ್ನು ಮಿಸ್‌ಯೂಸ್ ಮಾಡಿ ಬಿಡುತ್ತಾರೆ. ಹೋದ ಸಾರಿ ತಾಲ್ಲೂಕುಪಂಚಾಯತ್ ಹಾಗೂ ಮಂಡಲ್‌ಪಂಚಾಯತ್ ಎಲೆಕ್ಷನ್‌ನಲ್ಲಿ ತೊಂದರೆಯಾಗಿದೆ. ಅದು ಚಿತ್ರದುರ್ಗನೇ ಇರಬಹುದು, ತುಮಕೂರೇ ಇರಬಹುದು, ಬಳ್ಳಾರಿನೇ ಇರಬಹುದು. ಬೇರೆ ಕಡೆ ಕೂಡ ಆಗಿದೆ. ಅದು ತಮಗೂ ಕೂಡ ಗೊತ್ತಿದೆ. ಅದು ಎಲ್ಲಾ ಕೂಡ ಗೊತ್ತಿದ್ದರೂ ಇದನ್ನು ಏಕೆ ಮಾಡಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇದೇ ಪದ್ಧತಿಯನ್ನು ಸಹಕಾರ ಇಲಾಖೆಯಲ್ಲೂ ಕೂಡ ತಂದಿದ್ದಾರೆ. ಅದು ಬಂದಮೇಲೆ ಅದರ ಬಗ್ಗೆ ಮಾತನಾಡುತ್ತೇನೆ. ಆದಕಾರಣ ಇದನ್ನೂ ಕೂಡ ನೀವು ಸರಿಪಡಿಸತಕ್ಕಂಥದ್ದು ಮಾಡಬೇಕು. ಇಲ್ಲದಿದ್ದರೆ 20 ಪರ್ಸೆಂಟ್ ಪಾಪ್ಯುಲೇಷನ್ ಇರತಕ್ಕಂಥ ಜನರಿಗೆ ಇದು ತೊಂದರೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಿ ಅವರಿಗೆ ಅವರ ಹಕ್ಕನ್ನು ಕೊಡಬೇಕು, ಇವರಿಗೆ ಸಿಗತಕ್ಕಂಥ ಹಕ್ಕನ್ನು ಕಸಿದುಕೊಳ್ಳಬಾರದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ಒಂದು ಸಂದರ್ಭದಲ್ಲಿ ನಾನೇನು ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ ಇದಕ್ಕೆ ತಾವು ಬೆಂಬಲ ಕೊಡುತ್ತೀರಿ ಎನ್ನತಕ್ಕಂಥ ಮಾತನ್ನು ಹೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಖರ್ಗೆಯವರು ಸಲಹೆ ಕೊಟ್ಟಂತೆ ಈ ಮಿಸ್‌ಕಂಡಕ್ಟ್‌ಗೆ ಅವನನ್ನು ಡಿಸಕ್ವಾಲಿಫೈ ಮಾಡುವಂಥದ್ದು ಏನಿದೆ ಅದನ್ನು ದಯವಿಟ್ಟು ತೆಗೆದುಹಾಕಿ. ಆ ಮಿಸ್ ಕಂಡಕ್ಟ್ ಎಂದರೇನು ಎಂದು ಡೆಫಿನಿಷನ್ ಇಲ್ಲದೇ ಇದನ್ನು ಸೇರಿಸಬೇಡಿ. ಇದರಿಂದ ಮಿಸ್‌ಯೂಸ್ ಆಗುತ್ತದೆ, ಯಾರ ಮೇಲಾದರೂ ಸೇಡು ತೀರಿಸಿಕೊಳ್ಳುವಂಥ ಪ್ರಯತ್ನ ಆಗುತ್ತದೆ. ಈ ನಿಯಮ ಎಲ್ಲೂ ಇಲ್ಲ, ಒಬ್ಬ ಶಾಸಕನಿಗೆ ಇಲ್ಲ, ಒಬ್ಬ ಎಂ.ಪಿಗೆ ಇಲ್ಲ, ಸಾಮಾನ್ಯವಾಗಿ ಆಯ್ಕೆಯಾಗುವಂಥ ಒಬ್ಬ ಸದಸ್ಯನಿಗೆ ಈ ರೀತಿಯಾಗಿ ಅವನ ಮೇಲೆ ಕಡಿವಾಣ ಹಾಕುವುದು ಸರಿಯಲ್ಲ. ಮಿಸ್‌ಕಂಡಕ್ಟ್ ಬಗ್ಗೆ ಡೆಫಿನಿಷನ್ ಇದ್ದರೆ ನೋಡೋಣ. ಆದರೆ ಅವಸರದಲ್ಲಿ ಇದನ್ನು ಸೇರಿಸಬೇಡಿ. ಎರಡನೆಯದು ಬಹಳ ದುಃಖ ತರುವಂಥದ್ದು ಅದು ನಿಮಗೆ ಹೇಗೆ ಮನಸ್ಸು ಬಂತೋ ಗೊತ್ತಿಲ್ಲ, ತಮ್ಮ ಕುಟುಂಬದ ಸದಸ್ಯರ ಉಪಯೋಗಕ್ಕಾಗಿ ಶೌಚಗೃಹವನ್ನು ಉಪಯೋಗಿಸಿದ್ದಲ್ಲಿ ಆರು ತಿಂಗಳೊಳಗಾಗಿ ಅವನು ಕಟ್ಟಿಸದಿದ್ದರೆ ಅವನು ಡಿಸ್‌ಕ್ವಾಲಿಫೈ ಆಗುತ್ತಾನೆ. ಮೊದಲನೆಯದಾಗಿ ಆ ಸದಸ್ಯನು ಏನಾದರೂ ಮಾಡಿಕೊಂಡರೆ ಸ್ವಂತಕ್ಕೆ ಮಾಡಿಕೊಂಡಿದ್ದಾನೆಂದು ಕೂಗುವಂಥ ಕಾಲ ಸಾಮಾನ್ಯ ಜನರಿಗೆ ಶೌಚಗೃಹ ಇಲ್ಲ, ಅವನಿಗೆ ಹೇಳೋರು ಕೇಳೋರು ಇಲ್ಲ ಎಂದು ಹೇಳುವಂಥ ಕಾಲದಲ್ಲಿ ಈ ಶರತ್ತು

ಹಾಕಿದರೆ ಎಲ್ಲರೂ ಅವನಿಗೆ ಶಾಪ ಹಾಕುತ್ತಾರೆ. ನೋಡೋ ಅವನ ತನ್ನ ಮನೆಗೆ ಮೊದಲು ಕಟ್ಟಿಕೊಂಡ ಎಂದು ಜನ ಹೇಳುತ್ತಾರೆ. ಅವನು ಮನೆಗೆ ಕಟ್ಟಿಕೊಳ್ಳಲಿಲ್ಲ ಎಂದರೆ ಡಿಸ್‌ಕ್ವಾಲಿಫಿಕೇಷನ್ ಆಗುತ್ತದೆ. ಬಹುಶಃ ಇದು ಎರಡೂ ಅರ್ಥ ಇಲ್ಲದೇ ಇರುವಂಥದ್ದು. ಸರ್ವಾನುಮತದಿಂದ ಈ ಬಿಲ್ ಪಾಸ್ ಆಗಬೇಕು ಎಂದರೆ ಮೊದಲು ಡಿಸ್‌ಕ್ವಾಲಿಫಿಕೇಷನ್ ಬಗ್ಗೆ ಏನು ಡೆಫಿನಿಷನ್ ಎಂದು ಮೊದಲು ತರೋಣ; ಎರಡನೆಯದು ಅವನು ಶೌಚಾಲಯ ಕಟ್ಟದೇ ಇದ್ದರೆ ಅವನು ಡಿಸ್‌ಕ್ವಾಲಿಫೈ ಆಗೋದು ನಗೆಪಾಟಲಿನ ಸಂಗತಿ, ನೀವು ದುಡ್ಡು ಕೊಡಿ, ನೀವು ದುಡ್ಡು ಕೊಟ್ಟರೆ ಮನೆ ಮನೆಗೆ ಶೌಚಾಲಯವನ್ನು ಕಟ್ಟೋಣ ಆದರೆ ಅಲ್ಲಿ ಸ್ಥಳ ಬೇಕಲ್ಲಾ. ನೀವು ಬನ್ನಿ ನಿಮಗೆ ತೋರಿಸುತ್ತೇನೆ ಎಷ್ಟೋ ಜನ ಸದಸ್ಯರು ಹದಿನೈದು ಅಡಿ ಅಗಲ, ಹದಿನೈದು ಅಡಿ ಉದ್ದ ಜಾಗದಲ್ಲಿ ಅವನು ಬದುಕುತ್ತಿದ್ದಾನೆ. ಅವನು ಶೌಚಾಲಯವನ್ನು ಎಲ್ಲಿ ಕಟ್ಟಿಕೊಡುವುದು? ಅವನು ಕುಟುಂಬದವರು ಅವರು ಎಸ್‌ಸಿ, ಬಿಸಿ ಅಥವಾ ಅವರು ಯಾವುದೇ ಜನಾಂಗದವರು ಇರಬಹುದು ಇದು ಸರಿ ಇಲ್ಲ. ಇದು ಅವನಿಗೆ ಅಗೌರವ ಮಾಡಿದ ಹಾಗೆ ಆಗುತ್ತದೆ. ಆದಕಾರಣ ಇವೆರಡನ್ನೂ ವಿಥ್‌ಡ್ರಾ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

+ ಶ್ರೀ ಡಿ.ಆರ್.ಪಾಟೀಲ್ (ಗದಗ): ಮಾನ್ಯ ಅಧ್ಯಕ್ಷರೆ, ಅಮೆಂಡ್‌ಮೆಂಟ್ ಆಫ್ ಸೆಕ್ಷನ್ 44ರೊಳಗೆ 10(1) "in sub-section(1), for the words "as soon as may be the words, figures and brackets "within one month from the date of publication of names of elected members.." ಅಂದಿದ್ದೀರಿ. "within one month from the date of election of members" ಎಂದು ಅಂದುಬಿಡಿ. ಅಲ್ಲಿ ಗೆಜೆಟ್ ಪಬ್ಲಿಕೇಷನ್‌ಗೆ ಡಿಕ್ಲರೇಷನ್ ಆಫ್ ರಿಸಲ್ಟ್‌ಗೆ ಅಲ್ಲಿ ಡೆಪ್ಯುಟಿ ಕಮಿಷನರ್‌ಗೆ ಗ್ಯಾಪ್ ಮಾಡಲಿಕ್ಕೆ ಬಹಳ ಅವಕಾಶ ಇದೆ. ಹಿಂದೆ 1977ರಲ್ಲಿ ಮಂಡಲ್‌ಪಂಚಾಯತ್ ಚುನಾವಣೆಯಾದಾಗ ನಾಲ್ಕು ತಿಂಗಳು ಆಗಲಿಲ್ಲ ಪ್ರಧಾನರ ಎಲೆಕ್ಷನ್, ಆ ಗೆಜೆಟ್ ನೋಟಿಫಿಕೇಷನ್ ಮಾಡಿಸಿಕೊಳ್ಳಲಿಲ್ಲ ನೀವು, ಏಕೆಂದರೆ ನೀವು ಬ್ಯಾಕ್‌ವರ್ಡ್ ಕ್ಲಾಸ್ ಎಂದು ಹೇಳಿ ಇಬ್ಬರನ್ನು ನಾಮಿನೇಷನ್ ಮಾಡುವಂಥದ್ದೇನಿತ್ತಲ್ಲಾ ಅವರಿಬ್ಬರು ಜಿಲ್ಲಾಪಂಚಾಯತ್‌ನಿಂದ ನಾಮಿನೇಟ್ ಆಗುವವರೆಗೂ ಗೆಜೆಟ್ ನೋಟಿಫಿಕೇಷನ್ ಆಗಲಾರದ ಹಾಗೆ ತಾವು ನೋಡಿಕೊಂಡಿದ್ದೀರಿ. ಆದಕಾರಣ ದಯವಿಟ್ಟು ಇದು ಡೇಟ್ ಆಫ್ ಎಲೆಕ್ಷನ್ ಎಂದರೆ ಒಳ್ಳೆಯದು. ಡೇಟ್ ಆಫ್ ಗೆಜೆಟ್ ನೋಟಿಫಿಕೇಷನ್ ಬದಲು. ಆಗ ಮಿಸ್‌ಯೂಸ್ ಮಾಡಲಿಕ್ಕೆ ಅವಕಾಶ ಇರುವುದಿಲ್ಲ. ಇನ್ನು ನೀವು ತಾಲ್ಲೂಕು ಪಂಚಾಯತ್, ಜಿಲ್ಲಾಪಂಚಾಯತ್ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಅವಧಿಯನ್ನು ಇಪ್ಪತ್ತು ತಿಂಗಳಿಗೆ ಮಾಡಿಬಿಟ್ಟಿದ್ದೀರಿ ಆಗ ನೋ ಕಾನ್ಫಿಡೆನ್ಸ್ ಮೋಷನ್‌ಗೆ ಏಕೆ ಅವಕಾಶ ಇರುತ್ತದೆ? ಇಪ್ಪತ್ತು ತಿಂಗಳೊಳಗೆ ನೋ ಕಾನ್ಫಿಡೆನ್ಸ್ ಏನು? ಅದನ್ನು

ತೆಗೆದುಬಿಡಿ ತಾಲ್ಲೂಕು ಪಂಚಾಯತ್‌ಗೆ ಹಾಗೂ ಜಿಲ್ಲಾಪಂಚಾಯತ್‌ಗೆ. ಇನ್ನು ಪಂಚಾಯತ್‌ಗೆ ಡಿವಿಜನ್ ಮಾಡಿದಾಗ ಮೆಂಬರ್ಸ್‌ಗೆ ನಾಮಿನೇಟ್ ಮಾಡಲು ಡೆಪ್ಯೂಟಿ ಕಮಿಷನರ್‌ಗೆ ಅವಕಾಶ ಕೊಟ್ಟಿದ್ದೀರಿ. ಅದರೊಳಗೆ ಏನು ಅನ್ನುತ್ತೀರಿ "Members nominated by the Deputy Commissioner and such members shall as far as may be practicable be persons who are the members of the existing Grama Panchayat." ಎಕ್ಸಿಸ್ಟಿಂಗ್ ಗ್ರಾಮಪಂಚಾಯತ್ ಮೆಂಬರ್ಸ್‌ನ್ನು ನಾಮಿನೇಟ್ ಮಾಡಲು ಅವಕಾಶ ಕೊಡಿ. ಮತ್ತು ಅದರಲ್ಲಿ 'as far as may be practicable..' ಎಂದು ಹಾಕಿಬಿಟ್ಟಿರಿ ಎಂದರೆ ಡಿಸ್‌ಕ್ರಿಮಿನೇಷನ್ ಏಕೆ ಕೊಡುತ್ತೀರಿ ನೀವು? ಈಗ ಮೊನ್ನೆ ಹೊಸದಾಗಿ ನೀವು ಜಿಲ್ಲೆಗಳನ್ನು ಮಾಡಿದಾಗ ಜಿಲ್ಲಾಪಂಚಾಯತ್ ಕಾನ್ಸಿಟಿಟ್ಯೂಟ್ ಮಾಡುವಾಗ ಯಾರ್‍ಯಾರು ಎಲೆಕ್ಟೆಡ್ ಜಿಲ್ಲಾ ಪಂಚಾಯತ್ ಮೆಂಬರ್ಸ್ ಇದ್ದಾರೆ ಅವರೇ ಕೂಡಿಕೊಂಡು ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಇಲ್ಲಿ ಗ್ರಾಮಪಂಚಾಯ್ತಿಗೆ ಮಾತ್ರ ಆ ಅವಕಾಶವನ್ನು ಡಿನೈ ಮಾಡುತ್ತಿದ್ದೀರಿ. ದಯವಿಟ್ಟು ಈ ಮೂರು ಸಲಹೆಗಳನ್ನು ತಾವು ಪರಿಶೀಲಿಸಬೇಕಾಗಿ ವಿನಂತಿ ಮಾಡುತ್ತೇನೆ.

+ ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಎಲ್ಲಾ ಮಾನ್ಯ ಸದಸ್ಯರುಗಳು ನಾವು ತಂದಿರತಕ್ಕಂಥ ತಿದ್ದುಪಡಿಯ ಹಿನ್ನೆಲೆಯನ್ನು, ಉದ್ದೇಶಗಳನ್ನು ಸ್ವಾಗತ ಮಾಡಿರುವುದರಿಂದ ಅವರಿಗೆ ನಾನು ಸರ್ಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಯಾವುದಾದರೂ ಕಾನೂನನ್ನು ರಚನೆ ಮಾಡಬೇಕಾದರೆ ಅದು ತನ್ನ ಸಮಾಜ ಬೆಳೆದು ಬಂದಿರತಕ್ಕಂಥ ದಾರಿ ಮತ್ತು ಅದರ ಇತಿಹಾಸದ ಪ್ರಜ್ಞೆಗಳ ಮೂಲಕ ಅದು ನಡೆಯುತ್ತದೆ. ಇವೊತ್ತು ಪ್ರಸ್ತಾಪಿಸಲ್ಪಟ್ಟಿರತಕ್ಕಂಥ ಅನೇಕ ವಿಷಯಗಳು ಹಿಂದಿನ ಒಂದು ತಲೆಮಾರಿನಲ್ಲಿರುವಂಥ ಜ್ಞಾನದ ಇತಿಮಿತಿ ಅಥವಾ ಸಂದರ್ಭಗಳ ಇತಿಮಿತಿಗಳ ಮೇಲೆ ನಡೆಯತಕ್ಕಂಥದ್ದು. ಸಮಾಜ ಪ್ರಬುದ್ಧ ಆದಂತೆ ಮತ್ತು ಹೊಸ ವಿಷಯಗಳ ಬಗ್ಗೆ ಅವರು ಹೆಚ್ಚು ಸಹಿಷ್ಣುತೆಯನ್ನು ಪಡೆದಂಥವರಾದರೆ ಆ ಕಾನೂನಿಗೆ ಒಂದು ಸ್ವರೂಪವನ್ನು ಕೊಡಲಿಕ್ಕೆ ಸಾಧ್ಯತೆ ಆಗುತ್ತದೆ. ನಮ್ಮ ಸಂವಿಧಾನದ ಪರಿಚ್ಛೇದ 41ರಲ್ಲಿ ನೀವು ಒಂದು ಸ್ವಯಂ ಆಡಳಿತಾತ್ಮಕ ಘಟಕಗಳನ್ನು ಮಾಡಬೇಕು ಎನ್ನುವಂಥ ಮಾತು ಹೇಳಿದರೂ ಕೂಡ ಆ ಕಾಲದಲ್ಲಿದ್ದಂಥ ನಮ್ಮ ಅನೇಕ ಹಿರಿಯ ನಾಯಕರುಗಳು ಪ್ರಜಾಪ್ರಭುತ್ವದ ವ್ಯವಸ್ಥೆ ಇದು ಎಷ್ಟರ ಮಟ್ಟಿಗೆ ಇಲ್ಲಿ ಬೇರು ಬಿಡಬಹುದು, ಎಷ್ಟರಮಟ್ಟಿಗೆ ದುರುಪಯೋಗ ಆಗಲಾರದಂತೆ ಜನಹಿತ ಕಾರ್ಯಗಳಿಗೆ ಅದನ್ನು ಬಳಸಬಹುದು ಎನ್ನತಕ್ಕಂಥ ಶಂಕೆಗಳು ಇದ್ದಕಾರಣ ಸುಮಾರು 40-45 ವರ್ಷಗಳ ಕಾಲ ಇದರ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡುವ ಪ್ರಶ್ನೆಯಾಗಲೀ ಇದನ್ನು ಅತ್ಯಂತ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರುವಂಥ

ಪ್ರಯತ್ನ ಕೂಡ ಮಾಡಿರಲಿಲ್ಲ. ಆದರೆ ಹಿಂದೆ 1983ರಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳು ಇದ್ದಂಥ ಸಂದರ್ಭದಲ್ಲಿ ರಾಜಕೀಯ ಸಂಕಲ್ಪ, ಇಚ್ಛಾಶಕ್ತಿ ಕೊಟ್ಟಿರುವುದರಿಂದ ದಿವಂಗತ ಅಬ್ದುಲ್ ನಜೀರ್‌ಸಾಬ್‌ರವರು ಅಂತಹ ಒಂದು ಪರಿಣಾಮಕಾರಿಯಾದಂಥ ಪ್ರಥಮಬಾರಿಗೆ ಕರ್ನಾಟಕದ ಒಂದು ವ್ಯವಸ್ಥೆಯಲ್ಲಿ ಇಂತಹ ರಾಜಕೀಯ ಬದಲಾವಣೆಗಳನ್ನು ಅವರು ತರತಕ್ಕಂಥ ಪ್ರಯತ್ನವನ್ನು ಅವರು ಮಾಡಿದ್ದಾರೆ. ಬೇರೆ ಬೇರೆ ಕಡೆಗೂ ಕೂಡ ಬೇರೆ ಬೇರೆ ಸಂದರ್ಭದಲ್ಲಿ ಆಗಿದೆ. ಮಾನ್ಯ ಘೋರ್ಪಡೆಯವರು ತಾವು ಹಿರಿಯರು ಅನೇಕ ವಿಷಯಗಳನ್ನು ತಾವು ಸ್ವಾಗತ ಮಾಡಿದ್ದೀರಿ. ಯಾವುದೇ ಸ್ಟ್ರಕ್ಚರಲ್ ಚೇಂಜಸ್, ಇಡೀ ಸ್ವರೂಪವನ್ನು ತಾವು ವಿಕೃತಗೊಳಿಸಿಲ್ಲ ಎನ್ನುವಂಥ ಮಾತನ್ನು ತಾವು ಹೇಳಿದ್ದಕ್ಕೆ ನಾನು ಅಭಿನಂದಿಸುತ್ತೇನೆ. ಕೇಶವಾನಂದ ಭಾರತಿಯವರ ಕೇಸಿನ ವಿಚಾರದಲ್ಲಿ ಸುಪ್ರೀಮ್ ಕೋರ್ಟಿನ ಹನ್ನೊಂದು ಬೆಂಚಿನ ಜನ ಇಡೀ ಪ್ರಜಾಪ್ರಭುತ್ವದ ಕ್ಯಾರೆಕ್ಟರನ್ನು ಅದಕ್ಕೆ ಸಂಬಂಧಪಟ್ಟ ವ್ಯವಸ್ಥೆಯನ್ನು ಬದಲಿಸಬಾರದು ಎನ್ನತಕ್ಕಂಥದ್ದು ಯಾವ ರೀತಿಯಾಗಿ ಒಂದು ಮುಖ್ಯವಾಗಿರತಕ್ಕಂಥ ಆದರೆ, ಅದೇ ರೀತಿ ಯಾವುದಾದರೊಂದು ಕಾನೂನು ಮಾಡಬೇಕಾದರೆ ಕೊಂಡಜ್ಜಿ ಬಸಪ್ಪನವರ ನೇಮಕಾತಿಯಾಗಿರತಕ್ಕಂಥ ಸಮಿತಿ ಸಲಹೆಗಳಾಗಬಹುದು, ಅಶೋಕ್ ಮೆಹ್ತಾರವರು ಕೊಟ್ಟಿರತಕ್ಕಂಥ ಸಲಹೆಗಳೆ ಆಗಬಹುದು ಈ ರೀತಿಯಾಗಿ ಬೇರೆ ಬೇರೆ ಕಾಲದ ಬೇರೆ ಬೇರೆ ಸಂದಂರ್ಬಗಳಲ್ಲಿ ಆಯಾಕಾಲದ ರಾಜಕೀಯ ಪರಿಸ್ಥಿತಿ, ರಾಜಕೀಯ ಇಚ್ಛಾಶಕ್ತಿ ಸಂಕಲ್ಪ ಮತ್ತು ಜ್ಞಾನದ ಇತಿಮಿತಿಗಳಲ್ಲಿ ಆ ಒಂದು ಬದಲಾವಣೆಗಳನ್ನು ತಂದಿರುವುದರಿಂದ ನಾವು ಒಂದೇ ಇದನ್ನು ಮಾಡಿದ್ದೇವೆ ಎನ್ನುವಂಥ ಹೆಮ್ಮೆ ಇಲ್ಲ. ತಾವೇನು 1983ರ ಕಾನೂನನ್ನು ತಂದಿದ್ದೀರಿ ನಿಮ್ಮ ಕಾನೂನನ್ನು ತರತಕ್ಕಂಥ ಸಂಪೂರ್ಣವಾದ ಹಿನ್ನೆಲೆ, ಪರಿಣಾಮಕಾರಿಯಾದಂತಹ ವ್ಯವಸ್ಥೆ 1983ರ ನಮ್ಮ ಕಾನೂನಿನಲ್ಲಿ ಅಡಗಿದೆ. 1983ರಲ್ಲಿ ಕಾನೂನಿನಲ್ಲಿ ಬಂದಂತಹ ಸಂದರ್ಭದಲ್ಲಿ ಕೂಡ ಸ್ವತಃ ರಾಮಕೃಷ್ಣ ಹೆಗಡೆಯವರೇ ಒಂದು ಸಂದರ್ಭದಲ್ಲಿ ಹೇಳುತ್ತಿದ್ದರು. ಅವಿಭಾಜ್ಯ ಕಾಂಗ್ರೆಸ್‌ನಲ್ಲಿ ಅವರು ಮಂತ್ರಿಗಳಾಗಿ, ಮಾನ್ಯ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರು ಇದ್ದಂತಹ ಸಂದರ್ಭದಲ್ಲಿ ತಾವು ತಂದಂತಹ ತಿದ್ದುಪಡಿಯನ್ನು ಕಾಂಗ್ರೆಸ್ ಪಕ್ಷದಲ್ಲಿ, ಶಾಸಕಾಂಗ ಪಕ್ಷದಲ್ಲಿ ಒಪ್ಪಿಗೆ ಇಲ್ಲದಂತಹ ಸಂದರ್ಭದಲ್ಲಿ ನಾನು ರಾಜೀನಾಮೆಯನ್ನು ಕೊಟ್ಟೆ. ಆಗ ಅದರಲ್ಲಿ ಏನೋ ಒಂದು ನಾನು ರಾಜೀಸೂತ್ರವನ್ನು ಮಾಡಿ ಮುಂದೆ ನನಗೆ ಬೇರೆ ಇಲಾಖೆಯನ್ನು ವಹಿಸಿಕೊಟ್ಟರು ಎನ್ನುವಂತಹ ಮಾತನ್ನು ಅನೇಕ ಸಂದರ್ಭದಲ್ಲಿ ಹೇಳಿದ್ದಾರೆ. ಅವರೇ ಮುಂದೆ ಈ ಸಂದರ್ಭ ಬಂದಾಗ 1987ರಲ್ಲಿ ಮಂಡಲ್ ಪಂಚಾಯತ್, ಜಿಲ್ಲಾ ಪಂಚಾಯತ್, ಮತ್ತು ನ್ಯಾಯ ಪಂಚಾಯತ್‌ಗೆ ಇದೇ ಸದನ ಒಪ್ಪಿಗೆಯನ್ನು ಕೊಟ್ಟಿತ್ತು. ಈ ನ್ಯಾಯಪಂಚಾಯಿತಿ ಅಂತಹ ಹೊಸ ಪರಿಕಲ್ಪನೆಯನ್ನು ನಾವು ತಂದಿದ್ದೇವೆ. ಅದಕ್ಕಾಗಿ ಲಾ ಕಮಿಷನ್ ಅನೇಕ ವಿಚಾರಗಳ ಬಗ್ಗೆ ಇಂತಹ ಒಂದು ಕಾರ್ಯಾಗಾರಗಳನ್ನು ಮಾಡಿ ಗ್ರಾಮೀಣಪ್ರದೇಶದಲ್ಲಿ ಇಂತಹ ನ್ಯಾಯ ಪಂಚಾಯಿತಿಗಳನ್ನು ತರಬೇಕಾದ್ದಿದೆ.

ನೂರಾರು ಸಂಸ್ಥೆಗಳಲ್ಲಿ ದಿನದಿನವೂ ಒಂದು ಗ್ರಾಮದಿಂದ ಮತ್ತೊಂದು ಕಡೆ ಈ ರೀತಿಯಾಗಿರತಕ್ಕಂಥ ತೊಂದರೆಗಳು ಆಗುತ್ತಿರುತ್ತವೆ. ಕೋರ್ಟ್‌ನಲ್ಲಿ ಇದು ನಿರ್ಣಯವಾಗುವುದು ಬೇಡವೆಂದು ಗ್ರಾಮ ನ್ಯಾಯಾಲಯದ ಪರಿಕಲ್ಪನೆ ಬ್ರಿಟಿಷ್ ಕಾಲದಲ್ಲಿ ಕೂಡ ಇತ್ತು. ಈಗ ಅನಿರ್ಬಂಧಿತವಾಗಿರತಕ್ಕಂಥ ಸಿವಿಲ್ ಜ್ಯೂರಿಸ್‌ಡಿಕ್ಷನ್ ಇತ್ತು. ಎಷ್ಟೇ ಲಕ್ಷ ಮೊತ್ತದ ಬೆಲೆ ಬಾಳತಕ್ಕಂಥ ವ್ಯವಹಾರ ಇದ್ದರೂ ಕೂಡ ಅಲ್ಲಿಯ ಗ್ರಾಮ ನ್ಯಾಯಾಲಯಗಳಲ್ಲಿ ಇದನ್ನು ನಿರ್ಧಾರ ಮಾಡಬಹುದು ಎಂದು ಇತ್ತು. ಆದರೆ ಅದು ಬೇರೆ ಬೇರೆ ಕಾರಣಗಳಿಂದ ಕೋಡಿಫಿಕೇಷನ್ ಆಗುತ್ತಾ ಹೋದಂತಹ ಸಂದರ್ಭದಲ್ಲಿ ಈ ರೀತಿಯಾದಂತಹ ವ್ಯವಸ್ಥೆಗಳಾಗಿವೆ. ಆದುದರಿಂದ ತಾವು ಏನು ಹೇಳಿದ್ದೀರಿ ಸ್ಟ್ರಕ್ಚರಲ್ ಚೇಂಜಸ್ ಆಗಿಲ್ಲ ಅದು. ಸ್ಟ್ರಕ್ಚರಲ್ ಚೇಂಜಸ್ ಮಾಡಬಾರದು ಕೂಡ. ಪದೇಪದೇ ಪ್ರಯೋಗಗಳನ್ನು ಮಾಡಬಾರದು. ಆದ್ದರಿಂದಲೇ ನಾನು ಈ ಸಂದರ್ಭದಲ್ಲಿ ಅತ್ಯಂತ ವಿನಯದಿಂದ ಹೇಳುವುದಿಷ್ಟೇ, 1987ರಲ್ಲಿಯೇ ಈ ಕಾನೂನನ್ನು ನಮ್ಮಂತೆ ಸಹಿಷ್ಣುತೆಯಿಂದ ಮತ್ತು ದೂರದೃಷ್ಟಿಯನ್ನು ತೋರಿಸಿ ಪ್ರಾಯಶಃ ಒಪ್ಪಿಕೊಳ್ಳಬಹುದಾಗಿತ್ತು. ಅದಕ್ಕೆ ತಿದ್ದುಪಡಿ ತರಬಹುದಾಗಿತ್ತು. ಆಗ ಏನು ಮಂಡಲ್ ಪಂಚಾಯತ್, ಜಿಲ್ಲಾ ಪರಿಷತ್, ನ್ಯಾಯ ಪಂಚಾಯತ್ ಎನ್ನುವಂತಹ ಕಾನೂನನ್ನು ತಂದಿದ್ದರು ಆ ಕಾನೂನನ್ನು ದಿಢೀರಾಗಿ ತೆಗೆದು ಹಾಕುವಂತಹ ಪ್ರಯತ್ನವನ್ನು ಮಾಡಿ ಐದು ವರ್ಷಗಳ ಒಂದು ಯಶಸ್ವಿಯಾದಂತಹ ಪ್ರಯೋಗವನ್ನು ಕತ್ತು ಹಿಚುಕಲ್ಪಟ್ಟಿತು. ಅದು ಆಗದೇ ನಾವೂ ಕೂಡ ಈ ಮಾತನ್ನು ಹೇಳಿದ್ದೆವು. ಹಿಂದೆ ನಾವೇನಾದರೂ ಅಧಿಕಾರಕ್ಕೆ ಬಂದರೆ ಕರ್ನಾಟಕ ಪಂಚಾಯತ್ ರಾಜ್ ಆ್ಯಕ್ಟ್ 1993ರನ್ನು ರದ್ದು ಮಾಡುತ್ತೇವೆ, ಹೊಸ ಕಾನೂನನ್ನು ತರುತ್ತೇವೆ ಎಂದು ಹೇಳಿದ್ದೆವು. ಇದಾದ ಮೇಲೆ ನನಗೆ ಗೊತ್ತಾಯಿತು ಚುನಾವಣೆಗಳನ್ನು ನಡೆಸಬೇಕಾದಂತಹ ಅನಿವಾರ್ಯತೆ ಸುಪ್ರೀಂ ಕೋರ್ಟ್‌ನ ಆದೇಶದಿಂದ ಆಯಿತು. ಮಾರ್ಚ್‌ನಲ್ಲಿ ಮಾಡಿದೆವು. ಪದೇಪದೇ ಪ್ರಯೋಗಗಳನ್ನು ಮಾಡಿ ಒಂದು ವ್ಯವಸ್ಥೆ ಒಂದು ಸ್ವರೂಪಕ್ಕೆ ಬಂದಿರತಕ್ಕಂಥಾದ್ದು ನಾವು ಬದಲಿಸಬಾರದು ಎನ್ನುವಂತಹ ಒಂದು ಕಾರ್ಯಕ್ರಮವನ್ನು ಉಚಿತವಾದಂತಹ ವಿವೇಕಕ್ಕೆ ಒಳಗಾಗಿ ಅದಕ್ಕೆ ನಾವು ತಿದ್ದುಪಡಿಗಳನ್ನು ತಂದಿದ್ದೇವೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೇ, 1982ರ ಕಾನ್ಸ್‌ಟಿಟ್ಯೂಷನಲ್ ಅಮೆಂಡ್‌ಮೆಂಟ್ ಪ್ರಕಾರ ಅದನ್ನು ಎಷ್ಟು ಮಾರ್ಪಾಡು ಮಾಡಲೇಬೇಕಾಗಿತ್ತು, ಅಷ್ಟು ಮಾತ್ರ ಮಾಡಿದ್ದೇವೆ. ಸುಮ್ಮಸುಮ್ಮನೆ ಆ ಕಾಲಕ್ಕೆ ಮಾಡಿರತಕ್ಕಂಥ 83 ಆ್ಯಕ್ಟ್‌ನ್ನು ಬದಲಿಸಲಿಕ್ಕೆ ನಾವು ಹೋಗಿಲ್ಲ. ನಮ್ಮ ಆ್ಯಕ್ಟನಲ್ಲಿ ಬೇಕಾದಷ್ಟು ಕ್ಲಾಸಸ್ ಆ ಕಾಲದಲ್ಲಿ ಇದ್ದಿದ್ದು, ಅದರ ಬಗ್ಗೆ ಆಕ್ಷೇಪಣೆ ಇಲ್ಲ ಎಂದು ಉಳಿಸಿದ್ದೇವೆ. ಆದಕಾರಣ 83ರ ಆ್ಯಕ್ಟ್‌ನ್ನು ಕಾನ್ಸ್‌ಟಿಟ್ಯೂಷನಲ್ ಅಮೆಂಡ್‌ಮೆಂಟ್ ಪ್ರಕಾರ ಎಷ್ಟು ಅನಿವಾರ್ಯವಾಗಿತ್ತೋ ಅಷ್ಟಕ್ಕೆ ಮಾತ್ರ ಮಾಡಿದ್ದೇವೆ. ಉದಹರಣೆಗೆ ಎರಡು ಲೆವೆಲ್ ಡಿಸ್ಟ್ರಿಕ್ಟ್ ಮತ್ತು ಮಂಡಲ್ ಇದ್ದಿದ್ದು ನಾವು ಮೂರು ಲೆವೆಲ್ ಮಾಡಬೇಕಾಯಿತು. ಏಕೆಂದರೆ ಇದು

ಕಾನ್ಸ್‌ಟಿಟ್ಯೂಷನಲ್ ಅಮೆಂಡ್‌ಮೆಂಟ್. ಅದೆಕ್ಕೋಸ್ಕರ ಇಷ್ಟೇ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಮುದ್ದಾಂ ರಾಜಕೀಯವಾಗಿ, ಅದನ್ನು ನಿರ್ಲಕ್ಷಿಸಿ ಹೊಸ ಕಾನೂನು ಮಾಡುವುದಕ್ಕೆ ಹೋಗಿಲ್ಲ. ಎಷ್ಟರಮಟ್ಟಿಗೆ ಅನಿವಾರ್ಯ ಇತ್ತು ಅಷ್ಟನ್ನು ಮಾತ್ರ ಮಾಡಿದ್ದೇವೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರು ಹೇಳಿದಂತಹ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಬದಲಿ ಮಾಡಲಿಲ್ಲ. ಅದಕ್ಕೆ ಯಾವುದೇ ಬೇರೆ ರಾಜಕೀಯ ಉದ್ದೇಶಗಳು ಇರಲಿಲ್ಲ. ಮಾನ್ಯ ಘೋರ್ಪಡೆಯವರಿಗೆ ಇಲ್ಲದೇ ಇರಬಹುದು. ಆದರೆ ಇದರ ಹಿಂದೆ ಬಸವಲಿಂಗಪ್ಪನವರು ಕೂಡ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾನೂನು ಸಚಿವರಾಗಿದ್ದರು. ಅವರು ಸಂಪೂರ್ಣವಾಗಿ ಒಂದು ವ್ಯವಸ್ಥೆ ಕರಡನ್ನು ತಿದ್ದುಪಡಿ ಏನು ತಯಾರಾಗಿತ್ತು ಆ ಸಂದರ್ಭದಲ್ಲಿ ನೀವು ಒಪ್ಪಿತವಾಗಿದ್ದರೂ, ಒಪ್ಪಿಗೆ ಇಲ್ಲದೆ ಇದ್ದರೂ ಕೂಡ we are the inheritors of legacy ಆದುದರಿಂದ ಒಬ್ಬೊಬ್ಬ ವ್ಯಕ್ತಿ ತನ್ನದೇ ಆದಂತಹ ರೀತಿಯಲ್ಲಿ ದೃಷ್ಠಿ ಕೋನಗಳನ್ನು ಆ ಕಾನೂನುಗಳಿಗೆ ಇಡತಕ್ಕಂಥ ಪ್ರಯತ್ನ ಆಗಿರುತ್ತದೆ. ಅದಕ್ಕೆ ಸಂಪೂರ್ಣವಾಗಿ ತಾವೇ ಜವಾಬ್ದಾರರು ಎಂದು ಆ ಮಾತನ್ನು ನಾನು ಹೇಳುವುದಿಲ್ಲ. ಆದರೆ ಈ ಮಾತನ್ನು ಏಕೆ ಹೇಳುತ್ತೇನೆಂದರೆ ಒಟ್ಟಿನಲ್ಲಿ ನಾವು ಯಾವುದಾದರೂ ಒಂದು ಪ್ರಯೋಗಕ್ಕೆ ಬೇಕಾದಂತಹ ಪ್ರೇರಣೆಯನ್ನು ತೆಗೆದುಕೊಳ್ಳಬೇಕಾದರೆ ಆ ಪ್ರೇರಣೆಗೆ ಹಿಂದೆ ಇರತಕ್ಕಂಥ ಅನೇಕ ಶಕ್ತಿಗಳು ಕೆಲಸ ಮಾಡಿರುತ್ತವೆ. ಮತ್ತು ತಾವೂ ಕೂಡ 1993ರ ಕಾನೂನು ಏನು ತಂದಿದ್ದೀರಿ ಅದು ಸಂಪೂರ್ಣವಾಗಿ ಉಪೇಕ್ಷಿಸಲ್ಪಟ್ಟಿರತಕ್ಕಂಥಾದ್ದು ಅಲ್ಲ. ಪ್ರಯೋಗಕ್ಕೆ ಪದೇಪದೇ ಒಳಪಡಿಸಬಾರದು ಎನ್ನುವ ಕಾರಣಕ್ಕೆ ನಾವು ಈ ತಿದ್ದುಪಡಿಗಳನ್ನು ತಂದಿದ್ದೇವೆ. ಇಲ್ಲಿ ಏನು ಈ ಮಿಸ್‌ಕಾಂಡಕ್ಟಿಂಗ್ ವಿಚಾರದಲ್ಲಿ ಪ್ರಸ್ತಾಪ ಮಾಡಿರತಕ್ಕಂಥಾದ್ದು ಏನಿದೆ ಇದು 2-3 ದೃಷ್ಟಿಕೋನದಿಂದ ತಾವು ನೋಡಬಹುದು. ಒಂದನೆಯದು ಮೂಲಭೂತವಾಗಿ ಈ ಮಿಸ್ ಕಾಂಡಕ್ಟ್ ಎನ್ನುವಂಥಾದ್ದನ್ನು ಹೊಸದಾಗಿ ತಂದ ಆ ಪಕ್ಷದ ರಾಜಕಾರಣದ ಮೂಲಕ ಯಾರು ತಮಗೆ ಆಗದವರನ್ನು ನಾವು ಅನರ್ಹಗೊಳಿಸತಕ್ಕಂಥ ಪ್ರಯತ್ನ ಮಾಡಿದ್ದೇವೆ ಎನ್ನುವ ವಿಷಯ ಏನಿದೆ, ಉದ್ದೇಶ ಅದಲ್ಲ. ಕಾನೂನಿನಲ್ಲಿ ಈಗಾಗಲೇ ತಾಲ್ಲೂಕು ಪಂಚಾಯತ್, ಜಿಲ್ಲಾಪಂಚಾಯತ್‌ನಲ್ಲಿ ಈ ರೀತಿ ದುರ್ನಡತೆಗೆ ಒಳಗಾಗುವಂತಹ ಸದಸ್ಯನನ್ನು ತೆಗೆದುಹಾಕುವಂತಹ ಕಾನೂನು ಇದರಲ್ಲೇ ಇದೆ. ಆದರೆ ಗ್ರಾಮಪಂಚಾಯಿತಿಯಲ್ಲಿ ಇದು ಇರಲಿಲ್ಲ. ಆದುದರಿಂದ ನಾವು ನಮ್ಮೊಟ್ಟಿಗೆ ನಮ್ಮ ವಿವೇಕವನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ ಏಕೆ ಪ್ರಯತ್ನ ಮಾಡಬೇಕು? ಇಲ್ಲಿ ಬಹಳ ಮುಖ್ಯವಾಗಿ ಗಮನಹರಿಸುವಂಥಾದ್ದು ಗುಬ್ಬಿ ಕ್ಷೇತ್ರದ ಶಾಸಕರಾದಂತಹ ಶ್ರೀಮಾನ್ ಶಿವನಂಜಪ್ಪನವರು ಅಲ್ಲಿಯ ಒಂದು ವಿಚಾರವನ್ನು ತೆಗೆದರು. ಅಲ್ಲಿ ಗ್ರಾಮ...

ಶ್ರೀ ಜಿ.ಎಸ್.ಶಿವನಂಜಪ್ಪ (ಗುಬ್ಬಿ): ಒಂದು ನಿಮಿಷ, ಅವನು ಕೇವಲ ಕುಡಿದು

ಬಂದಿರಲಿಲ್ಲ. ಅವನು ಚೇರ್‌ಮನ್ ಆಗಬೇಕಾಗಿತ್ತು, ವೈಸ್ ಚೇರ್‌ಮನ್ ಆಗಬೇಕಾಗಿತ್ತು. ಅವರ ಗುಂಪಿನವರು, ಸಭೆಗೆ ನುಗ್ಗಿ ರೆಸಲ್ಯೂಷನ್ ಕಿತ್ತುಕೊಂಡು ಆಗಿದ್ದಂತಹ ಪಂಚಾಯಿತಿ ಅಧ್ಯಕ್ಷನನ್ನು ಹೊಡೆದು ಪುಸ್ತಕ ಕಿತ್ತುಕೊಂಡು ಹೋಗಿಬಿಟ್ಟ. ಪೊಲೀಸ್ ಕಂಪ್ಲೇಂಟ್ ಕೊಟ್ಟರೂ ಅವನು ಕೊಡಲಿಲ್ಲ. ಅದಕ್ಕೆ ನಾನು ನಿಮಗೆ ಕಂಪ್ಲೇಂಟ್ ಕೊಟ್ಟಿದ್ದೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಹೀಗೆ ನಾವು ಅನುಭವಗಳ ಮೂಲಕವಾಗಿ ನಾವು ಪಾಠಗಳನ್ನು ಕಲಿಯುತ್ತೇವೆ. ಈಗ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಈ ಸೆಕ್ಷನ್ ಇದೆ. ಜಿಲ್ಲಾ ಪಂಚಾಯಿತಿಯಲ್ಲಿ ನಿಮ್ಮ ಕಾನೂನಿನಲ್ಲಿ 175 ಸೆಕ್ಷನ್‌ನಲ್ಲಿ Removal of members for misconduct: "The Government if it thinks fit on the recommendations of the Zilla Panchayat, may, remove any member after giving him an opportunity of being heard and after such enquiry as it deems necessary if such member has been guilty of misconduct in the discharge of his duties or of any disgraceful conduct or as become incapable of performing his duties as a member" ಅದೇರೀತಿಯಾಗಿ ತಾಲ್ಲೂಕು ಪಂಚಾಯಿತಿಗೆ ಅಂತಹುದೇ ಅನಾಲಗಸ್ ಆಗಿ 93ರ ಆ್ಯಕ್ಟ್‌ನಲ್ಲಿ ಇದೆ. 1983ರಲ್ಲಿ ಕೂಡ ಅದೇ ಇತ್ತು. ಆದುಧರಿಂದ ಈ ಕಾನೂನಿಗೆ ಗುಬ್ಬಿ ಕ್ಷೇತ್ರದ ಶಾಸಕರಾದ ಮಾನ್ಯ ಶಿವನಂಜಪ್ಪನವರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ನೀವು ಏನಾದರೂ ಕ್ರಮ ಕೈಗೊಳ್ಳಬೇಕೆಂದು ನೋಡಿದರೆ ಗ್ರಾಮಪಂಚಾಯಿತಿ ಸದಸ್ಯನಿಗೆ ಇದು ಇಲ್ಲ. ಅದನ್ನು ಈಗ ಗ್ರಾಮ ಪಂಚಾಯಿತಿ ಸದಸ್ಯನಿಗೆ ತಂದಿದ್ದೇವೆ. ಆದರೆ ಇದನ್ನು ಡೆಫನಿಷನ್ ಕಾಲಂನಲ್ಲಿ ಏಕೆ ತರಲಿಲ್ಲ ಎಂದರೆ ಇದು ಒಂದು ಬಹಳ ವಿಸ್ತೃತವಾಗಿರತಕ್ಕಂಥ ಶಬ್ದ. ಯಾವುದು ವಿಸ್ತೃತವಾಗಿ ಆಯಾಯ ಸಂದರ್ಭಕ್ಕೆ ಅನುಗುಣವಾಗಿ ಅರ್ಥೈಸುವುದಕ್ಕೆ ಸಾಧ್ಯವಾಗುತ್ತದೆ ಅಂಥ ಪದಗಳನ್ನು ನಾವು ಯಾವುದಾದರೂ ಒಂದು ಪದ ವಾಕ್ಯಕ್ಕೆ ಅಥವಾ ಇದೇ ರೀತಿಯಾದಂತಹ ಎನ್ನುವಂತಹ ಮಾತನ್ನು ಹೇಳಿದರೆ ಅದರಿಂದ ನೂರಾರು ಈ ರೀತಿಯಾದಂತಹ ತಕರಾರು ತಂಟೆಗಳಾಗುತ್ತವೆ. ಮತ್ತು ಈ ವಿಚಾರದಲ್ಲಿ ನ್ಯಾಯಾಲಯಗಳು ತೀರ್ಮಾನ ಕೊಡತಕ್ಕಂಥ ವಿಚಾರಗಳ ಬಗ್ಗೆ ಪ್ರಶ್ನೆ ಬರುತ್ತದೆ. ಯಾವುದೇ ಕಾನೂನು ಮಾಡುವಾಗ ಈ ವಿಚಾರವನ್ನು ಹೇಳುವುದಿಲ್ಲ. ಆದುದರಿಂದಲೇ ಲಾ ಲೆಕ್ಸಿಗಾನ್‌ನಲ್ಲಿ ಏನು ಮಿಸ್ ಕಾಂಡಕ್ಟ್ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ.

"A misconduct is a specific word with a specific connotation. It cannot be mere inefficiency or slackness.

It is something far more positive and certainly deliberate disobedience of any order of the superior authority will be one species of misconduct. The word misconduct is a sufficiently wide experession and covers conduct which render any man unfit for office or is likely to temper or embarass on the admistration in the sense grossly improper or unbecoming conduct in public life may also become a misconduct and may render any officer liable for disciplinary action." Therefore the emphasis on the becoming of proper conduct..... ಅದನ್ನೆಲ್ಲಾ ಹೇಳುತ್ತಾರೆ. ಮಿಸ್ ಕಾಂಡಕ್ಟ್ ಎಂದರೆ ಏನು ಎಂದು. ಈ ತರಹದಲ್ಲಿ ಇದನ್ನು ಒಂದು ಯಾವುದಾದರೂ ಒಂದು ತೀರ್ಮಾನಕ್ಕೆ ಒಳಪಡಬಾರದು ಎನ್ನತಕ್ಕಂಥಾದ್ದಕ್ಕೆ ಲೆಕ್ಸಿಗಾನ್‌ನಲ್ಲಿ ಕೊಟ್ಟಿರತಕ್ಕಂಥ ಅರ್ಥ. ಹೀಗೆ ನಮ್ಮಲ್ಲಿ ಮಿಸ್ ಕಾಂಡಕ್ಟ್ ಏನು ಎನ್ನುವಂತಾದ್ದು ಕೂಡ ನಮ್ಮ ಆರ್ಡಿನರಿ ಡಿಕ್ಷನರಿಯಲ್ಲಿ ಮೀನಿಂಗ್ ಕೂಡ ಇದೆ. ಅದರಲ್ಲಿ ಎಷ್ಟು ದೂರದಲ್ಲಿ ಹೋಗುತ್ತಾರೆಂದರೆ ಅದರಲ್ಲಿ 'ಹಾದರ' ಎನ್ನುವುದನ್ನೂ ಕೂಡ ಸೇರಿಸತಕ್ಕಂಥ ಒಂದು ಪ್ರಶ್ನೆ ಇದೆ. ಆದರೆ ಇದಕ್ಕೆ ಏನೂ ಸಂಬಂಧ ಇಲ್ಲ. ಎಂದರೆ ಯಾವುದು ಮಿಸ್ ಕಾಂಡೆಕ್ಟ್ ಎನ್ನುವುದು ಆಯಾಯ ಸಂದರ್ಭ ಮತ್ತು ಘಟನೆಗೆ ಸಂಬಂಧಪಟ್ಟಿದ್ದು. ಈ ಕಾನೂನಿನಲ್ಲೇ ಇರತಕ್ಕಂಥಾದ್ದು ನಾವು ಗ್ರಾಮಪಂಚಾಯಿತಿಗೆ ತಂದಿದ್ದೇವೆ. ಇಲ್ಲಿವರೆಗೂ ಕೂಡ ಯಾವ ಸರ್ಕಾರ ಅಧಿಕಾರ ಮಾಡಿದರೂ ಕೂಡ ಯಾವ ಸದಸ್ಯನೂ ಕೂಡ ಒಂದು ದುರ್ನಡತೆಗಾಗಿ ಆತನನ್ನು ಅನರ್ಹಗೊಳಿಸಿರತಕ್ಕಂಥಾದ್ದು ಇಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಈಗ ಮಿಸ್ ಕಾಂಡಕ್ಟ್ ಎಂದರೆ misconduct of a legislator ಎಂದರೆ ಇಲ್ಲಿ ಬೇರೆ ಅರ್ಥ ಬರುತ್ತದೆ. ಮಾನ್ಯ ಅಧ್ಯಕ್ಷರೆ, Misconduct of an officer, that is different. ಅದು ಕೆ.ಸಿ.ಎಸ್.ಆರ್.ನಲ್ಲಿ ಬರುತ್ತದೆ. ಅದಕ್ಕೆ ಮಿಸ್ ಕಂಡಕ್ಟ್ ಆಫ್ ಪಂಚಾಯತ್ ಮೆಂಬರ್ಸ್ ಎಂದರೆ ಅಲ್ಲಿ ನಾವು ಸ್ಪೆಸಿಫೈ ಮಾಡಬೇಕಾಗುತ್ತದೆ, ಮಾಡಬಾರದೆಂದು ಅಲ್ಲ. But you have to specify; you can't apply the yardstick of an officer to that of an elected representative ಆದುದರಿಂದ ಅದನ್ನು ಸ್ಪೆಸಿಫೈ ಮಾಡಿದರೆ ಮಾನ್ಯ ಶಿವಪ್ಪನವರು ಒಪ್ಪುತ್ತಾರೆಂದು ಕಾಣತ್ತದೆ, ಇಲ್ಲದಿದ್ದರೆ ಸ್ಕೋಪ್ ಜಾಸ್ತಿಯಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ನಾನು ಏನು ಪ್ರಶ್ನೆಯನ್ನು ಹೇಳಿದ್ದೇನೆಂದರೆ ಮಿಸ್ ಕಂಡಕ್ಟ್ ಎನ್ನುವುಂಥಾದ್ದು ದುರ್ನಡತೆ ಎಂದು ನಾವೆಲ್ಲರೂ ಸಾಮಾನ್ಯವಾಗಿ ಗ್ರಹಿಸಿದಂತೆ ಆಗುತ್ತದೆ. ನಾವು ಯಾವುದಕ್ಕೆ ಹೆಚ್ಚು ಹೆಚ್ಚು ಅರ್ಥಗಳನ್ನು

ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ, ಅವು ಹೆಚ್ಚು ಹೆಚ್ಚು ದುರುಪಯೋಗದಿಂದ ಅನರ್ಥಕ್ಕೆ ಕಾರಣವಾಗುತ್ತದೆ. ಆದುದರಿಂದ ಯಾವುದನ್ನು ಸಾಮಾನ್ಯ ಮನುಷ್ಯ ತನ್ನ ವಿವೇಕದಿಂದ ಪರಿಭಾವಿಸಿಕೊಳ್ಳುತ್ತಾನೆ. ಯಾವುದು ದುರ್ನಡತೆ ಎಂದು ಕಣ್ಣಿಗೆ ಕಾಣುತ್ತದೆ, ಆ ದುರ್ನಡತೆ ಎನ್ನುವಂಥಾದ್ದು ಈಗಾಗಲೇ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾಪಂಚಾಯತ್ ಸದಸ್ಯರ ದುರ್ನಡತೆಗೆ ಆತನನ್ನು ಅನರ್ಹಗೊಳಿಸಬೇಕೆಂದು ವಿಧಿವಿಧಾನಗಳು ಇದರಲ್ಲಿ ಇದೆ. ಆದರೆ ಪಂಚಾಯತ್‌ರಾಜ್‌ನಲ್ಲಿ ಇದು ಇರಲಿಲ್ಲ, ಈಗ ಮಿಸ್ ಕಂಡಕ್ಟ್ ಎನ್ನುವುದನ್ನು ಗ್ರಾಮಪಂಚಾಯತ್‌ಗೆ ತಂದಿದ್ದೇವೆ. ಆದರೆ ಈ ತಿದ್ದುಪಡಿಯಾಗಿದೆ, ಮತ್ತೆ ಇನ್ನು ಬೇರೆ ಏನೂ ಅಲ್ಲ. ಆದರೆ ಇಲ್ಲಿ ತಾವು ಏನು ಆತಂಕವನ್ನು ವ್ಯಕ್ತ ಮಾಡಿದ್ದೀರಿ. ಇಲ್ಲಿ ನಾವು ಮಿಸ್‌ಕಂಡಕ್ಟ್ ಎನ್ನುವುದನ್ನು ಹೊಸದಾಗಿ ಸೇರಿಸುತ್ತೇವೆಂದು ಹೇಳುತ್ತಿದ್ದಾರೆ.

MR. SPEAKER: Is it specifying conduct or misconduct?

SRI M.P.PRAKASH: Whatever that is already there with regard to the members of higher bodies.

MR. SPEAKER: Conduct is specified. Whatever is not conduct, is misconduct. ನಮಗೆ ಮಾತ್ರ ಏಕೆ ಮಿಸ್ ಕಂಡಕ್ಟ್ ಎಂದು ಸ್ಪೆಸಿಫೈ ಮಾಡುವುದು, ನಿಮಗೂ ಮಾಡಿಕೊಳ್ಳಿ ಎಂದು ಅವರು ಹೇಳಿದರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ನಂಜೇಗೌಡರು ಹೇಳಿದಹಾಗೆ from place to place, body to body, institution to institution it differs ಮಿಸ್ ಕಾಂಡಕ್ಟ್ ಪಂಚಾಯತ್‌ನಲ್ಲಿ ಬೇರೆ ಇರಬಹುದು ಅಥವಾ ಗೌವರ್ನಮೆಂಟ್ ಸರ್ವೆಂಟ್‌ಗೆ ತಮ್ಮ ಸಿ.ಸಿ.ಎ. ರೂಲ್ಸ್ ಪ್ರಕಾರ suppose if he does not behave properly, that is a misconduct. ಎಂದು ಕನ್‌ಸ್ಟ್ರೂ ಮಾಡಬಹುದು ಅಥವಾ ಶಾಸಕರ ಹತ್ತಿರ ಹೋದಾಗ ಕೈಗೂಡಿಸಬೇಕು, ಎದ್ದು ನಿಲ್ಲಬೇಕೆನ್ನುವುದನ್ನು ಒಂದು ಸರ್ಕ್ಯೂಲರ್ ಇಷ್ಯೂ ಮಾಡಿ, ಅವನು ಹಾಗೆ ಮಾಡಲಿಲ್ಲವೆಂದರೆ ನ್ಯಾಚುರಲಿ ನೀವು ಮಿಸ್ ಕಂಡಕ್ಟ್ ಎಂದು ಕನ್‌ಸ್ಟ್ರೂ ಮಾಡಬಹುದು. ಆದರೆ ನೀವು ಕುಳಿತಾಗ ಅಥವಾ ಮಂತ್ರಿಗಳು ಕುಳಿತಾಗ ಯಾರಾದರೂ ಎದ್ದು ನಿಂತಿಲ್ಲವೆಂದು ಅದನ್ನು ಮಿಸ್ ಕಂಡಕ್ಟ್ ಎಂದು ಕನ್‌ಸ್ಟ್ರೂ ಮಾಡಬಾರದು. ಆ ದೃಷ್ಟಿಯಿಂದ ನಾನು ಹೇಳುತ್ತಿರುವಂಥಾದ್ದು, ನೀವು ಸೆಕ್ಷನ್ 43(ಎ)ನಲ್ಲಿ ಡಿಫೈನ್ ಮಾಡಿರುವುದಕ್ಕೆ ಈ ಪ್ರಶ್ನೆ ಬಂದಿದೆಯೇ ಹೊರತಾಗಿ ಮತ್ತೆ ಏನೂ ಅಲ್ಲ.

ಶ್ರೀ ಎಂ.ಪಿ.ಪ್ರಕಾಶ್: ತಾವು ಕಾನೂನನ್ನು ಪಾಸ್ ಮಾಡುವಂತಹ ಸಂದರ್ಭದಲ್ಲಿ ಏನು ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗೆ ಸೇರಿಸಿದ್ದೀರಿ ಹಾಗೂ ಮಿಸ್ ಕಂಡಕ್ಟ್ ಎನ್ನುವಂಥಾದ್ದು ಡೆಫನೆಷನ್ ಕಾಲಂನಲ್ಲಿ ತಾವು ತಂದಿಲ್ಲ.

ಅಧ್ಯಕ್ಷರು: ನಾನು ಅದನ್ನೇ ಹೇಳುತ್ತಿರುವಂಥದ್ದು ಅವರು ಇಪ್ಪತ್ತು ತಿಂಗಳುಗಳು ಎಂದು ಮಾಡಿದಾಗ ಸುಮಾರು ಊರುಗಳಲ್ಲಿ ಗಲಾಟೆ ಮಾಡಿದರು. ನಮಗೆ ಏಕೆ 20 ತಿಂಗಳುಗಳು ನಿಮಗೆ ಏಕೆ ಇರಬಾರದು ಎಂದು ಕೇಳಿದರು. ಅದಕ್ಕೆ ಮಿಸ್ ಕಂಡಕ್ಟ್ ಬಗ್ಗೆಯೂ ಕೇಳಿಬಿಟ್ಟಾರು ಎಂದು ಹೇಳುವುದು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಾವು ದೊಡ್ಡ ಸ್ಥಾನದಲ್ಲಿದ್ದೇವೆಂದು ಅದಕ್ಕೆ ಅಹಿತವಾಗಿರುತ್ತೇವೆನ್ನುವಂಥದ್ದು ಅದು ಶಾಸನಸಭೆಯಲ್ಲಾಗಲಿ, ಅಥವಾ ಲೋಕಸಭೆಯಲ್ಲಾಗಲಿ ಅದರಲ್ಲೂ ಕೂಡ ಮಿಸ್ ಕಂಡಕ್ಟ್ ಆದರೂ ಅದು ಮಿಸ್ ಕಂಡಕ್ಟೇ ಆಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಮುಂದಿನದನ್ನು ನೋಡಿ, ಅದು ಏನಿದೆ ಎಂದರೆ "or of any disgraceful conduct or has become incapable of performing his duties as a member"

SRI M.P.PRAKASH: It is already there. Whatever that has been mentioned with regard to taluka panchayat and Zilla panchayat under Section 175 and 130, we have simply repeated it and said that it is applicable to Gram panchayat. ಇದು ಬಹಳ ವಿಸ್ತೃತವಾದಂತಹ ಅರ್ಥ ವ್ಯಾಪ್ತಿಯನ್ನು ಕೊಡುವುದರಿಂದ ಅದನ್ನು ಯಾವುದಾದರೂ ಒಂದು ಕಡೆ ಸೆರೆಹಿಡಿಯುವಂತಹ ಪ್ರಯತ್ನವನ್ನು ಮಾಡಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ಹಾಗೆಯೇ ತಾವು ತಾಲ್ಲೂಕು ಪಂಚಾಯತ್‌ನಲ್ಲಿ, ಜಿಲ್ಲಾಪಂಚಾಯತ್‌ನಲ್ಲಿ ಹೇಗೆ ಅನ್ಯಾಯವಾಗುತ್ತದೋ ಹಾಗೆ ಇಲ್ಲೂ ಅನ್ಯಾಯವಾಗುತ್ತದೆಂದು ಹೇಳಿ,

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ನಾವು ತಂದಿರುವಂತಹ ಕಾನೂನಿನಂದ ಗ್ರಾಮಪಂಚಾಯತ್‌ಗೆ ಅನ್ಯಾಯವಾಗುತ್ತದೆಂದು ನಾವು ಅದನ್ನೇ ಇಲ್ಲಿ ತಂದಿರುವಂಥಾದ್ದು.

ಶ್ರೀ ಹೆಚ್.ಶಿವಪ್ಪ: ಮಾನ್ಯ ಅಧ್ಯಕ್ಷರೆ, ನಾವು ಹಿಂದಿನ ಕಾನೂನಿನಲ್ಲಿ ತಪ್ಪು ಮಾಡಿದ್ದೇವೆಂಬುದು ಮನವರಿಕೆಯಾದರೆ ಏಕೆ ತಿದ್ದಿಕೊಳ್ಳಬಾರದು? Mere

because it is incorporated in the old Act ತಾಲ್ಲೂಕು ಪಂಚಾಯತ್‌ಗೆ, ಜಿಲ್ಲಾ ಪಂಚಾಯತ್‌ಗೆ ಅಷ್ಟೆ ಮಾಡುವಂಥದ್ದನ್ನು ಮಾಡಿ, ಅದನ್ನೆ ಇಲ್ಲಿ ರಿಫೀಟ್ ಮಾಡುವಂಥಾದ್ದು ಇಲ್ಲಿ ತಪ್ಪು ಎಂದು ಕಂಡು ಹಿಡಿದು ಅದನ್ನೂ ಅಮೆಂಡ್‌ಮೆಂಟ್ ಮಾಡುವ ಪ್ರಸಂಗ ಬರಬಹುದು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಅದು ತಪ್ಪು ಎಂದು ಸರ್ಕಾರ ಭಾವಿಸಿಲ್ಲ. ಬಹುಶಃ ಎಲ್ಲರೂ ಕೂಡ ತಪ್ಪು ಎಂದು ಭಾವಿಸಿಲ್ಲವೆಂದು ಸರ್ಕಾರ ಭಾವಿಸುತ್ತದೆ. ಆದುದರಿಂದ ಈಗ ತಾವು ಮಿಸ್ ಕಂಡಕ್ಟ್ ಬಗ್ಗೆ ಏನು ಹೇಳಿದ್ದೀರಿ.

MR. SPEAKER: The apprehension is, ಸನ್ಮಾನ್ಯ ಪ್ರಕಾಶರವರೇ, ಈಗ ನಾವು ಡಿ-ಸೆಂಟ್ರಲೈಜೇಷನ್ ಮಾಡುವಂಥದ್ದು ಲೆಜಿಸ್ಲೇಟ್ ಮಾಡುತ್ತಿದ್ದೇವೆ. ಹಿಂದೆ ಮಾನ್ಯ ನಜೀರ್‌ಸಾಬ್‌ರವರು ತಂದಾಗ ಕೂಡ ಶಾಸನಸಭೆಯಲ್ಲಿ ಕೂಡ ಇದೇ ಮಾತನ್ನು ಹೇಳಿದ್ದೇವೆ, ಇದು ತಮಗೂ ನೆನಪು ಇರಬಹುದು. ನಮ್ಮಲ್ಲಿ ಕೇಡರ್ ಬೇಸ್ ಪೊಲಿಟಿಕಲ್ ಪಾರ್ಟೀಸ್ ಇಲ್ಲ, politicised masses ಇಲ್ಲ. ಇನ್ನು ನಾವು ಆ ಫ್ಯೂಡಲ್ ಸಿಸ್ಟಂನಿಂದ ಪೂರ್ಣವಾಗಿ ಹೊರಗೆ ಬಂದಿಲ್ಲ. ನಾವು ಇಷ್ಟೆಲ್ಲಾ ಲ್ಯಾಂಡೆಡ್ ರಿಫಾರ್ಮ್, ಮತ್ತೊಂದು ಎಂದು ತಂದರೂ ಕೂಡ the tentacles of feudal system exists still in a very strong way in the rural life. ಆ ರೀತಿಯ ಆ್ಯಂಬಿಗ್ವಿಟಿ ಇದ್ದರೆ ಅವರಿಗೆ ರಿವೆಂಜ್‌ಫುಲ್ ಆಗಿ ಇದನ್ನು ಉಪಯೋಗ ಮಾಡುವುದಕ್ಕೆ ಅವಕಾಶವಾಗುತ್ತದೆನ್ನುವ ಅಪ್ರೆಹೆನ್ಷನ್ ಇದೆ. That needs to be satisfied. You must understand the things as they are.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಸದನದ ಕಾರ್ಯಕಲಾಪಗಳು ನಡೆಯಬೇಕಾದರೆ ಮಲಗಬಹುದು ಆದರೆ ಗೊರಕೆ ಹೊಡೆಯುವ ಹಾಗೆ ಇಲ್ಲ. ಇಲ್ಲಿ ಮಾನ್ಯ ಪ್ರಕಾಶ್‌ರವರು ಇಷ್ಟು ಜೋರಾಗಿ ಮಾತನಾಡುತ್ತಿದ್ದಾರೆ. ಆದರೆ ಮಾನ್ಯ ಉಪ ಮುಖ್ಯಮಂತ್ರಿಯವರು ನಿದ್ದೇನೆ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಅವರು ಒಬ್ಬರೇ ನಿದ್ರೆ ಮಾಡುವುದಿಲ್ಲ, ಅನೇಕರು ನಿದ್ರೆ ಮಾಡುತ್ತಾರೆ, ಅವರೊಬ್ಬರನ್ನೇ ಏಕೆ ಹೇಳುವುದು? ಇಲ್ಲಿ ಅನೇಕರು ನಿದ್ರೆ ಮಾಡುತ್ತಾ ಇರುತ್ತಾರೆ, ಆದರೆ ನಾವು ಯಾರನ್ನೂ ಗಮನಿಸುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ಅನೇಕ ವಿಷಯಗಳಲ್ಲಿ ಮಾನ್ಯ ಘೋರ್ಪಡೆಯವರು ಹೇಳಿದಂತೆ ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿಗಳು ಇದರ ವ್ಯವಸ್ಥೆಯ ಬಗ್ಗೆ ಕಾನೂನಿನಲ್ಲಿ ಇದೆ. ನಾವು ಇನ್ನು ಒಂದು ಉದ್ದೇಶಿತವಾದಂತಹ ತಿದ್ದುಪಡಿ ಕೂಡ ನಮ್ಮ ಮನಸ್ಸಿನಲ್ಲಿತ್ತು, ಅದನ್ನು ತಂದೆವು, ಆದರೆ ಅದಕ್ಕೆ ಒಪ್ಪಿಗೆ ಸಿಗಲಿಲ್ಲ. ಅದು

ಏನೆಂದರೆ ಆಯ್ಕೆಯಾದಂಥವರಿಗೆ ಎರಡು ಮಕ್ಕಳಿಗಿಂತ ಹೆಚ್ಚು ಮಕ್ಕಳು ಇರುವವರು ಅನರ್ಹವೆನ್ನುವಂಥಾದ್ದನ್ನು ತರಬೇಕೆಂದು ಇತ್ತು.

ಅಧ್ಯಕ್ಷರು: ಅದನ್ನು ಮಾಡಿ.

ಶ್ರೀ ವಾಟಾಳ್ ನಾಗರಾಜ್: ಆ ಕೆಲಸ ಮೊದಲು ಆಗಲಿ, ಮೊದಲು ಇಲ್ಲಿ ಮಂತ್ರಿಗಳು ಶಾಸಕರು ಈ ತೀರ್ಮಾನಕ್ಕೆ ಬರಬೇಕು.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಒಪ್ಪಿಕೊಳ್ಳುತ್ತೇವೆ, ಆದರೆ ಏನೋ ಗ್ರಹಚಾರ ಕೆಟ್ಟು ಒಟ್ಟಿಗೆ ನಾಲ್ಕು ಮಕ್ಕಳು ಹುಟ್ಟಿದರೆ ಏನು ಮಾಡುವುದು can he be disqualified?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸುರೇಶ್ ಕುಮಾರಣರವರೇ, ಇತ್ತೀಚಿನ ದಿವಗಳಲ್ಲಿ ನಾಲ್ಕು ಮಕ್ಕಳು, ಮೂರು ಮಕ್ಕಳು ಹುಟ್ಟುವುದು ಉಂಟು.

ಶ್ರೀಮತಿ ಪ್ರಮೀಳ ನೇಸರ್ಗಿ: ಒಂದೇ ಸಲಕ್ಕೆ ನಾಲ್ಕು ಮಕ್ಕಳು ಆಗುತ್ತವೆ. ಇಲ್ಲಿ ಡೆಲಿವರಿಯಾಗುವುದು ಲೆಕ್ಕ, ಆದುದರಿಂದ ಡೆಲಿವರಿಯನ್ನು ಎರಡು ಎಂದು ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಎಲ್ಲಾ ಕಾನೂನಿಗೂ ಕೆಲವು ಅಪವಾದಗಳು ಇರುತ್ತದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ.

ಶ್ರೀ ಹೆಚ್.ಎನ್.ನಂಜೇಗೌಡ: ಸದಸ್ಯರಾದ ಶ್ರೀಮತಿ ಪ್ರಮೀಳ ನೇಸರ್ಗಿಯವರು ಲೆಕ್ಕಕ್ಕೆ ಎರಡು ಡೆಲಿವರಿ ಎಂದು ಹೇಳಿದರು. ಈ ಎರಡು ಡೆಲಿವರಿಯಲ್ಲಿ ಮಕ್ಕಳು ಸತ್ತು ಹೋದರೆ ಏನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ಹೋದರೆ ಬಹಳ ವೈಚಾರಿಕವಾಗಿ ಬರಬೇಕಾಗುತ್ತದೆ. ಆದುದರಿಂದ ಈ ವಿಷಯ ಬೇಡ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಕೆಲವರು ಈ ವಿಚಾರದಲ್ಲಿ ಧಾರ್ಮಿಕ ಅಭಿಪ್ರಾಯಗಳನ್ನು ಇಟ್ಟುಕೊಂಡಿರುತ್ತಾರೆ, ಇಂತವರು ಕುಟುಂಬ ಕಲ್ಯಾಣ ಯೋಜನೆಗೆ ಸೇರ್ಪಡೆಯಾಗುವಂಥಾದ್ದು ತಪ್ಪು ಎಂಬ ಅಭಿಪ್ರಾಯಗಳು ಇರುತ್ತವೆ, ಮತ್ತೆ ಅದು ವಿವಾದ ಆಗಬಹುದು. ಆದರೆ ಆಂಧ್ರಪ್ರದೇಶದಲ್ಲಿ ಇಂತಹ ಕಾನೂನನ್ನು ಜಾರಿಗೆ ತಂದಿದ್ದಾರೆ, ಇದರ ಬಗ್ಗೆ ಕೋರ್ಟ್‌ನಲ್ಲಿ ಯಾರೂ ಪ್ರಶ್ನೆ ಮಾಡಲಿಲ್ಲ. ಆದುದರಿಂದ

ಕೋರ್ಟ್ ಈ ವಿಚಾರದಲ್ಲಿ ನಿರ್ಣಯ ಕೊಟ್ಟಿಲ್ಲ. ಇಂತಹ ವಿಚಾರದಲ್ಲಿ ಸಭೆಯೂ ಸರ್ವಾನುಮತಕ್ಕೆ ಬರುವುದಾದರೆ ನಾವು ಅದನ್ನು ಖಂಡಿತವಾಗಿ ಸ್ವಾಗತ ಮಾಡುತ್ತಿದ್ದೆವು. ಇದನ್ನು ಈಗ ಕೈ ಬಿಟ್ಟಿದ್ದೇವೆ, ಅದನ್ನು ತರಲಿಲ್ಲ. ಆದರೆ ಶೌಚಾಲಯದ ವಿಚಾರದಲ್ಲಿ ನಾವು ಪ್ರಯತ್ನ ಮಾಡಿದ್ದೇವೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ''ನಿರ್ಮಲ ಕರ್ನಾಟಕ'' ಎಂದು ಮಹಾತ್ಮ ಗಾಂಧೀಯವರ ಆತ್ಮಚರಿತ್ರೆಯನ್ನು ಎಲ್ಲರಿಗೂ ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿ ಅದ್ಭುತವಾದಂತಹ ರೀತಿಯಲ್ಲಿ ಬರೆಯುತ್ತಾರೆ. ಈ ಒಂದು ಕೊಳಕು ವ್ಯವಸ್ಥೆಯಿಂದ ಭಾರತೀಯ ವಿಮೋಚನೆ ಪಡೆಯುವುದಕ್ಕಾಗುವುದಿಲ್ಲವೆಂದು ಬರುತ್ತದೆ, ಸ್ನಾನವೆನ್ನುವುದೊಂದು ಮಾಡುವುದು ಬಿಟ್ಟರೆ ಇಷ್ಟು ಕೊಳಕಾದಂತಹ ವ್ಯವಸ್ಥೆಯಲ್ಲಿ ನಾವೆಲ್ಲರೂ ತಲೆ ತಗ್ಗಿಸುವಂತಹ ವ್ಯವಸ್ಥೆ ಇದೆ ಎನ್ನುವಂತಹ ಮಾತನ್ನು ಅವರು ಪ್ರಸ್ತಾಪ ಮಾಡುತ್ತಾರೆ.

7. 10 ಪಿ.ಎಂ

ಈ ದೃಷ್ಟಿಯಿಂದ ಒಂದು ಒಳ್ಳೆಯ ವಾತಾವರಣವನ್ನು ನಾವು ಸೃಷ್ಟಿ ಮಾಡಬೇಕು, ಒಂದು ಶುಚಿಯಾದಂತಹ ವಾತಾವರಣ ಇದ್ದಾಗ, ಅವನಿಗೆ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಕೆಲಸ ನಿರ್ವಹಿಸಲಿಕ್ಕೆ ಅನುಕೂಲವಾಗುತ್ತದೆ. ಅದಕ್ಕೊಂದು ಸಾಂಕೇತಿಕ ಎನ್ನುವುದಕ್ಕಿಂತ ಹೆಚ್ಚಾಗಿ ಒತ್ತಡಗಳು ಇರಬೇಕು ಎನ್ನುವ ಕಾರಣಕ್ಕಾಗಿಯೇ ಇದನ್ನು ನಾವು ತಂದಿದ್ದೇವೆ. ಇದರಲ್ಲಿ ನಾವು 1650 ರೂ.ಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗದವರಿಗೆ ಕೊಡುತ್ತೇವೆ. ಅವರಿಗೆ ಆರ್ಥಿಕವಾಗಿ ಸಂಪನ್ಮೂಲಗಳು ಇರುವುದಿಲ್ಲ, ಅನೇಕ ಕಡೆಗೆ ಅವರಿಗೆ ಜಾಗವೇ ಇರುವುದಿಲ್ಲ ಎನ್ನುವಂತಹ ಪ್ರಶ್ನೆ ಬಂದಿದೆ. ಈಗಾಗಲೇ ನಾವು ಇಂತಹ ಸಂದರ್ಭ ಬಂದಿರತಕ್ಕಂಥವರಿಗೆಲ್ಲಾ ಜಾಗವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ. ತಿಪ್ಪೇಗುಂಡಿಗಳನ್ನು ರಸ್ತೆ ಬದಿಯಲ್ಲಿ ಹಾಕಿಕೊಂಡಿರತಕ್ಕಂಥವರಿಗೆ ಬೇರೆ ಭೂಮಿಯನ್ನು ಖರೀದಿ ಮಾಡಿ ಅವರಿಗೆ ಕೊಡಬೇಕು ಎನ್ನುವಂಥಾದ್ದರ ಬಗ್ಗೆ ಯೋಚನೆ ಮಾಡುತ್ತೇವೆ. ಈ ರೀತಿ ಯಾರು ಆಯ್ಕೆಯಾಗಿ ಬಂದಿರುತ್ತಾರೆ, ಆಯ್ಕೆಯಾಗುವುದಕ್ಕಿಂತ ಪೂರ್ವದಲ್ಲಿ ಇದು ಅನರ್ಹಗೊಳಿಸತಕ್ಕದ್ದೇನಿಲ್ಲ. ನಾಮ ನಿರ್ದೇಶನ ಮಾಡಿದಂಥ ಸಂದರ್ಭದಲ್ಲೂ ಕೂಡ ಆತನ ನಾಮಪತ್ರವನ್ನು ತಿರಸ್ಕರಿಸುವ ಅಧಿಕಾರ ಇಲ್ಲ. ಯಾರು ಚುನಾಯಿತನಾಗಿರುತ್ತಾನೆ, ಅವನು ಆರು ತಿಂಗಳೊಳಗಾಗಿ ಅದನ್ನು ಕಟ್ಟಿಕೊಳ್ಳಬೇಕು. ಆತ ಶೌಚಾಲಯ ಕಟ್ಟಿಕೊಳ್ಳಬೇಕು ಎಂದು ಹೇಳುವುದರ ಉದ್ದೇಶ ಏನೆಂದರೆ, ಆತ ಒಬ್ಬ ಸಾಮಾಜಿಕ ನಾಯಕನಾಗಿರುತ್ತಾನೆ ತನ್ನ ಗ್ರಾಮ ಪಂಚಾಯಿತಿಯ ಜವಾಬ್ದಾರಿಗಳಲ್ಲಿ ಅದನ್ನೂ ಕೂಡ ನಾವು ಸೇರಿಸಿರುತ್ತೇವೆ, ಯಾವುದನ್ನು ಗ್ರಾಮ ಪಂಚಾಯಿತಿಯ ಜವಾಬ್ದಾರಿಗಳನ್ನು ನಿರ್ವಹಿಸಬೇಕಾದಂತಹ ಒಬ್ಬ ವ್ಯಕ್ತಿಯೇ ತನ್ನದೇ ಆದಂತಹ ಒಂದು ಶೌಚಾಲಯವನ್ನು ಹೊಂದಲಿಕ್ಕೂ ಕೂಡ ಅವನಿಗೆ ಮನಸ್ಸು ಇಲ್ಲದೇ ಹೋದರೆ, ಆ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಲಿಕ್ಕೆ ಆತ

ಅಲಕ್ಷ್ಯ ಮಾಡಬಹುದು ಎಂಬ ಕಾರಣಕ್ಕಾಗಿಯೇ ನಾವು ಈ ಕಾನೂನನ್ನು ತಂದಿದ್ದೇವೆ. ಇದು ಒಳ್ಳೆಯ ಕಾನೂನು. ದಯವಿಟ್ಟು ಎಲ್ಲರೂ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ.

SRI KAGODU THIMAPPA: If he does not have a sanitary latrine for the use of his family members.... ಅಂದರೆ ನೀವು ಅವನು ನಾಮಿನೇಷನ್ ಫೈಲ್ ಮಾಡಬೇಕಾದರೆ He must have a latrine. ಎಂದು ಮಾಡಿದ್ದೀರಿ. ಎರಡನೆಯ ಪ್ರಾವಿಷನ್ ನೀವೇನು ಮಾಡಿದ್ದೀರಿ ಎಂದರೆ, ಈಗಾಗಲೇ ಮೆಂಬರ್ ಆಗಿರತಕ್ಕವರು ಆರು ತಿಂಗಳೊಳಗಾಗಿ ಶೌಚಾಲಯ ಕಟ್ಟಿಕೊಳ್ಳಬೇಕು, ಆದರೆ ಶೇಕಡ ಅರ್ಧದಷ್ಟು ಜನ....

ಶ್ರೀ ಬಿ.ಎಸ್.ಯಡಿಯೂರಪ್ಪ: ಅನೇಕ ಪಂಚಾಯಿತಿ ಸದಸ್ಯರು ಇವತ್ತು ಮನೆ ಇಲ್ಲದೇ ಇದ್ದಾರೆ. ಮನೆಯೇ ಇಲ್ಲದಿರುವಾಗ ಶೌಚಾಲಯ ಕಟ್ಟಿಕೊಳ್ಳುವುದು ಹೇಗೆ?

ಶ್ರೀ ಎಂ.ಪಿ.ಪ್ರಕಾಶ್: ಅವರು ಆರು ತಿಂಗಳೊಳಗಾಗಿ ಕಟ್ಟಿಕೊಳ್ಳಬೇಕೆಂದು ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ: ಇದು ಆಗುವುದಿಲ್ಲ ಬಿಡಿ.

ಅಧ್ಯಕ್ಷರು: ಲಾಂಗ್ವೇಜ್ ಏನೂ ಅಷ್ಟು ಚೆನ್ನಾಗಿ ಕಾಣುತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸೆಕ್ಷನ್ 58(1)(ಎ)ನಲ್ಲಿ ಏನಿದೆ, ಇವೆಲ್ಲಾ ಬೇಕಾಗಿಲ್ಲ. ಬೇಕಾದರೆ ಸಿವಿಲ್ ಅಮಿನಿಟೀಸ್ ಎಂದು ಹೇಳಿ ಏನಾದರೂ ಒಂದು ಡೆಫನೇಷನ್ ಕ್ರಿಯೇಟ್ ಮಾಡಿ If they don't provide civic amenities, ಇಲ್ಲದಿದ್ದರೆ ಆತ ಸದಸ್ಯತ್ವ ಕಳೆದುಕೊಳ್ಳುತ್ತಾನೆ ಎಂದು ಮಾಡಿ. ಅದನ್ನು ಬಿಟ್ಟು ನೀವು ಇಷ್ಟೆಲ್ಲಾ ಹಾಕಿದರೆ ಏನಾಗುತ್ತದೆ ಎಂದರೆ, ಯಾರಿಗೋ ನೀರು ಕೊಟ್ಟಿಲ್ಲ ಎಂದು ಹೇಳಿ ನೀವು ಅವರನ್ನು ತೆಗೆಯುವುದು,.....

ಶ್ರೀ ಎಂ.ಪಿ.ಪ್ರಕಾಶ್: ನೀವು ಹೇಳಿದಂತೆ ಚುನಾವಣೆಗೆ ನಿಲ್ಲುವಂತಹ ಸಂದರ್ಭಗಳಲ್ಲಿ ಚುನಾವಣೆಯಲ್ಲಿ ನಿಲ್ಲಬೇಕಾದ ವ್ಯಕ್ತಿ ಒಂದು ಶೌಚಾಲಯವನ್ನು ಕುಟುಂಬಕ್ಕೆ ಇಟ್ಟುಕೊಳ್ಳಬೇಕು ಎನ್ನುವಂಥಾದ್ದರ ಬಗ್ಗೆ ನಾವು ಒತ್ತಾಯ ಮಾಡುವುದಿಲ್ಲ. ಆದರೆ ಆತ ಚುನಾಯಿತನಾದ ಮೇಲೆ ಕನಿಷ್ಟ ಆರು ತಿಂಗಳೊಳಗಾದರೂ ಆತ ಒಂದು ಶೌಚಾಲಯವನ್ನು ಕಟ್ಟಿಕೊಳ್ಳಬೇಕು ಎಂಬುದಕ್ಕೆ ನಾವು ಒತ್ತಾಯ ಮಾಡುತ್ತೇವೆ. ಈ ಸರ್ಕಾರದಲ್ಲಿ ನಾವು ಅದನ್ನು ಮಾಡಿಯೇ ತೀರಬೇಕಾಗುತ್ತದೆ. ಏಕೆಂದರೆ ಅವರು ಹಳ್ಳಿಯಲ್ಲಿ ಒಂದು ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಬೇಕಾಗುತ್ತದೆ....

ಶ್ರೀ ಅರಗ ಜ್ಞಾನೇಂದ್ರ: ಒಂದು ವೇಳೆ ಗ್ರಾಮ ಪಂಚಾಯಿತಿ ಸದಸ್ಯ ಬಾಡಿಗೆ ಮನೆಯಲ್ಲಿ ಇದ್ದರೆ ಏನು ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಇದರ ಸಫಲತೆ ಏನು?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಬಾಡಿಗೆ ಮನೆಯಲ್ಲಿರುವಂತಹವರಿಗೆ ಶೌಚಾಲಯ ಕಟ್ಟಿಕೊಳ್ಳಲಿಕ್ಕೆ ಪ್ರತ್ಯೇಕವಾದಂತಹ ಜಾಗ ಕೊಡಬೇಕು ಎಂಬ ಬಗ್ಗೆಯೂ ಕೂಡ ನಾವು ಯೋಚನೆ ಮಾಡಲಿಕ್ಕೆ ತಯಾರು ಇದ್ದೇವೆ. ಈಗಾಗಲೇ ಇರತಕ್ಕ ಕಾನೂನಿನಡಿ ನಾವು ಅವರಿಗೆ 1650 ರೂ.ಗಳನ್ನು ಕೊಟ್ಟಿದ್ದೇವೆ. ಆತ ಯಾವ ಜಾತಿಯವನೇ ಆಗಿರಬಹುದು, ಯಾವುದೇ ಆರ್ಥಿಕ ಸ್ವಾತಂತ್ರ್ಯ ಆತನಿಗೆ ಇದ್ದರೂ ಕೂಡ ಆತನಿಗೆ 1200 ರೂ.ಗಳ ರಿಯಾಯಿತಿಯನ್ನು ನಾವು ಈಗಾಗಲೇ ಕೊಡುತ್ತಿದ್ದೇವೆ. ಆದ್ದರಿಂದ ಆತ ಒಂದು ಶೌಚಾಲಯವನ್ನು ಕಟ್ಟಿಕೊಂಡೇ ತೀರಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಸೈಟು ಇಲ್ಲದೇ ಇರುವ ಹಾಗೂ ಮನೆ ಇಲ್ಲದೇ ಇರುವ ಸುಮಾರು 16-18 ಜನ ಸದಸ್ಯರುಗಳು ನನ್ನ ತಾಲ್ಲೂಕಿನಲ್ಲಿದ್ದಾರೆ ಬೇಕಾದರೆ ನಾನು ಅವರ ಹೆಸರುಗಳನ್ನು ಕೊಡುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ನಿಮ್ಮ ತಾಲ್ಲೂಕು ಒಂದರಲ್ಲೇ ಏನು, ನಾವು ಮಾಡಿದಂತಹ ಸರ್ವೆ ಪ್ರಕಾರ ಇಡೀ ರಾಜ್ಯದಲ್ಲಿ ಅಂತಹವರು ಸುಮಾರು 11 ಲಕ್ಷ ಜನರಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ಬಡವರ ಮನೆಗಳಲ್ಲಿ ಹೊರಗಡೆ ಹೋಗುವುದೇ ಅಭ್ಯಾಸ, ನಮಗೆ ಕಟ್ಟಿಕೊಳ್ಳುವುದು ಇಷ್ಟವಿಲ್ಲ ಎನ್ನುತ್ತಾರೆ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸಿದ್ಧರಾಮಯ್ಯನವರೇ, ತಮಗೆ ಗೊತ್ತಿದೆ, ನಿಮ್ಮ ನೀರಿನ ವ್ಯವಸ್ಥೆ ಪರಿಣಾಮಕಾರಿಯಾಗಿ ಇಲ್ಲದೇ ಇದ್ದರೆ ಯಾವ ಶೌಚಾಲಯ ನಿಮಗೆ ಅನುಕೂಲವಾಗುತ್ತದೆ? ಸುಮ್ಮನೆ ಶೌಚಾಲಯ ಎಂದು ಹೇಳಿ ಬಿಟ್ಟರೆ ಹೇಗೆ? ಅದಕ್ಕೊಂದು ಬೆಲೆ ಬೇಡವೇ? ಇದು ಹೇಳುವುದಕ್ಕೆ ಚೆನ್ನಾಗಿ ಇರುತ್ತದೆ ಹಾಗೂ ಬಹಳ ಆದರ್ಶವಾಗಿ ಕಾಣುತ್ತದೆ....

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಕೂಡ ನಾವೆಲ್ಲರೂ ಇಂತಹ ಭಾಷಣ ಪ್ರಿಯರಾಗಿ ಬರೀ ಭಾಷಣವನ್ನು ಮಾಡಿ ಅವರಿಗೆ ತತ್ವವನ್ನು ಬೋಧಿಸಿದ್ದೇವೆ. ಎಲ್ಲೋ ಒಂದು ಕಡೆಗೆ ನಾವು ಒಂದು ಕಡಿವಾಣವನ್ನು ಹಾಕಲೇಬೇಕಾಗುತ್ತದೆ. ನಮ್ಮಲ್ಲಿರತಕ್ಕಂತಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದಿರತಕ್ಕಂತಹವರು ಹಳ್ಳಿಗಳಲ್ಲಿರತಕ್ಕಂಥವರು ಶುಚಿಭೂತರಾಗಿ ಇರಬೇಕು

ಎಂದು ನಾವೇಕೆ ಬಯಸುವುದಿಲ್ಲ?...

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಕಾಮನ್ ಶೌಚಾಲಯಗಳಲ್ಲಿ ನೀರಿಲ್ಲ, ದುರ್ವಾಸನೆ ಹತ್ತಿಕೊಂಡು ಜನ ಅಲ್ಲಿ ಹೋಗಲಿಕ್ಕಾಗುತ್ತಿಲ್ಲ. ಬೇಕಾದರೆ ನಿಮಗೆ ಇಂತಹ ನೂರು ಜಾಗಗಳನ್ನು ನಾನು ತೋರಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಎಲ್ಲರೂ ಶುಚಿಯಾಗಿರಬೇಕು ಎನ್ನತಕ್ಕಂಥ ನಿಮ್ಮ ಉದ್ದೇಶವನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಅವರಿಗೆ ಏನೂ ಇಲ್ಲದೇ ಇರತಕ್ಕಂಥ....

SRI J.C.MADHUSWAMY: Practically it is impossible.

ಶ್ರೀ ಎಂ.ಪಿ.ಪ್ರಕಾಶ್: ದಯಮಾಡಿ ನಾನು ಮಾತನಾಡತಕ್ಕದನ್ನು ಕೇಳಿ. ತಾವು ಹೇಳಬೇಕಾದಂತಹ ವಿಷಯಗಳನ್ನು ತಾವೆಲ್ಲಾ ಹೇಳಿದ್ದೀರಿ. ನಾನು ಹೇಳತಕ್ಕಂಥ ವಿಷಯ ಇಷ್ಟೇ. ಅನೇಕ ಸಂದರ್ಭಗಳಲ್ಲಿ ಸಾಮೂಹಿಕ ಶೌಚಾಲಯಗಳನ್ನು ಕಟ್ಟತಕ್ಕಂಥ ಕಾರ್ಯಕ್ರಮ ಇದೆ. ಅದರಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕವಾದಂತಹ ಶೌಚಾಲಯಗಳನ್ನು ಕಟ್ಟಿರತಕ್ಕಂಥದ್ದೂ ಸಹಾ ಇದೆ. ಆದರೆ ಅಲ್ಲಿ ಕುಡಿಯುವ ನೀರಿನ ಅಭಾವವಿರತಕ್ಕ ಅನೇಕ ಪ್ರದೇಶಗಳಲ್ಲಿ ಸಾಮೂಹಿಕ ಶೌಚಾಲಯಗಳು ದುರ್ನಾತವಾಗಿ ಅವು ಉಪಯೋಗಕ್ಕೆ ಅನರ್ಹವಾಗಿವೆ. ಆ ದೃಷ್ಟಿಯಿಂದ ಕುಟುಂಬ ಶೌಚಾಲಯಗಳನ್ನು ತರಬೇಕೆನ್ನುವಂತಹ ಪರಿಕಲ್ಪನೆಯನ್ನು ತಂದಿದ್ದೇವೆ. ಅದು ಮೊದಲನೆಯ ಹೆಜ್ಜೆ. ಬರೇ ಒಂದು ಶೌಚಾಲಯ ಕಟ್ಟುವುದರಿಂದ ಗ್ರಾಮ ಬಹಳ ಸುಂದರವಾಗಿರುತ್ತದೆ, ಬಹಳ ಶುಚೀಭೂತವಾಗಿರುತ್ತದೆ ಎಂದೇನೂ ಅಲ್ಲ. ನಮ್ಮ ನಡವಳಿಕೆಗಳು, ನಮ್ಮ ಆಚಾರ ವಿಚಾರಗಳು, ನಮ್ಮ ಊಟ ಉಪಚಾರಗಳು, ನಮ್ಮ ಉಡಿಗೆ ತೊಡಿಗೆಗಳು, ಇವೆಲ್ಲವೂ ಕೂಡ ನನ್ನ ಶುಚಿತ್ವಕ್ಕೆ, ಇಡೀ ಸಾಮೂಹಿಕವಾಗಿರತಕ್ಕಂತಹ ಹಳ್ಳಿಯ ಶುಚಿತ್ವಕ್ಕೆ ಅದು ಕಾರಣೀಭೂತವಾಗಿರುತ್ತದೆ. ಶೌಚಾಲಯ ಒಂದು ಪ್ರಥಮ ಹೆಜ್ಜೆ. ಆ ಪ್ರಥಮ ಹೆಜ್ಜೆಯಲ್ಲಿ ನಾವು ಮಾಡಿರತಕ್ಕಂಥದ್ದು ಏನಾಗಿದೆ, ನೀವು ಒಂದು ಕುಟುಂಬ ಶೌಚಾಲಯವನ್ನು ಮಾಡಿಕೊಂಡರೆ, ಆತ ಲಭ್ಯವಾಗಿರುವಂತಹ ನೀರಿನಲ್ಲಿಯೇ ಅದನ್ನು ಉಪಯೋಗಿಸಿಕೊಳ್ಳಬೇಕು. ಗಾಂಧೀಜಿಯವರು ಹೇಳುತ್ತಿದ್ದರು, ಅದನ್ನು ತೆಗೆದುಕೊಂಡು ಹೋಗಿ ಯಾವುದೋ ಒಂದು ಹಗೇವು ಎನ್ನತಕ್ಕಂಥ ಪರಿಕಲ್ಪನೆ ಇರತಕ್ಕಂಥ ಶೌಚಾಲಯಗಳನ್ನು ಕಟ್ಟಿಸಿದ್ದಾರೆ. ಅವರು ಮನುಷ್ಯರ ಅಹಂಕಾರವನ್ನು ಮೊದಲು ತೆಗೆಯಬೇಕು ಎನ್ನುವಂತಹ ಕಾರಣಕ್ಕಾಗಿ ನೀನು ಭಂಗಿಯಾಗಿ ಕೆಲಸ ಮಾಡು ಎಂದು ಹೇಳಿ ಕಾರ್ಯಕರ್ತರಿಗೆ ಆ ಒಂದು ಜವಾಬ್ದಾರಿಯನ್ನು ಕೊಡುತ್ತಿದ್ದರು. ಇವತ್ತು

ನಾವು ಹಳ್ಳಿಗಳಲ್ಲಿ ಇಷ್ಟು ದುರ್ನಾತ ಹೊಡೆಯುತ್ತದೆ ಎಂದು ಹೇಳುತ್ತೇವೆ. ಮತ್ತೆ ಇನ್ನೊಂದು ಕಡೆಗೆ ಹೇಳುತ್ತೇವೆ, ಮಹಿಳೆಯರಿಗೆ ಮಾನವೇ ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ. ಎಂದು ಸೂರ್ಯ ಉದಯಕ್ಕಿಂತ ಮುಂಚಿತವಾಗಿ, ಸೂರ್ಯ ಅಸ್ತಂಗತನಾದ ಮೇಲೆ ಅವರು ಆಗ ಹೋಗಬೇಕಾಗಿರುತ್ತದೆ ಅನ್ನುವಂತಹ ಮಾತನ್ನು ಹೇಳುತ್ತೇವೆ. ಈ ರೀತಿ ಆಗಿರತಕ್ಕಂಥದ್ದರಲ್ಲಿ ಒಂದು ಉದಾಹರಣೆಯನ್ನು ನೀಡಬೇಕಾದರೆ,... ಮಹಿಳೆಯರು ತಮ್ಮ ದೇಹಬಾಧೆಯನ್ನು, ಮಲಬಾಧೆಯನ್ನು ಗರ್ಭ ಎಂದು ಹೇಳಿ ಧರಿಸಿಕೊಳ್ಳಬೇಕಾಗಿರುತ್ತದೆ. ಇಡೀ 10- 12 ತಾಸು ಅವರು ಹಾಗೆಯೇ ಇಟ್ಟುಕೊಳ್ಳಬೇಕಾಗಿರುತ್ತದೆ. ಇದು ಎಷ್ಟರಮಟ್ಟಿಗೆ ನಮ್ಮಲ್ಲಿ ಅರ್ಬನ್ ಬಯಾಸ್ಡ್ ಆಗಿದ್ದೇವೆ ಎನ್ನುವುದನ್ನು ಸೂಚಿಸುತ್ತದೆ. ಈ ನಿರ್ಮಲ ಕರ್ನಾಟಕದ ವಿಷಯದಲ್ಲಿ ಒಂದು ಧ್ವನಿ ಸುರುಳಿಯನ್ನು ಮಾಡಿ ಇದಕ್ಕೆ ಸಂಬಂಧಿಸಿರತಕ್ಕದ್ದರ ಬಗ್ಗೆ ಪದ್ಯಗಳನ್ನು, ಕವಿತೆಗಳನ್ನು ಬರೆದು ಕೊಡಿ, ಪ್ರಚಾರಕ್ಕಾಗಿ ಉಪಯೋಗಿಸುತ್ತೇವೆ ಎಂದು ಹೇಳಿ ಇಲ್ಲಿ ಕೆಲವು ಉದ್ಧಾಮರಾದಂತಹ ಕೆಲವು ಸಾಹಿತಿಗಳನ್ನು ನಾವು ಬಿನ್ನವಿಸಿಕೊಂಡೆವು; ಸಂಗೀತ ನಿರ್ದೇಶಕರನ್ನು ನಾವು ಬಿನ್ನವಿಸಿಕೊಂಡೆವು. ನಾವು ಒಬ್ಬ ಒಳ್ಳೆಯ ನಿರ್ದೇಶಕರು ಮತ್ತು ಕವಿಗೆ ಈ ಸಂಗೀತವನ್ನು ಬರೆದು ಕೊಡಿ ಎಂದು ಕಳುಹಿಸಿದರೆ, 2- 3 ದಿವಸ ಅವರು ತಿಣುಕಿ, ಇದೇನ್ರಿ ನಮ್ಮ ಅನುಭವಕ್ಕೆ ಬಾರದಂತಹ ವಿಷಯ, ಇದರಲ್ಲಿ ನಾವು ಏನು ಕವಿತೆಯನ್ನು ಬರೆದುಕೊಡಬೇಕು ಎಂದು ಕೇಳಿದರು. ಮೈಸೂರಿನಲ್ಲಿ ದಲಿತ ವರ್ಗಕ್ಕೆ ಸೇರಿದ ಜನಾರ್ಧನ ಎಂಬ ಹುಡುಗನೊಬ್ಬ ಇದ್ದಾನೆ. ಅವನನ್ನು ಜೆನ್ನಿ, ಜೆನ್ನಿ ಎಂದು ಕರೆಯುತ್ತಾರೆ. ಆತ ಒಬ್ಬ ಅದ್ಭುತವಾದ ಹಾಡುಗಾರ. ಹಾಗೆಯೇ ಪಿಚ್ಚಳ್ಳಿ ನಾಗರಾಜ್ ಎಂದು ಇದ್ದಾರೆ. ಅವರು ಗದ್ದಾರ್ ಗುಂಪಿನಲ್ಲಿದ್ದರು. ಅವರನ್ನು ಕರೆದು ಇದಕ್ಕೊಂದು ಸಂಗೀತ ಮತ್ತು ಸಾಹಿತ್ಯವನ್ನು ಸೃಷ್ಟಿ ಮಾಡಿಕೊಡಿ ಎಂದರೆ ಒಂದೇ ದಿವಸದಲ್ಲಿ ಅದ್ಭುತವಾದ ರೀತಿಯಲ್ಲಿ ಮಾಡಿಕೊಟ್ಟರು. ಇದನ್ನು ಅನುಭವಿಸದೇ ಇರತಕ್ಕಂತಹ ನಾವು ಇವೆಲ್ಲಾ ತಾಂತ್ರಿಕವಾದಂತಹ ಕಾರಣಗಳನ್ನು ಇಡುತ್ತೇವೆ. ಆದರೆ ಇಲ್ಲಿ ಅದರ ಅನುಭವವಾಗಿರತಕ್ಕಂತಹ ವ್ಯಕ್ತಿ ಏನಿದ್ದಾರೆ, ಅವನು ನಿಜವಾಗಿಯೂ ಕೂಡ ಅರಿವನ್ನು ಪಡೆದಿರುವುದಿಲ್ಲ, ರಸ್ತೆಬದಿಯಲ್ಲಿ ನಾನು ಕೂರತಕ್ಕದ್ದು, ಅಶುಚಿತ್ವ ಎಂಬುದು ಅವನಿಗೆ ತಿಳಿದಿಲ್ಲ. ಅವನಿಗೆ ತಿಳುವಳಿಕೆಯನ್ನು ಕೊಡಬೇಕಾಗಿರತಕ್ಕವರು ನಾವು. ಆದರೆ ನಾವು ತಿಳುವಳಿಕೆ ಹೇಳಿಕೊಟ್ಟಿರುವುದು ಹೇಗೆ? ಆ ವಿಚಾರಗಳಿಂದ ಅವರನ್ನು ನಾವು ಅಲ್ಲಿಯೇ ಇಟ್ಟಿದ್ದೇವೆ. ಮೂಗು ಮುಚ್ಚಿಕೊಂಡು ಹೋಗತಕ್ಕದ್ದೇ ನಮ್ಮ ಕರ್ತವ್ಯವೆಂದು ಭಾವಿಸಿಕೊಂಡಿದ್ದೇವೆ. ಆದ್ದರಿಂದ ಅರಿವನ್ನು ಮೂಡಿಸುವಂತಹ ಪ್ರಯತ್ನದಲ್ಲಿ ನಾವು ಒಂದು ಶೌಚಾಲಯವನ್ನು ಕಟ್ಟಿದರೆ, 25 ರೂ.ಗಳನ್ನು ಅರಿವು ಮಾಡಿಸಿದಂತಹ ಒಬ್ಬ ಸ್ವಯಂಸೇವಕನಿಗೆ, ಪ್ರೇರಕನಿಗೆ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೇವೆ. ಅದೇ ರೀತಿಯಾಗಿ ತಾವು ಹೇಳಿದಂತೆ, ಹೆಣ್ಣುಮಕ್ಕಳಿಗಾಗಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಇಡೀ ಸಾಮೂಹಿಕ ಶೌಚಾಲಯಗಳನ್ನು ಕಟ್ಟುವಂತಹ ಕಾರ್ಯಕ್ರಮ ಈಗಲೂ ಕೂಡ ಇದೆ. ತಾವು ಸಾಮೂಹಿಕ ಶೌಚಾಲಯಗಳನ್ನು ಕಟ್ಟಿಕೊಳ್ಳಬೇಕು. ಆದರೆ ಸಾಮೂಹಿಕ

ಶೌಚಾಲಯಗಳನ್ನು ಕಟ್ಟಿದಾಗ ಅದರ ನಿರ್ವಹಣೆಯ ಜವಾಬ್ದಾರಿಯನ್ನು ಗ್ರಾಮ ಪಂಚಾಯತಿಯವರು ಚೆನ್ನಾಗಿ ಮಾಡಬೇಕು. ಆದರೆ ಈ ಕಾನೂನಿನಲ್ಲಿ ಅದು ಇದ್ದದ್ದರಿಂದ ಈಗ ತಿದ್ದುಪಡಿ ತಂದಿದ್ದೇವೆ, ಯಾವ ಗ್ರಾಮ ಪಂಚಾಯಿತಿಗಳು ಸಾಮೂಹಿಕ ಶೌಚಾಲಯಗಳನ್ನು ಚೆನ್ನಾಗಿ ಇಟ್ಟುಕೊಂಡಿಲ್ಲ, ಅವನ್ನೂ ಕೂಡ ಅನರ್ಹಗೊಳಿಸುತ್ತೇವೆ ಅನ್ನತಕ್ಕಂಥ ಮಾತನ್ನು ಹೇಳಿದ್ದೇವೆ. ಒಂದು ಹೊಸ ವಿಚಾರಗಳು ಬಂದಾಗ ನಾವು ಮತ್ತೆ ಮಡಿವಂತಿಕೆಗೆ ಮಣಿ ಹಾಕತಕ್ಕಂತಹ ಪ್ರಯತ್ನವನ್ನು ಮಾಡಬಾರದು. ಆದರೆ ನೀವು ಹೇಳಿದಂತೆ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಿಮ್ಮ ವಿಚಾರಕ್ಕೆ ನಾವು ಅಪೋಸ್ ಮಾಡುತ್ತಿಲ್ಲ. ಈ ಕಾರಣದಿಂದಲೇ ಡಿಸ್-ಕ್ವಾಲಿಫಿಕೇಷನ್ ಆಗಬಾರದು ಎಂದು ಹೇಳುತ್ತಿದ್ದೇನೆ. ಏಕೆಂದರೆ ತಮಗೆಲ್ಲಾ ಗೊತ್ತಿದೆ, ಶೇಕಡ 80ರಷ್ಟು ಮೆಂಬರ್....

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಈ ಕಾನೂನನ್ನು ಜಾರಿಗೆ ತಂದರೆ ನಗೆಪಾಟಲಿಗೆ ಈಡಾಗಬೇಕಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ಅದೇನಾಗುತ್ತದೋ ನೋಡೋಣ. ಹಾಗಾದರೆ ಆಂಧ್ರಪ್ರದೇಶದಲ್ಲಿ ಎರಡು ಮಕ್ಕಳಿಗಿಂತ ಹೆಚ್ಚು ಇರಬಾರದು ಎಂಬ ಕಾನೂನನ್ನು ತಂದಿದ್ದಾರೆ. ಈಗೇನು ಅವರು ನಗೆಪಾಟಲಿಗೆ ಈಡಾಗಿದ್ದಾರೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದು ಬೇರೆಯೇ ಆಯಿತು.

ಶ್ರೀ ಎಂ.ಪಿ.ಪ್ರಕಾಶ್: ಏತಕ್ಕೆ ಸಂಬಂಧ ಇಲ್ಲ? ಸಂವಿಧಾನದಲ್ಲೇನು ಆ ತರಹದ ಎದೆಗಾರಿಕೆಯನ್ನು ತೋರಿಸಿಲ್ಲವಲ್ಲಾ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಪ್ರಕಾಶ್‌ರವರೇ, ಒಂದು ನಿಮಿಷ ಯೀಲ್ಡ್ ಆಗಿ. ತಮ್ಮ ಸಲಹೆ ತುಂಬಾ ಒಳ್ಳೆಯದಿದೆ, ತಮ್ಮ ಕಲ್ಪನೆ ಸರಿಯಿದೆ, ತಾವು ಹೇಳಿದಂತಹ ವಿಚಾರಗಳು ಸರಿ ಇದೆ. ಇಷ್ಟು ವರ್ಷವಾದರೂ ಈ ಸ್ಥಿತಿಯಲ್ಲಿ ಇಟ್ಟಿದ್ದೇವಲ್ಲಾ ಎಂಬ ನೋವನ್ನು ತಾವು ಹೇಳಿದ್ದೀರಿ. ಗಾಂಧೀಯವರ ವಿಚಾರ ಹೇಳಿದ್ದೀರಿ, ನಾನೇನು ಹೇಳಲಿಕ್ಕೆ ಹೊರಟಿದ್ದೆ ಎಂದರೆ, ನಮ್ಮ ಪಂಚಾಯಿತಿ ಸದಸ್ಯರು ಆಯ್ಕೆಯಾಗಿರುವಂತಹ ಬಹುತೇಕ ಹಳ್ಳಿಗಳಲ್ಲಿ 15 ಅಡಿ ಅಗಲ ಉದ್ದದಲ್ಲಿ ಮನೆ ಏನಿದೆ, ಅದರ ಹಿಂದುಗಡೆ; ಮಾನ್ಯ ಪ್ರಕಾಶ್‌ರವರೇ ನಾನು ನಿಮಗೆ ವಿನಂತಿ, ಮಾಡಿಕೊಳ್ಳುತ್ತೇನೆ, ಅಲ್ಲಿ ಮೂರಡಿ ಜಾಗ ಕೂಡ ಇಲ್ಲ. ಅಲ್ಲಿ ಲ್ಯಾವೆಟರಿ ಕಟ್ಟಿದರೆ ಅಕ್ಕಪಕ್ಕದಲ್ಲಿರುವವರು ವಾಸ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಗುಂಡಿ ಎಲ್ಲಿ ತೆಗೆಯುವುದು? ವಾಸ್ತವಿಕ ಸ್ಥಿತಿಯನ್ನು ತಮಗೆ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರಕಾಶ್‌ರವರು ಧ್ವನಿಸುರುಳಿ

ಬಗ್ಗೆ ಮಾತನಾಡಿದರು, ಸಾಹಿತ್ಯದ ಬಗ್ಗೆ ಮಾತನಾಡಿದರು, ಸಂತೋಷ. ಅವೆಲ್ಲಾ ಕೇಳುವುದಕ್ಕೆ ಸಂತೋಷ ಆಗುತ್ತದೆ. ನೀವು ಈಗ ಹೇಳುತ್ತಿರುವ ವ್ಯವಸ್ಥೆ, ಈ ಕ್ರಿಯೆ ಇದೆಯಲ್ಲಾ ಇದನ್ನು ಮಾಡುವುದು ಬಹಳ ಕಷ್ಟ. ಇದನ್ನು ನೀವು ಹೇಳುವಾಗಲೇ ಒಂದು ರೀತಿಯ ವಾಸನೆ ಬರುತ್ತದೆ. ಇನ್ನು ಅದನ್ನು ತೊಳೆಯುವುದು ಯಾವಾಗ? ನೀವು ಹೇಳುತ್ತಿರುವ ಪದಗಳು, ಆ ವ್ಯವಸ್ಥೆ ಬಗ್ಗೆ ಏನು ಹೇಳುತ್ತಿದ್ದೀರಿ, ಅದರ ಬಗ್ಗೆ ಈಗಲೇ ನಮಗೆ ವಾಸನೆ ಬರುತ್ತಿದೆ. ಈ ಸಂದರ್ಭದಲ್ಲಿ ಧೀಮಂತ ನಾಯಕರಾದ ಶ್ರೀಮಾನ್ ಬಸವಲಿಂಗಪ್ಪನವರನ್ನು ಇವತ್ತಿನ ದಿವಸ ನಾವು ನೆನೆದುಕೊಳ್ಳಬೇಕಾಗುತ್ತದೆ. ಅವರು ಮಲ ಹೊರುವಂಥ ಒಂದು ಪದ್ಧತಿಯನ್ನು ನಿಲ್ಲಿಸಿದಂಥ ಮಹಾನ್ ವ್ಯಕ್ತಿಯಾಗಿದ್ದಾರೆ. ಇದು ಒಂದು ಹಂತ. ಆದರೆ ತಾವು ಇವತ್ತು ಏನು ಹೇಳುತ್ತಿದ್ದೀರಿ ಅದರ ಉದ್ದೇಶ ಬಹಳ ಚೆನ್ನಾಗಿ ಇದೆ. ಅದನ್ನು ನಾನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇದನ್ನು ಕಾರ್ಯಗತ ಮಾಡಬೇಕಾದರೆ ತಾವು ಸ್ವಲ್ಪ ಸರ್ಕಾರದ ಕಡೆಯಿಂದ ಚಿಂತನೆ ಮಾಡಬೇಕಾಗುತ್ತದೆ. ಧ್ವನಿಸುರುಳಿಯಿಂದ, ಸಾಹಿತ್ಯದಿಂದ ಸಂಗೀತ ಹಾಡುವುದರಿಂದ ಇದು ಆಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದು ಏನೆಂದರೆ, ಧ್ವನಿಸುರುಳಿಯನ್ನು ಮಾಡಲಿಕ್ಕೆ ನಮ್ಮಲ್ಲಿ ಒಬ್ಬರಿಗೆ ಕೊಟ್ಟಾಗ ಅದನ್ನು ಅವರಿಂದ ಮಾಡಲಿಕ್ಕೆ ಆಗಲಿಲ್ಲ. ಆದರೆ ನೋವನ್ನು ಅನುಭವಿಸಿದಂಥ ಜನಾಂಗದವರ ಪೈಕಿ ಒಬ್ಬನ ಕೈಗೆ ಕೊಟ್ಟಾಗ ಅವರು ಕೂಡಲೇ ಧ್ವನಿಸುರುಳಿಯನ್ನು ಮಾಡಿಕೊಟ್ಟರು, ಎಂದು ನನ್ನ ವಾದ. ಸಂಗೀತ ಕೇಳುವುದಕ್ಕೆ ಸುಂದರ ಎನ್ನುವ ಪ್ರಶ್ನೆಗಿಂತ ಹೆಚ್ಚಾಗಿ ಆ ನೋವನ್ನು ಅನುಭವಿಸಿದವರಿಗೆ ಬೇಗ ಅರ್ಥವಾಗುತ್ತದೆ ಎಂಬುದಾಗಿ ಹೇಳಿದೆ. ಇನ್ನು ಮಾನ್ಯ ವಾಟಾಳ್ ನಾಗರಾಜ್ ರವರು ಒಂದು ವಿಷಯವನ್ನು ಇಲ್ಲಿ ಜ್ಞಾಪಕ ಮಾಡಿದ್ದು ಒಳ್ಳೆಯದಾಯಿತು. ಮಾನ್ಯ ಬಸವಲಿಂಗಪ್ಪನವರು ಇಂಥ ಒಂದು ಕ್ರಾಂತಿಕಾರಕ ಬದಲಾವಣೆಯನ್ನು ತಂದಾಗ ಎಷ್ಟು ವಿವಾದಗಳು ನಡೆದವು? ಜಾಡಮಾಲಿಗಳನ್ನು ತೆಗೆಯದೇ ಹೋಗಿದ್ದರೆ ಏನು ಕಷ್ಟ ಎಂದು ಹೇಳಿ ಎಷ್ಟು ಪತ್ರಿಕೆಗಳಲ್ಲಿ ಟೀಕೆಟಿಪ್ಪಣಿಗಳು ಬಂದವು, ಎಂಬುದನ್ನು ಎಲ್ಲರೂ ಗಮನಿಸಿರಬಹುದು. ಕುವೆಂಪುರವರು 'ಜಗದ ಜಲಗಾರ ನಾನು' ಎಂಬ ಶಿವನ ಮೂಲಕ ಹೇಳಿಸಿದರು. ಆತನನ್ನು ಜಲಗಾರನನ್ನಾಗಿ ಮಾಡಿದರು. ಅವನನ್ನು ಜಲಗಾರನನ್ನಾಗಿ ಮಾಡತಕ್ಕಂಥದ್ದು ಎಂದರೆ ನೀವೆಲ್ಲಾ ಜಲಗಾರರಾಗಿ, ನಮ್ಮ ಸಮಾಜದಲ್ಲಿ ಇರತಕ್ಕಂಥವರಿಗೇ ಇದು ಮೀಸಲಾತಿ ಅಲ್ಲ ಎನ್ನತಕ್ಕಂಥ ಮಾತನ್ನು ಮಾನ್ಯ ಬಸವಲಿಂಗಪ್ಪನವರು ಹೇಳಿದರು. ಅವರು ಬರೀ ಅಷ್ಟೇ ಹೇಳಿ ಅಲ್ಲಿಗೆ ನಿಲ್ಲಿಸಲಿಲ್ಲ. ನಾವು ಇಲ್ಲಿ ಸಂಸ್ಕೃತಭೂಯಿಷ್ಠವಾಗಿ ಮಲ, ಅಮೇಧ್ಯ ಎನ್ನತಕ್ಕಂಥದ್ದನ್ನು ಬಳಸುತ್ತೇವೆ. ಹೇಲು, ಉಚ್ಚೆ ಎಂದು ಹೇಳಿದರೆ ನಿಮಗೆ ನಿಜವಾಗಿ ವಾಸನೆ ಹೊಡೆಯುತ್ತದೆಯಾ ಎಂದು ಹೇಳಿದರು. ಆ ರೀತಿ ಈ ಸಾಮಾಜಿಕ ವ್ಯವಸ್ಥೆಯಲ್ಲಿ ವಾಕ್ಯ ಪದಪ್ರಯೋಗಗಳಲ್ಲಿಯೂ ಕೂಡ ನಾವು ಇಂತಹ

ಮಡಿವಂತಿಕೆಯಿಂದ ಮಾತನಾಡುತ್ತೇವೆ. ಯಾವುದು ಅಸಹ್ಯ ಎಂದು ಹೇಳಿ ನಮ್ಮ ಭಾಷೆಯಲ್ಲಿ ನಾವು ಭಾವಿಸಿಕೊಂಡಿರುತ್ತೇವೆ ಅದನ್ನು ಇಂಗ್ಲೀಷ್‌ನಲ್ಲಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಥವಾ ಸಂಸ್ಕೃತದಲ್ಲಿ ಹೇಳುವ ಪ್ರಯತ್ನವನ್ನು ಮಾಡುತ್ತೇವೆ. ಆದ್ದರಿಂದ ಇಂತಹ ವಿಚಾರಗಳ ಬಗ್ಗೆ ಒಂದು ಕ್ರಾಂತಿಕಾರಕವಾದಂಥ ನಿಲುವನ್ನು ತೆಗದುಕೊಳ್ಳಬೇಕಾಗುತ್ತದೆ...

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಅಧ್ಯಕ್ಷರೆ, ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಬಿಲ್‌ಗೆ ಸಂಬಂಧಪಟ್ಟ ಹಾಗೆ ಸರ್ಕಾರದ ಉದ್ದೇಶ ನಮಗೂ ಕೂಡ ಅರ್ಥ ಆಗಿದೆ. ಅರ್ಥ ಆಗಿಲ್ಲವೆಂದು ಹೇಳುವುದಿಲ್ಲ. ಈ ವ್ಯವಸ್ಥೆ ಜಾರಿಗೆ ಬರಬೇಕು ಮತ್ತು ಪ್ರತಿಯೊಬ್ಬರೂ ಕೂಡ ಇಂಥ ಒಂದು ವ್ಯವಸ್ಥೆಯಲ್ಲಿ ಭಾಗವಹಿಸಬೇಕು ಎಂತಲೂ ಉದ್ದೇಶ ಇದೆ. ಈಗ ಒಬ್ಬ ಸದಸ್ಯನಾಗಬೇಕಾದರೆ ಅಥವಾ ಈಗ ಆಗಿದ್ದರೆ ಅವನು ಒಂದು ಶೌಚಾಲಯವನ್ನು ಹೊಂದಿರಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡುತ್ತಿದ್ದೀರಿ. ಆತನಿಗೆ ಶೌಚಾಲಯ ಇಲ್ಲದಿದ್ದರೆ ಅವನು ಸದಸ್ಯತ್ವದಿಂದ ಅನರ್ಹನಾಗುತ್ತಾನೆ ಅದಕ್ಕಿಂತ ಪ್ರಬಲವಾಗಿ, ಈಗ ನಾವು ಸರ್ಕಾರದ ಮುಖಾಂತರ ಅನೇಕ ಸೌಲಭ್ಯಗಳನ್ನು ಕೊಡುತ್ತೇವೆ. ಅದು ಐ.ಆರ್.ಡಿ.ಪಿ.ಲೋನ್ ಆಗಿರಬಹುದು, ಸೈಟ್, ಮನೆ ಅಥವಾ ಇನ್ನಿತರ ಯಾವುದೇ ಆಗಿರಬಹುದು. ಇಂಥ ಶೌಚಾಲಯವನ್ನು ನೀನು ಪಡೆದರೆ ಸಾಲ ಸೌಲಭ್ಯ ಕೊಡುತ್ತೇವೆಂದು ಅಂಥದ್ದನ್ನು ಮಾಡಿ. ಆಗ ಇಡೀ ಕುಟುಂಬವೇ ಆ ಕಡೆಗೆ ಒಲಿಯುತ್ತದೆ. ಈಗ ಈ ವಿಧೇಯಕವನ್ನು ತರುತ್ತಿರುವುದರಿಂದ ಒಬ್ಬನನ್ನು ನೀವು ಡಿಸ್‌ಕ್ವಾಲಿಫೈ ಮಾಡುತ್ತೀರಿ, ಒಬ್ಬನನ್ನು ಅನೂರ್ಜಿತಗೊಳಿಸುತ್ತೀರಿ. ಅವನ ಮೇಲೆ ಒಂದು ಪರಿಣಾಮವಾಗುತ್ತದೆ. ಈಗ ಬಕರ್‌ಹುಕುಂ ಸಾಗುವಳಿ ಜಮೀನು ಕೊಡುವಾಗ, ಅವನಿಗೆ ಸಾಗುವಳಿ ಚೀಟಿ ಕೊಡಬೇಕಾದರೆ-'ನೀನು ಕಡ್ಡಾಯವಾಗಿ ಶೌಚಾಲಯವನ್ನು ಕಟ್ಟಿಕೊಳ್ಳಬೇಕೆಂದು' ಹೇಳಿ. ಆವಾಗ ಇಡೀ ಕುಟುಂಬದ ಮೇಲೆ ಪರಿಣಾಮವಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ ಅದು ಸ್ವಾಗತಾರ್ಹವಾದುದಾಗಿದೆ. ಅದನ್ನೂ ಕೂಡ ಹಂತಹಂತವಾಗಿ ಮಾಡತಕ್ಕಂಥದ್ದೇ ಆಗಿದೆ. ಐ.ಆರ್.ಡಿ.ಪಿ. ಸಾಲವನ್ನು ಎಲ್ಲರಿಗೂ ಕೊಡುತ್ತೇವೆಂದರೆ ಅಲ್ಲೂ ಕೂಡ ಸಂಪನ್ಮೂಲದ ಕೊರತೆ ಇರುತ್ತದೆ. ತಾವು ಏನು ಒಂದು ಆತಂಕವನ್ನು ವ್ಯಕ್ತಮಾಡಿದ್ದೀರಿ, ಅನೇಕ ಜನಗಳಿಗೆ ಗುಡಿಸಲೇ ಇರುತ್ತದೆ. ಯಾರದ್ದೋ ಗೌಡರ ಮನೆಯ ಜಾಗಕ್ಕೆ ಅವರು ಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೆ. ಇಂಥವರಿಗಾಗಿ ಮಾಡುವುದಾದರೆ ನಾನು ಇನ್ನೂ ಮುಂದಕ್ಕೆ ಹೋಗಿ ನಾನು ಈ ಸದನದಲ್ಲಿ ಭರವಸೆ ಕೊಡುತ್ತೇನೆ. ಮತ್ತು ಇದನ್ನು ರೆಡಿ ಮಾಡುತ್ತೇನೆ. ಆದ್ದರಿಂದ ದಯವಿಟ್ಟು ಇದಕ್ಕೆ ತಾವು ಒಪ್ಪಿಗೆ ಕೊಡಿ. ಯಾರು ಈ ರೀತಿಯಾಗಿ ಆರ್ಥಿಕ ಅಸಮಾನತೆ ಇರತಕ್ಕಂಥ ಸದಸ್ಯರು ಯಾರು ಇರುತ್ತಾರೆ ಅವರಿಗೆ ಶೌಚಾಲಯ ಕಟ್ಟಲಿಕ್ಕೆ ನಾವು ಹಳ್ಳಿಗಳಲ್ಲಿ ಜಾಗ

ಮತ್ತು ಆ ಶೌಚಾಲಯವನ್ನು ಕಟ್ಟಿಕೊಳ್ಳಲಿಕ್ಕೆ 1650 ರೂಪಾಯಿಗಳನ್ನು ಸರ್ಕಾರದಿಂದ ಕೊಡುತ್ತೇವೆ ಬೇರೆಯವರಿಗೆ ಶೌಚಾಲಯ ಕಟ್ಟಿಕೊಳ್ಳುವುದಕ್ಕೆ 1200 ರೂಪಾಯಿ ಕೊಡುತ್ತಿದ್ದೇವೆ. ಜಾಗವಿಲ್ಲದಿದ್ದರೆ ಬೇರೆ ಜಾಗದಲ್ಲಿ ನಾವು ಕಟ್ಟಿಕೊಡುತ್ತೇವೆ. ಆತನಿಗೆ ಶೌಚಾಲಯ ಕಟ್ಟುವುದಕ್ಕಾಗಿಯೇ ನಾವು ಜಾಗವನ್ನು ಕೊಡುತ್ತೇವೆ. ಆತನಿಗೆ ರಸ್ತೆ ಬದಿಯಲ್ಲಿ ಸರ್ಕಾರಿ ಜಾಗವನ್ನು ಅಕ್ವೈಯರ್ ಮಾಡಿ ಆತನಿಗೆ 5:8 ಅಡಿ ಜಾಗವನ್ನು ಶೌಚಾಲಯ ಕಟ್ಟಿಕೊಳ್ಳುವುದಕ್ಕೆ ಕೊಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್‌ನಾಜರಾಜ್: ಈಗ ಶೌಚಾಲಯಕ್ಕೆ ರಸ್ತೆ ಬದಿಯಲ್ಲಿ ಹೋಗುವುದೇ ಸೌಖ್ಯ. ಸರ್ಕಾರ ಮನೆಯ ಹತ್ತಿರ ಒಂದು ಶೌಚಾಲಯವನ್ನು ಕಟ್ಟಿಕೊಟ್ಟು ಅದಕ್ಕೆ ನೀರು ಇಲ್ಲದೆ ಕುಲಗೆಟ್ಟು ಹೋಗಿ ವಾಸನೆ ತಡೆಯಲಾರದೆ ಅಕ್ಕಪಕ್ಕದವರು ಏನು ಆಗಬೇಕೆಂದು ತಾವು ಮಾಡಿದ್ದೀರಿ? ಇದು ಒಳ್ಳೆಯದಲ್ಲ. ಖಂಡಿತಾ ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನಾವು ಇಲ್ಲಿ ಮಾತನಾಡುತ್ತಿರುವಂಥದ್ದು ಒಂದು ಕಾನೂನಿನ ಬಗ್ಗೆ. ಈ ಕಾನೂನಿನಿಂದ ನಾಳೆ ಏನಾದರೂ ಸಮಸ್ಯೆಗಳು ಉದ್ಭವಿಸಿದರೆ....

ಅಧ್ಯಕ್ಷರು: ಒಂದ್ನಿಮಿಷ, ಅರಗ ಜ್ಞಾನೇಂದ್ರರವರೇ, ದಯಮಾಡಿ ಈಗ ಇದರ ಬಗ್ಗೆ ಹೇಳಿದ್ದು ಸಾಕು. ಎಲ್ಲರೂ ಇದರ ಬಗ್ಗೆ ಬಹಳ ಚರ್ಚೆ ಮಾಡಿದಿರಿ. 7 ಗಂಟೆಗೆ ಹೋಗಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ನಮ್ಮ ರೈತ ಶಾಸಕರು ಯಾರು ಇದ್ದಾರೆ ಅವರದೊಂದು ಸಭೆಯನ್ನು 3ನೇ ಮಹಡಿಯಲ್ಲಿ ನಾವು ಕರೆದಿದ್ದೆವು. ಇದನ್ನು ಎಷ್ಟು ಬೇಗ ಮುಗಿಸುತ್ತೇವೆಯೋ ಅಷ್ಟು ಒಳ್ಳೆಯದು.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸದಸ್ಯರುಗಳ ಸಲಹೆಯನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ದಯಮಾಡಿ ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ವಿಧೇಯಕದಲ್ಲಿ ಗ್ರಾಮ ಪಂಚಾಯತಿಯ ನೌಕರರ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ವಿಧೇಯಕದಲ್ಲಿರುವ ಎರಡು

ವಿಚಾರಗಳನ್ನು ಸರ್ಕಾರ ಹಿಂತೆಗೆದುಕೊಳ್ಳಲಿಲ್ಲ. ಒಬ್ಬ ಸದಸ್ಯನಾಗಬೇಕಾದರೆ ಅವನಿಗೆ ಒಂದು ಶೌಚಾಲಯ ಇರಬೇಕೆಂದು ಸರ್ಕಾರ ಏನು ಹೇಳಿದೆ ಅದನ್ನು ಹಿಂತೆಗೆದುಕೊಂಡಿಲ್ಲ. ಮತ್ತು 'ದುರ್ನಡೆಗಾಗಿ ಸದಸ್ಯರುಗಳನ್ನು ತೆಗೆದುಹಾಕುವುದು' ಎನ್ನುವುದರ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಹೇಳಲಿಲ್ಲ. ಆದ್ದರಿಂದ ಅದನ್ನು ನಾನು ವಿರೋಧ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ವಾಟಾಳ್‌ಪಕ್ಷದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಮತ್ತು

(ಶ್ರೀ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದಲ್ಲಿ ಬಿ.ಜೆ.ಪಿ.ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಗ್ರಾಮಪಂಚಾಯತಿಯ ನೌಕರರ ಬಗ್ಗೆ ನಾವು ಪ್ರಾಸ್ತಪ ಮಾಡಿದೆವು, ಆದರೆ ಅದರ ಬಗ್ಗೆ ಸರ್ಕಾರ ಏನೂ ಹೇಳಲಿಲ್ಲ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಚಾರ ಹೇಳುತ್ತೇನೆ. ನಮ್ಮಲ್ಲಿ ಹಟ್ಟಿಕುಣಿ ಎನ್ನುವ ಗ್ರಾಮ ಇದೆ. ಅಲ್ಲಿ ಒಂದು ಎಕರೆ ಭೂಮಿಗೆ 2 ಲಕ್ಷ ರೂಪಾಯಿ ಅಲ್ಲಿ ಇದೆ. ಕೊನೆಗೆ ಸರ್ಕಾರ ಮಾಕ್ಸಿಮಮ್ ಹಣ ಕೊಡತಕ್ಕಂಥದ್ದು ಎಷ್ಟು ಎಂದರೆ 40 ಸಾವಿರ ರೂ. ಒಂದು ಎಕರೆಗೆ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ತಾವು ಬೇಕಾದರೆ ಇದರ ಡೀಟೈಲ್ಸ್‌ನ್ನು ತರಿಸಿಕೊಂಡು ನೋಡಿ. ಬಹುಶಃ ವಸತಿ ಸಚಿವರಾದ ಮಾನ್ಯ ರೇವಣ್ಣನವರು ಇಲ್ಲಿಯೇ ಸದನದಲ್ಲಿ ಇರಬಹುದು. ಕೊನೆಗೆ ನಾನು ಕಾಂಟ್ರಿಬ್ಯೂಷನ್ಸ್ ಮಾಡಿಸಿ ಎರಡು ಎಕರೆ ಜಾಗ ತೆಗೆದುಕೊಳ್ಳಬೇಕಾದರೆ 40 ಸಾವಿರ ಅವರ ಕೈಲಿ ಕೊಡಿಸಿ 20'X30' ಸೈಟ್ಸ್ ಕೊಡಿಸಿದೆವು. ಅಂಥ ಕಡೆ ಅದರೊಳಗೆ 7 ಜನ ಮೆಂಬರ್ಸ್ ಇರುತ್ತಾರೆ.... ಮಾನ್ಯ ಪ್ರಕಾಶ್‌ರವರೇ, ತಾವು ಯೋಚನೆ ಮಾಡಿ, ನಾನು ಅದು ಬೇಡ ಎಂದು ಹೇಳುವುದಿಲ್ಲ. ನೀವು ಸುಮ್ಮಸುಮ್ಮನೆ ಏನೂ ಇಲ್ಲದೆ... ಸ್ಯಾನಿಟರಿ ಮಾಡಿಸುವುದಕ್ಕೆ ನಾವು ವಿರೋಧ ಇದ್ದೇವೆಯೇ?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ಕಾನೂನನ್ನು ತಂದರೂ ಸಹ ಸ್ವಲ್ಪ ಭಾಗದ ಜನರಿಗೆ ಅನಾನುಕೂಲ ಆಗಿಯೇ ಆಗುತ್ತದೆ. ಎಲ್ಲರಿಗೂ ಕೂಡ ಅನುಕೂಲವಾಗುವಂಥ ಕಾನೂನನ್ನು ತರುವುದಕ್ಕೆ ಯಾರಿಂದಲೂ ಸಹ ಸಾಧ್ಯವಾಗುವುಲ್ಲ. ಅಂಥ ಕಾನೂನನ್ನು ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದನ್ನು ಹೊರಗಿನಿಂದ ಯಾರೋ ಬಂದು ಮಾಡುವುದಿಲ್ಲ. ಇದನ್ನು ನಾವಾಗಿ ಮಾಡುವುದು...

ಶ್ರೀ ಸಿ.ಬೈರೇಗೌಡ: ಎಲ್ಲರಿಗೂ ಅನುಕೂಲವಾಗುವಂಥ ಕಾನೂನನ್ನು ಮಾಡುವುದಕ್ಕೆ ಯಾರಿಂದಲೂ ಸಹ ಸಾಧ್ಯವಿಲ್ಲ. ಸ್ವಲ್ಪಮಟ್ಟಿಗೆ ಕೆಲವು ಜನರಿಗೆ ಅನಾನುಕೂಲವಾಗುತ್ತದೆ. ಆದರೆ ಒಟ್ಟಾರೆ ಇದು ಏನು ಬದಲಾವಣೆ ಮಾಡುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು.

(ಗೊಂದಲ)

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಒಂದು ಮಾತನ್ನು ನಾನು ಹೇಳಿಬಿಡುತ್ತೇನೆ. ನಮ್ಮ ಪಾರ್ಟಿಯವರು ವಾಕ್‌ಔಟ್ ಮಾಡಿದ್ದಾರೆ ನಾನೂ ಕೂಡ ಈಗ ಹೋಗಬೇಕು. ನಾನು 1967ನೇ ಇಸವಿಯಲ್ಲಿ ಈ ಸಭೆಗೆ ಶಾಸಕನಾಗಿ ಬಂದೆ. 1972ರಲ್ಲಿ ನಾನು ಮಂತ್ರಿಯಾದೆ. ಹಳ್ಳಿಯಲ್ಲಿ ನನ್ನ ಮನೆಯಲ್ಲಿ 1974ನೇ ಇಸವಿಯಲ್ಲಿ ನಾನು ಶೌಚಾಲಯ(ಕಕ್ಕಸು)ವನ್ನು ಮಾಡಿಸಿದೆ. ಬಹುಶಃ ಈ ಸಭೆಯಲ್ಲಿ ಇರತಕ್ಕಂಥ ಯಾರಾದರೂ ಸದಸ್ಯರ ಮನೆಯಲ್ಲೂ ಸಹ ಕಕ್ಕಸು ಮನೆ ಇಲ್ಲದೇ ಇದ್ದರೆ ಅದಕ್ಕೆ ನಾನು ಆಶ್ಚರ್ಯಪಡುವುದಿಲ್ಲ. ಆ ತರಹದ ವಾತಾವರಣ, ಪರಿಸರ ಇರುತ್ತದೆ. ನಾವೆಲ್ಲಾ ಮಲಮೂತ್ರ ಮಾಡುವುದಕ್ಕೆ ಹೊಲಕ್ಕೆ ಹೋಗುತ್ತಿದ್ದೆವು. ಅದು ಈಗ ಬೇಡ. ಈಗ ಇನ್ಸೆಂಟೀವ್ ಕೊಡಿ. ಇದು ಒಂದು ಮೂವ್‌ಮೆಂಟ್ ಆಗಲಿ. ಕಾನೂನು ಮಾಡಿ ಸದಸ್ಯರಿಗೆ ಡಿಸ್‌ಕ್ವಾಲಿಫಿಕೇಷನ್ ತರುವಂಥದ್ದು ಸೂಕ್ತ ಅಲ್ಲ. ದಯವಿಟ್ಟು ಇದನ್ನು ಮಾಡಬೇಕೆಂದು ವಿನಂತಿಸಿಕೊಂಡು ನಾನು ಹೊರಗಡೆ ಹೋಗುತ್ತೇನೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರಾದ ಶ್ರೀ ಹೆಚ್.ಎನ್.ನಂಜೇಗೌಡರು ಸದನದಿಂದ ನಿರ್ಗಮಿಸಿದರು)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ನಾಯಕರು ಈಗಾಗಲೇ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಚುನಾವಣೆಗೆ ನಾಮನಿರ್ದೇಶನ ಪತ್ರ ಹಾಕುವಾಗ ಆತ ಶೌಚಾಲಯ ಹೊಂದಿರಬೇಕು ಎನ್ನುವುದು ಏನಿದೆ ಅದನ್ನು ನಾನು ತೆಗೆಯುತ್ತೇನೆ. ಆದರೆ ಆತ ಆಯ್ಕೆಯಾಗಿ 6 ತಿಂಗಳೊಳಗೆ ಆತ ಶೌಚಾಲಯವನ್ನು ಕಟ್ಟಿಸಿಕೊಳ್ಳಬೇಕು. ಅದಕ್ಕೆ ನಾವು ವ್ಯವಸ್ಥೆ ಮಾಡುತ್ತೇವೆ. ಅದು ಮಾತ್ರ ಆಗಲೇ ಬೇಕು.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಹಠ ಹಿಡಿಯುವುದಕ್ಕೆ

ಹೋಗುವುದು ಬೇಡ. ಈ ವಿಧೇಯಕವನ್ನು ಯಾವ ರೀತಿ ಇಂಪ್ಲಿಮೆಂಟ್ ಮಾಡಬೇಕೋ ಅದಕ್ಕೆ ಸಂಪೂರ್ಣ ಸಹಕಾರ ಕೊಡೋಣ. ಇದನ್ನು ನೆಪದಲ್ಲಿ ಇಟ್ಟುಕೊಂಡು ಚುನಾಯಿತರಾದಂಥ ಸದಸ್ಯರುಗಳನ್ನು ಡಿಸ್‌ಕ್ವಾಲಿಫೈ ಮಾಡತಕ್ಕಂಥವರು ಬಹಳ ಜನ ಇದ್ದಾರೆ. ಮುಂದೆ ಎಂ.ಎಲ್.ಸಿ. ಚುನಾವಣೆಗಳು ಬರುತ್ತವೆ. ಈ ವಿಚಾರದಿಂದ ಒಂದು ದೊಡ್ಡ ಅನಾಹುತವಾಗುತ್ತದೆ. ದಯಮಾಡಿ ನಾವು ಹೇಳುವುದನ್ನು ಸ್ವಲ್ಪ ಕೇಳಿ. ಏಕೆಂದರೆ ನಿಮಗೆ ಗೊತ್ತಿದ್ದ ಹಾಗೆ 80 ಸಾವಿರ ಪಂಚಾಯತಿ ಸದಸ್ಯರು ಇದ್ದಾರೆ. ಅದರಲ್ಲಿ ಮೂರನೇ ಒಂದು ಭಾಗ ಎಂದರೆ ಸುಮಾರು 26-27 ಸಾವಿರ ಹೆಣ್ಣುಮಕ್ಕಳು ಇದ್ದಾರೆ. ಎಲ್ಲರೂ ಕೂಡ ಎಜ್ಯುಕೇಟೆಡ್ ಆದವರು ಇಲ್ಲ, ತಿಳುವಳಿಕೆ ಇದ್ದವರು ಇಲ್ಲ. ಇನ್ನೂ ಕೂಡ ಕೆಳಗಡೆ ಕುಳಿತುಕೊಳ್ಳತಕ್ಕಂಥ ಸದಸ್ಯರು ಇದ್ದಾರೆ. ಕುರ್ಚಿಮೇಲೆ, ಟೇಬಲ್ ಹತ್ತಿರ ಬಾ ಎಂದರೂ ಅವರು ಬರುವುದಿಲ್ಲ. ಬೆಂಚು ಮೇಲೆ ಕುಳಿತುಕೊಳ್ಳಿ ಎಂದು ಹೇಳಿದರೂ ಅವರು ಕುಳಿತುಕೊಳ್ಳುವುದಿಲ್ಲ. ಈ ರೀತಿ ಇರುವಂಥ ಸದಸ್ಯರು ಇದ್ದಾಗ ಸರ್ಕಾರ ಸುಮ್ಮನೆ ಡಿಸ್‌ಕ್ವಾಲಿಫೈ ಮಾಡುವುದಕ್ಕೆ ಕಾನೂನು ತರುತ್ತೇವೆ ಎನ್ನುವುದು ಸರಿಯಲ್ಲ. ಬೇಕಾದರೆ ನಮ್ಮಂಥ ಎಂ.ಎಲ್.ಎ.ಗಳಿಗೆ ಇರಲಿಲ್ಲವೆಂದರೆ, ಅವರು 74ರಲ್ಲಿ ಹೇಳಿದ ಹಾಗೆ ಅಂಥವು ಏನಾದರೂ ಇದ್ದರೆ ಮಾಡಿ. ಅದನ್ನು ಬಿಟ್ಟು, ಕೆಲವು ಸದಸ್ಯರು ಇನ್ನೂ ತಿಳಿದುಕೊಳ್ಳುವುದರಲ್ಲಿ ಇದ್ದಾರೆ. ಇನ್ನೂ ಮೇಲೆ ಬರುತ್ತಿದ್ದಾರೆ. ಇನ್ನು ಇದನ್ನು ಅಳವಡಿಸಿಕೊಂಡು ಅವರು ಮುಂದೆ ಹೋಗಬೇಕಾಗಿದೆ. ನಿಮಗೆ ಗೊತ್ತಿದ್ದ ಹಾಗೆ ಮೀಟಿಂಗ್ ಕರೆದರೆ ಕೋರಂ ಆಗಲಾರದಂಥ ಜನ ಇದ್ದಮೇಲೆ, ಶೌಚಾಲಯ ಕಟ್ಟಿಕೊಳ್ಳದಿದ್ದರೆ ಡಿಸ್‌ಕ್ವಾಲಿಫೈ ಮಾಡುತ್ತೇವೆ ಎನ್ನುವುದಕ್ಕೆ ಅರ್ಥವಾದರೂ ಎಲ್ಲಿ ಬರುತ್ತದೆ? ಆದ್ದರಿಂದ ಸರ್ಕಾರ ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ ಮಾಡಿದರೆ ಒಳ್ಳೆಯದು. ಇದು ಪ್ರತಿಷ್ಠೆ ಪ್ರಶ್ನೆ ಅಲ್ಲ. ಮತ್ತು ಅನರ್ಹ ಎನ್ನತಕ್ಕಂಥ ಎಸ್.ಸಿ/ಎಸ್.ಟಿ. ಏನು ಇದೆ ಅದಕ್ಕೂ ಕೂಡ ತಾವು... ನಾವು ಸುಮ್ಮನೆ ಒಪ್ಪಿಕೊಂಡು ಎಲ್ಲವನ್ನೂ ಸ್ವಾಗತ ಮಾಡಿದ ಮೇಲೆ ನೀವು ಇಷ್ಟಕ್ಕೆ ಹಠ ಮಾಡಿದ ಮೇಲೆ ಮುಂದೆ ನಾವು ಕೂಡ ಮಾಡದೇ ನಿರ್ವಾಹವಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ಅದಕ್ಕೆ ನಾನು ಕೃತಜ್ಞತೆಗಳನ್ನು ಅರ್ಪಿಸಿದ್ದೇನೆ. ಇದು ಪ್ರತಿಷ್ಠೆಯ ಪ್ರಶ್ನೆಯಲ್ಲ, ಇದೊಂದು ಬದ್ಧತೆಯ ಪ್ರಶ್ನೆಯಾಗಿದೆ. ಯಾವುದಾದರೂ ಹೊಸ ಕಾನೂನನ್ನು, ಹೊಸ ಪರಿಕಲ್ಪನೆಯನ್ನು ತಂದಾಗ ಅದಕ್ಕೆ ವಿರೋಧಗಳು ಬರುತ್ತವೆ. ಆ ವಿರೋಧಗಳನ್ನು ಯಾರು ಎದುರಿಸಿರುತ್ತಾರೆ ಅವರುಗಳು ಅಬ್ದುಲ್ ನಜೀರ್ ಸಾಬ್‌ರವರಂತೆ ಅವರು ಒಳ್ಳೆಯ ಜನಪರವಾದಂತಹ ಕೆಲಸವನ್ನು ಮಾಡಿದಂತಾಗುತ್ತದೆ. ಹಿಂದೇ ಇದೇ ರೀತಿಯಾದ ಒಂದು ಕಾನೂನನ್ನು ತಂದಾಗ ಇಷ್ಟು ಅಧಿಕಾರವನ್ನು ಕೊಟ್ಟರೆ ಹೇಗೆ ಎಂದು ಹೇಳಿದರು. ಕರ್ನಾಟಕ ರಾಜ್ಯದಲ್ಲಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಗ್ರಾಮ ಪಂಚಾಯಿತಿಗಳಿಗೆ ಇಲಾಖೆಯನ್ನು ವರ್ಗಾವಣೆ ಮಾಡಿರುವುದನ್ನು ಬಿಟ್ಟರೆ ಬೇರೆ ಯಾವ

ರಾಜ್ಯಗಳಲ್ಲಿಯೂ ಇಲಾಖೆಗಳನ್ನು ವರ್ಗಾವಣೆ ಮಾಡಿಲ್ಲ. ಇವತ್ತು ಕೇರಳ ರಾಜ್ಯದಲ್ಲಿ ಕಮ್ಯುನಿಸ್ಟ್ ಡೆಮೋಕ್ರೆಟಿಕ್ ಪಾರ್ಟಿ ಅಧಿಕಾರದಲ್ಲಿರತಕ್ಕಂತಹ ಪ್ರದೇಶದಲ್ಲಿ ಇ.ಎಂ.ಎಸ್.ನಂಬೂದರಿ ಪಾಡ್ ರವರು, ಅಲ್ಲಿಯ ಮುಖ್ಯಮಂತ್ರಿಗಳಿಗೆ ನೀವು ಅಧಿಕಾರಕ್ಕೆ ಬಂದು ಇಷ್ಟು ದಿವಸವಾದರೂ ಕೂಡ ಎಲ್ಲಾ ಇಲಾಖೆಗಳನ್ನು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ವರ್ಗಾವಣೆ ಮಾಡಿಲ್ಲ ಎನ್ನುವಂತಹ ಮಾತನ್ನು ಹೇಳುತ್ತಾರೆ. ಬೇರೆಯವರ ಬಗ್ಗೆ ಮಾತನಾಡತಕ್ಕಂಥದ್ದು, ಕ್ರಾಂತಿಕಾರವಾಗಿ ಮಾತನಾಡತಕ್ಕಂಥದ್ದು ಸುಲಭವಾಗಿರತಕ್ಕಂಥದ್ದು. ಆದರೆ ಅದನ್ನು ಕಾನೂನಿನ ಪ್ರಕಾರವಾಗಿ ರಚನೆಯನ್ನು ಮಾಡಿದಂತಹ ಸಂದರ್ಭದಲ್ಲಿ ಕಷ್ಟವಾಗುತ್ತದೆ. ಆದುದರಿಂದ ನಾನು ಎಲ್ಲಾ ಸದಸ್ಯರಲ್ಲಿ ಬಹಳ ವಿನಯದಿಂದ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ ಅದನ್ನು ದುರುಪಯೋಗವಾಗದಂತೆ ನೋಡಿಕೊಳ್ಳುತ್ತೇವೆ. ಜೊತೆಗೆ ಅವರಿಗೆ ಏನೇನು ಸೌಲಭ್ಯಗಳು ಬೇಕೋ ಅದನ್ನು ಕಲ್ಪಿಸಿಕೊಡುತ್ತೇವೆ. ಯಾರೇ ಒಬ್ಬ ವ್ಯಕ್ತಿ ನನಗೆ ಶೌಚಾಲಯವನ್ನು ಕಟ್ಟುವುದಕ್ಕೆ ಜಾಗ ಇಲ್ಲ, ನನಗೆ ಶೌಚಾಲಯವನ್ನು ಕಟ್ಟುವುದಕ್ಕೆ ಶಕ್ತಿ ಇಲ್ಲವೆಂದು ಆಯ್ಕೆಯಾಗಿ ಬಂದ ತಕ್ಷಣ ಗ್ರಾಮ ಪಂಚಾಯಿತಿಗೆ ಅರ್ಜಿಯನ್ನು ಕೊಟ್ಟ ತಕ್ಷಣ ಆತನಿಗೆ ಜಾಗವನ್ನು ಕೊಡುತ್ತೇವೆ. ನೀವು ಹೇಳಿದಂತೆ ಎಂಟುಲಕ್ಷ ಜನ ನಿವೇಶನ ರಹಿತವಾದಂತಹ ಜನರು ಇದರಲ್ಲಿ ಇದ್ದಾರೆ. 11 ಲಕ್ಷ ಜನರಿಗೆ ಮನೆಗಳು ಇಲ್ಲ. 19,600 ಜನರಿಗೆ ತೊಂದರೆ ಇದೆ ಎಂದು ನೊಂದಾಯಿಸಲ್ಪಟ್ಟ ದಾಖಲೆಯಿಂದ ನಮಗೆ ಗೊತ್ತಾಗಿದೆ. ಆದರೆ ನೀವು ಕೇಳಬಹುದು ಜಾಗನೇ ಕೊಡಲಿಕ್ಕೆ ಸಾಧ್ಯನೇ ಆಗದಿರುವವರು ಈ ಶೌಚಾಲಯವನ್ನು ಕಟ್ಟುವುದಕ್ಕೆ ಹೇಗೆ ಕೊಡುತ್ತೀರಿ ಎಂದರೆ, ನಾವು ಭೂಮಿಯನ್ನು ಅಕ್ವೈರ್ ಮಾಡಿಕೊಂಡು ಕೊಡುತ್ತೇವೆ. ಅದು 5'X5' ಅಥವಾ 6'X6' ಈ ರೀತಿಯಾಗಿ ಜಾಗವನ್ನು ಮಾಡಿಕೊಡುತ್ತೇವೆ. ಮತ್ತು ಕಟ್ಟಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗಲೂ ಸಹ ತಲೆಯ ಮೇಲೆ ಮಲವನ್ನು ಹೊರುತ್ತಿದ್ದಾರೆಂದು ಪೇಪರ್‌ಗಳಲ್ಲಿ ಬರುತ್ತಿದೆ. ಇದು ಏನೂ ಪ್ರತಿಷ್ಠೆಯ ಪ್ರಶ್ನೆಯಲ್ಲ. ತಲೆಯ ಮೇಲೆ ಮಲವನ್ನು ಹೊರುವಂತೆ ಉದ್ದೇಶ ಪೂರಕವಾಗಿ ಮಾಡಿಸುವುದಕ್ಕೆ ಇದು ಸಾಧ್ಯತೆಯಾಗುತ್ತದೆಂದು ನಾವು ಹೇಳಿದರೂ ಕೂಡ ನೀವು ಇದಕ್ಕೆ ಒಪ್ಪಿಕೊಳ್ಳುತ್ತಿಲ್ಲ ಎಂದರೆ ನಾನು ಮತ್ತೇನು ಹೇಳಲಿ? ನಾನು ಹೇಳಿದಂಥ ಪಾಯಿಂಟ್‌ನಾದರೂ ಕನ್ಸಿಡರ್ ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಅನೇಕ ನನ್ನ ಹಿರಿಯ ಸದಸ್ಯರುಗಳು ಏನು ಗ್ರಾಮೀಣಾ ಪ್ರದೇಶದ ಹಿನ್ನೆಲೆಯಲ್ಲಿ ಬಂದಿರತಕ್ಕಂಥರು ಇದ್ದಾರೆ ಅವರುಗಳೆಲ್ಲರೂ ಈ ವ್ಯವಸ್ಥೆಯಿಂದ ಸ್ವಲ್ಪ ಹೊರಗಡೆ ಬರತಕ್ಕಂತಹ ಪ್ರಯತ್ನವನ್ನು ಮಾಡಬೇಕಾಗುತ್ತದೆ. ನಾವು ಅವರಿಗೆ ಎಲ್ಲಾ ರೀತಿಯ ಅನುಕೂಲವನ್ನು ಮಾಡಿಕೊಡುತ್ತೇವೆಂದು ಹೇಳಿದರೂ ಕೂಡ ಏಕೆ

ಸಂಶಯವನ್ನು ವ್ಯಕ್ತಪಡಿಸುತ್ತೀರಿ? ನೀವು ಭೂಸುಧಾರಣೆಯ ಕಾನೂನನ್ನು ಜಾರಿಗೆ ತಂದಾಗ ನಾವು ವಿನೋಬಾಜಿಯ ತತ್ವವನ್ನು ಒಪ್ಪಿಕೊಳ್ಳಬಹುದಾಗಿತ್ತಲ್ಲಾ. ಮನಪರಿವರ್ತನೇಯ ಕಾನೂನನ್ನು. ನಿಮಗೆ ಗೊತ್ತಿದೆ ನಾವು ಭೂ ಸುಧಾರಣೆಯ ಕಾಯಿದೆಯ ತೆಲಂಗಾಣದ ಮೂವ್‌ಮೆಂಟ್ ಬಂದಂತಹ ಸಂದರ್ಭದಲ್ಲಿ ಈ ವ್ಯವಸ್ಥೆ ವಿನೋಭಾಜಿಯಂಥವರ ಮೂಲಕವಾಗಿ ಮನೋ ಪರಿವರ್ತನಾ ಮೂಲಕ, ಭೂಧಾನ, ಗ್ರಾಮ ದಾನ, ಜೀವನ ದಾನ ಎಂದು ತಂದು ನೀವೇ ಮಾತನಾಡಿದ್ದೀರಿ, ನಾವೂ ಸಹ ಮಾತನಾಡಿದ್ದೇವೆ. ಈ ರೀತಿಯಾಗಿ ಕಾಲ ಕಾಲಕ್ಕೆ ಕ್ರಾಂತಿಕಾರವಾದಂತಹ ಸುಧಾರಣೆಗಳನ್ನು ತಂದಾಗ ಇಂತಹ ವ್ಯಕ್ತಿಗಳ ಮೂಲಕ ಜಾರಿಗೆ ತಂದಾಗ ಜಾರಿಯಾಗುವುದಿಲ್ಲ. ತಾವು ಕಾನೂನಿನಲ್ಲಿ ಕಡ್ಡಾಯವಾಗಿ ಜಾರಿಗೆ ತಂದಾಗ ಅದು ಜಾರಿಗೆ ಬರುತ್ತದೆ. ನೀವು ಇಂತಹ ತಾರೀಖಿನೊಳಗಾಗಿ ಅಥವಾ ಡಿಸೆಂಬರ್ 1973ರ ಒಳಗಾಗಿ ಯಾರು ಗೇಣಿದಾರರು ಎಂದು ನೋಂದಾಯಿಸಲ್ಪಟ್ಟಿದ್ದಾರೆ, ಅವನಿಗೆ ನಾವು ಗೇಣಿಯ ಹಕ್ಕನ್ನು ಕೊಡುತ್ತೇವೆಂದಾಗ ಅದು ಜಾರಿಯಾಯಿತು. ಅದಕ್ಕಿಂತಲೂ ಪೂರ್ವದಲ್ಲಿ ಕಾನೂನುಗಳು ಇರಲಿಲ್ಲವೆಂದು ಅರ್ಥವಲ್ಲ. 1949ರಲ್ಲಿ ಬೊಂಬಾಯಿ ಅಧಿಪತ್ಯದಲ್ಲಿ ಶೇರ್‌ರವರು, ಮೂರಾರ್ಜಿದೇಸಾಯಿಯವರು ತಂದಿದ್ದರು, ಆದರೆ ಅಲ್ಲಿ ಇದ್ದ ಕೆಲವು ಲೋಪದೋಷಗಳ ಮೂಲಕ ಪರಿಣಾಮಕಾರಿಯಾಗಿ ಜಾರಿಗೆ ಮಾಡಲಿಕ್ಕೆ ಆಗಲಿಲ್ಲ. ರಾಜಕೀಯ ಹಿತಾಸಕ್ತಿ ಇರಲಿಲ್ಲ. ಆ ರೀತಿಯಾಗಿ ಕಾನೂನಿನ ಮೂಲಕ ಜಾರಿಗೆ ತಂದಾಗ ಮಾತ್ರ ನಾವು ಸ್ವಲ್ಪ ಬದಲಾವಣೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಡಿಸ್‌ಕ್ವಾಲಿಫಿಕೇಷನ್ ಆಗುತ್ತೇವೆ ಎನ್ನುವಂತಹ ಭಯಕ್ಕೆ 80,000 ಜನರಾದರೂ ಶೌಚಾಲಯಗಳನ್ನು ಕಟ್ಟಿಕೊಂಡರೆ ಅದು ಒಂದು ದೊಡ್ಡದಾದಂತಹ ಹೆಜ್ಜೆ ಎಂದು ಏಕೆ ಭಾವಿಸಬಾರದು? ಆದ್ದರಿಂದ ತಾವು ದಯವಿಟ್ಟು ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಎಲ್ಲಾ ವ್ಯವಸ್ಥೆಯನ್ನು ಮಾಡಿ ಕೊಟ್ಟ ಮೇಲೂ ಶೌಚಾಲಯವನ್ನು ಕಟ್ಟದೇ ಹೋದರೆ ಡಿಸ್‌ಕ್ವಾಲಿಫೈ ಮಾಡುತ್ತೇವೆಂದರೆ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಾವು ಬಹಳ ಶಾಂತ ರೀತಿಯಲ್ಲಿ ಕೇಳಿದ್ದೇವೆ. ಇದಕ್ಕಾಗಿ ನಾವು ನಮ್ಮ ಪಕ್ಷದ ಸಭೆಯನ್ನು ಮಾಡಿ ಪ್ರತಿಯೊಂದು ಕ್ಲಾಸ್ ಬೈ ಕ್ಲಾಸ್, ನಾವು ಶ್ರೀ ಘೋರ್ಪಡೆಯವರನ್ನು ಕರೆದು ಅವರ ಜೊತೆಯಲ್ಲಿಯೂ ಕೂಡ ಮಾತನಾಡಿ, ಯಾವ ರೀತಿಯಲ್ಲಿ ಮಾಡಬೇಕೆಂದಾಗ ಸಂಪೂರ್ಣವಾಗಿ ಇದರಲ್ಲಿರತಕ್ಕಂತಹ ಅಂಶಗಳು, ಹಿಂದೆ ಅವರು ಸಚಿವರು ಇದ್ದಾಗ ಪ್ರಸ್ತಾಪ ಮಾಡಿದಂತಹ ಅಮೆಂಡ್‌ಮೆಂಟ್ಸ್, ಪಿ.ಆರ್.ನಾಯಕ್‌ರವರ ಕಮಿಟಿಯ ರಿಪೋರ್ಟ್ ಎಲ್ಲವನ್ನೂ ನೋಡಿದ ಮೇಲೆ ನಮ್ಮಲ್ಲಿ ಮತ್ತು ಇವರು ತಂದಿರುವಂತಹ ತಿದ್ದುಪಡಿಗಳಲ್ಲಿ ಸಮಾನತೆಯು ಇದೆ ಎಂದು ತಿಳಿದುಕೊಂಡು ನಾವು ಸಂಪೂರ್ಣವಾಗಿ

ಸಹಕರಿಸಿದ್ದೆವು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಇಲ್ಲಿ ಯಾವ ಸಿಸ್ಟಂ ಇದೆ ಎನ್ನುವುದು ತಮಗೆ ಗೊತ್ತಿದೆ. ಇಲ್ಲಿ ಎಲ್ಲರೂ ವಿದ್ಯಾವಂತರಿದ್ದು, ಅಥವಾ ಆರ್ಥಿಕವಾಗಿ ಒಳ್ಳೆಯವರಾಗಿದ್ದು ಎಲ್ಲರಿಗೂ ಮನೆ ಇದ್ದು, ಜಾಗ ಇದ್ದರೆ ಈ ತಿದ್ದುಪಡಿಗೆ ವಿರೋಧ ಮಾಡುತ್ತಿದ್ದೀರಿ ಎಂದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಎಂಥೆಂಥ ಸದಸ್ಯರು ಇದ್ದಾರೆಂದು ಮೀಸಲಾತಿಯ ಕ್ಯಾಟಗರಿಯಲ್ಲಿ ಹೆಣ್ಣು ಮಕ್ಕಳನ್ನು ಹುಡುಕಿ ಎಳೆದುಕೊಂಡು ಅಭ್ಯರ್ಥಿಗಳನ್ನಾಗಿ ಮಾಡಬೇಕು ಆ ಕ್ಯಾಟಗರಿಯಲ್ಲಿ ಸಿಗಲಿಲ್ಲ ಎಂದರೆ ಬೇರೆಯವರ ತರಬೇಕು. ಅವರಿಗೆ ಮನೆ ಇಲ್ಲ, ಕೃಷಿ ಕಾರ್ಮಿಕರು ಇದ್ದರೂ ಅವರಿಗೆ ಮೀಸಲಾತಿ ಇದೆ ಇರಲಿ ಎಂದು ಹೇಳಬೇಕು. ಇಂಥದ್ದು ಎಲ್ಲಾ ಇದ್ದರೂ ಕೂಡ ತಾವು ಮಾಡುತ್ತೇವೆಂದರೆ, ಬೇಕಾದರೆ ಇನ್ನು ಐದು ವರ್ಷಗಳ ನಂತರ ಮಾಡಿ. ನಾನು ಬೇಡ ಎನ್ನುವುದಿಲ್ಲ. ಇದು ಈ ತಕ್ಷಣದಿಂದಲೇ ಆಗಲಿ, 6 ತಿಂಗಳಿನಲ್ಲಿಯೇ ಆಗಲಿ, ಬೇಡ ಎಂದು ಯಾರು ಹೇಳುತ್ತಾರೆ? ಮೊದಲು ಇದನ್ನುಮಾಡಬೇಕೆಂದು ಹೇಳುವವರು ನಾವು. ಅವರಿಗೆ ನಾವೇ ಕಟ್ಟಿಸಿಕೊಡುತ್ತೇವೆಂದು ಹೇಳಿಬಿಡಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಅವರಿಗೆ ಜಾಗವನ್ನು ಕೊಟ್ಟು ಸರ್ಕಾರದಿಂದಲೇ ಶೌಚಾಲಯವನ್ನು ಕಟ್ಟಿಸಿಕೊಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ತಾವು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ನಿಮ್ಮ ಅಮೆಂಡ್‌ಮೆಂಟ್ ಹೇಳಿಬಿಡಿ. ಅದನ್ನು ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಎಂ.ಪಿ.ಪ್ರಕಾಶ್: ನಿಯಮಾವಳಿಯ ರೂಪದಲ್ಲಿ ಹೇಳುವುದೇನೆಂದರೆ ಯಾರು ಗ್ರಾಮ ಪಂಚಾಯಿತಿಗೆ ಅರ್ಜಿಯನ್ನು ಕೊಟ್ಟು ಜಾಗ ಇಲ್ಲ, ಶೌಚಾಲಯವನ್ನು ಕಟ್ಟಿಕೊಳ್ಳುವಂತಹ ಪರಿಸ್ಥಿತಿಯಲ್ಲಿಲ್ಲ, ನಮಗೆ ಶೌಚಾಲಯವನ್ನು ಕಟ್ಟಿಸಿಕೊಡಬೇಕೆಂದರೆ ಆ ಗ್ರಾಮ ಪಂಚಾಯಿತಿಯಲ್ಲಿ ಆ ಸದಸ್ಯರಿಗೆ ನಾವು ಜಾಗವನ್ನು ಕೊಡುವುದರ ಜೊತೆ ಶೌಚಾಲಯವನ್ನು ಪುಕ್ಕಟೆಯಾಗಿ ಕಟ್ಟಿಸಿಕೊಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ನಾವು ಇದನ್ನು ಸ್ವಾಗತ ಮಾಡುತ್ತೇವೆ. ಇದರ ಜೊತೆಯಲ್ಲಿ ಸಂಬಂಧಪಟ್ಟಂತಹ ಚೀಫ್ ಎಕ್ಸಿಕ್ಯುಟೀವ್ ಆಫೀಸರ್, ಜಿಲ್ಲಾ ಪಂಚಾಯತ್ ಅವರಿಗೆ ಸುತ್ತೋಲೆಯನ್ನು ಕಳುಹಿಸಿ, ವಿಲೇಜ್ ಪಂಚಾಯತ್‌ಗೂ ಕೂಡ ಕಳುಹಿಸಿ, ಕೊಡುತ್ತೇವೆಂದು ಹೇಳಿದ್ದರೆ, ನಾವು ಸ್ವಾಗತ ಮಾಡುತ್ತಿದ್ದೆವು. ಇಷ್ಟೊಂದು ಚರ್ಚೆಯೇ ಆಗುತ್ತಿರಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಈಗ ನಮ್ಮ ಹಣಕಾಸಿನ ಸಚಿವರು ಹೇಳಿದರು ಮಾಡಿ ಕೊಡಿ ಎಂದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಮಾನ್ಯ ಎಂ.ಪಿ.ಪ್ರಕಾಶ್‌ರವರೇ, ಸಾಮಾಜಿಕ ನ್ಯಾಯ ಸಮಿತಿಗಳ ಸದಸ್ಯರುಗಳನ್ನು ನೇಮಕ ಮಾಡುವಾಗ ನಿಯಮಾವಳಿಗಳಲ್ಲಿ ಎಸ್.ಸಿ.ಅಥವಾ ಎಸ್.ಟಿ. ಎಂದು ಮಾಡಿರುತ್ತೀರಿ. ಆದುದರಿಂದ ಇದರಲ್ಲಿ ಸಾಕಷ್ಟು ಸಾರಿ ಮಿಸ್‌ಯೂಸ್ ಆಗುತ್ತಿದೆ. ಪುನಃ ಅದನ್ನು ಮಾಡುವುದು ಬೇಡ. ಅದಕ್ಕೆ ಎಸ್.ಸಿ.ಯವರು ಜಾಸ್ತಿ ಇದ್ದರೆ ಅಲ್ಲಿ ಎಸ್.ಸಿಗೆ ಎಂದು ಮಾಡಿ; ಎಲ್ಲಿ ಎಸ್.ಟಿ.ಗಳ ಜನಸಂಖ್ಯೆ ಜಾಸ್ತಿ ಇದೆ ಅಲ್ಲಿ ಎಸ್.ಟಿ.ಯವರಿಗೆ ಎಂದು ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಇವರು ಈ ವಿಚಾರವನ್ನು ಅನೇಕ ಸಂದರ್ಭಗಳಲ್ಲಿ ಎಸ್.ಟಿ.ವರ್ಗದವರು ರಾಜಕೀಯವಾಗಿ ಪ್ರಬಲವಾಗಿರುವುದಿಲ್ಲ, ಆದ್ದರಿಂದ ಅಲ್ಲಿ ದುರುಪಯೋಗವಾಗುತ್ತದೆ ಎನ್ನುವಂತಹ ಒಂದು ಸಂಶಯವನ್ನು ಹೇಳುತ್ತಾರೆ. ಆದುದರಿಂದ ಅಲ್ಲಿ ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿಯಲ್ಲಿ ಯಾವ ವರ್ಗದ ಜನಸಂಖ್ಯೆಯು ಎಷ್ಟು ಇದೆ, ಉದಾಹರಣೆಗೆ ಬಳ್ಳಾರಿಯಲ್ಲಿ, ರಾಯಚೂರು, ಚಿತ್ರದುರ್ಗದಲ್ಲಿ ಎಸ್.ಸಿ. ಜನಸಂಖ್ಯೆಯು ಜಾಸ್ತಿ ಇದೆ. ಆದುದರಿಂದ ಎಸ್.ಸಿಯವರಿಗೆ ಕೊಡುತ್ತೇವೆ. ಅದೇ ರೀತಿಯಲ್ಲಿ ಎಸ್.ಟಿ. ಜನಸಂಖ್ಯೆಯು ಜಾಸ್ತಿ ಇರುವಂತಹ ಕಡೆ ಎಸ್.ಟಿಯವರಿಗೆ ಕೊಡುತ್ತೇವೆ. ಎಸ್.ಸಿ.ಅಥವಾ ಎಸ್.ಟಿ. ಎಂದು ಮಾಡಿ ಕನ್ಸಿಡರ್ ಮಾಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನಖರ್ಗೆ: ತಮಗೆ ಗೊತ್ತಿರುವಂತೆ ಮೀಸಲಾತಿಯು 23 ಪರ್ಸೆಂಟ್ ಬಂದಿದೆ. ಅದರ ಪ್ರಕಾರ ಎಸ್.ಸಿ.ಗೆ 18 ಪರ್ಸೆಂಟ್ ಮತ್ತು ಎಸ್.ಟಿ.ಗೆ 5 ಪರ್ಸೆಂಟ್ ಅದನ್ನು ಕ್ಲೀಯರ್ ಆಗಿ ಸೂಚನೆಯನ್ನು ಕೊಟ್ಟು ಬಿಡಿ. ಇಲ್ಲದಿದ್ದರೆ ಸುಮ್ಮನೆ ಮಿಸ್‌ಯೂಸ್ ಆಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ನಮ್ಮ ಸುತ್ತೋಲೆಯ ಪ್ರಕಾರವಾಗಿ ಕ್ಲಿಯರ್ ಆಗಿ ಸ್ಪಷ್ಟೀಕರಣವನ್ನು ಕೊಡಿಸುತ್ತೇವೆ. ಅಲ್ಲಿ ಯಾರ ಸಂಖ್ಯೆಯು ಹೆಚ್ಚು ಇರುತ್ತದೆ ಅವರಿಗೆ ಕೊಡಬೇಕೆಂದು ಮಾಡುತ್ತೇವೆ.

ಮತ್ತೊಬ್ಬರು ಮಾನ್ಯ ಸದಸ್ಯರು ನೌಕರರ ಬಗ್ಗೆ ಕೇಳುತ್ತಿದ್ದರು, ಅವರ ಬಗ್ಗೆ ಹೇಳುವುದಾದರೆ ಸೆಲ್ಫ್ ಗೌರ್ನಿಂಗ್ ಯೂನಿಟ್ ಎಂದು ಕರೆಯುತ್ತೇವೆ. ಅದನ್ನು ಸ್ವಯಂ ಆಡಳಿತಕ್ಕೆ ಒಳಪಡುವಂಥದ್ದನ್ನು ಸ್ಥಾನಿಕ ಸಂಸ್ಥೆಗಳೆಂದು ಕರೆಯುತ್ತೇವೆ. ಆದ್ದರಿಂದ ಅವರನ್ನು ಸರ್ಕಾರಿ ನೌಕರರು ಎಂದು ಪರಿಗಣಿಸುವುದಕ್ಕೆ ಆಗುವುದಿಲ್ಲ. ಅದರ ಜೊತೆಗೆ ಬೇರೆ ರೀತಿಯಾದಂಥವೂ ಸಹ ಇರುತ್ತದೆ. ಆದ್ದರಿಂದ ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದುದು ಎಂದರೆ, ಸೇವಾ ನಿಯಮಾವಳಿಗಳು ಯಾವುದು ಇದೆ ಅದನ್ನು ವ್ಯವಸ್ಥಿತವಾಗಿ ಹಾಗೂ ವೈಜ್ಞಾನಿಕವಾಗಿ ಮಾಡಿಕೊಡುತ್ತೇವೆ. ಮತ್ತು ಅವರಿಗೆ ಕನಿಷ್ಟ ವೇತನದ ಬಗ್ಗೆ ಕೂಡ ಪ್ರಸ್ತಾಪ ಮಾಡಿ ಕಳುಹಿಸಿಕೊಡುತ್ತೇವೆ. ಇದರ

ಬಗ್ಗೆ ಮತ್ತೊಂದು ಸಲ ನಿಮ್ಮ ಜೊತೆಗೆ ಮತ್ತು ಮಲ್ಲಪಾಡಿಯವರ ಜೊತೆಗೆ ಇದರ ಏನು ರೆಪ್ರಜೆಂಟೇಷನ್ ಕೊಟ್ಟಿದ್ದಾರೆ ಅವರ ಜೊತೆಯಲ್ಲಿಯೂ ಕೂಡ ಮಾತನಾಡಿ ಒಪ್ಪುವಂಥ ಒಂದು ಸೂತ್ರವನ್ನು ಕಂಡು ಹಿಡಿಯುತ್ತೇವೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''1997ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

7.40 ಪಿ.ಎಂ

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 34ರವರೆಗೆ

ಅಧ್ಯಕ್ಷರು: ಪ್ರಸ್ತಾಪ ಏನೆಂದರೆ ''ಖಂಡ 2 ರಿಂದ 34ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತವೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 34ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 35 (ಹೊಸ ಖಂಡ)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, 34ನೇ ಖಂಡದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು:

''35. 130ನೇ ಪ್ರಕರಣದ ತಿದ್ದುಪಡಿ- ಮೂಲ ಅಧಿನಿಯಮದ 130ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ 'ಸಂಖ್ಯೆ 31ರ ನಂತರ ಸಂಖ್ಯೆ 31ಎ 31ಬಿ' ಹಾಗೂ ಅಕ್ಷರಗಳನ್ನು ಸೇರಿಸತಕ್ಕದ್ದು.''

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''35 130ನೇ ಪ್ರಕರಣದ ತಿದ್ದುಪಡಿ ಮೂಲ ಅಧಿನಿಯಮದ 130ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ 'ಸಂಖ್ಯೆ 31ರ ನಂತರ ಸಂಖ್ಯೆ 31ಎ, 31ಬಿ' ಹಾಗೂ ಅಕ್ಷರಗಳನ್ನು ಸೇರಿಸತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು 35ನೇ ಹೊಸ ಖಂಡ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಇದರಲ್ಲಿ ಶ್ರೀ ಘೋರ್ಪಡೆಯವರು ಪ್ರಸ್ತಾಪ ಮಾಡಿದ್ದರಲ್ಲಾ ಪಂಚಾಯಿತಿ ಸೂಪರ್‌ಸೀಡ್ ಮಾಡತಕ್ಕದ್ದು, ಅದು ಜಿಲ್ಲಾ ಪರಿಷತ್ತುಗಳಿಗೆ ಇರುವುದಕ್ಕಿಂತಲೂ ಸರ್ಕಾರ ಇಟ್ಟುಕೊಳ್ಳುವುದು ಒಳ್ಳೆಯದು. ವಿತ್ ಪ್ರಿಜುಡೀಸ್ ಮಾಡತಕ್ಕದ್ದು ಇರುತ್ತದೆ. ಅಲ್ಲಿ ಏನಾಗುತ್ತದೆಂದರೆ ಲೋಕಲ್ ಪಾರ್ಟೀಸ್ ಬರುತ್ತವೆ. ಈಗ ನಮ್ಮ ಗುಲ್ಬರ್ಗಾದಲ್ಲಿ ಆಗಿದೆ, ಹೀಗೆ ಅನೇಕ ಕಡೆ ಆಗಿದೆ.

ಖಂಡ 36ರಿಂದ 39ರವರೆಗೆ - ಎರಡೂ ಸೇರಿದಂತೆ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 36ರಿಂದ 39ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 36ರಿಂದ 39ರವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 40ಕ್ಕೆ ತಿದ್ದುಪಡಿ:

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಖಂಡ 40ಕ್ಕೆ (ಕನ್ನಡ ಅವತರಣಿಕೆಯಲ್ಲಿ) ನಾನು ಈ ಕೆಳಕಂಡ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ:

''40ನೇ ಖಂಡದ (1)ನೇ ಉಪ-ಖಂಡದ ಎರಡನೇ ಪರಂತುಕದಲ್ಲಿ 'ಒಂದು ವರ್ಷದೊಳಗೆ'ಎಂಬ ಪದಗಳಿಗೆ 'ಆರು ತಿಂಗಳೊಳಗೆ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''40ನೇ ಖಂಡದ (1)ನೇ ಉಪ-ಖಂಡದ ಎರಡನೇ ಪರಂತುಕದಲ್ಲಿ 'ಒಂದು ವರ್ಷದೊಳಗೆ' ಎಂಬ ಪದಗಳಿಗೆ 'ಆರು ತಿಂಗಳೊಳಗೆ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 40 ತಿದ್ದುಪಡಿಯಾದ ರೀತಿಯಲ್ಲಿ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 40 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗು ಖಂಡ 40 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ 41 ಮತ್ತು 42 ಎರಡೂ ಸೇರಿದಂತೆ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 41 ಮತ್ತು 42 ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತವೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 41 ಮತ್ತು 42 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 43ಕ್ಕೆ ತಿದ್ದುಪಡಿ

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಖಂಡ 43ರ (1)ನೇ ಉಪ ಖಂಡಕ್ಕೆ ಈ ಮುಂದಿನ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ:

''(1) (2)ನೇ ಉಪ-ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು:

''(2) ಪ್ರತಿಯೊಂದು ಸ್ಥಾಯೀ ಸಮಿತಿಯು, ತಾಲ್ಲೂಕು ಪಂಚಾಯಿತಿಯು ನಿರ್ದಿಷ್ಟಪಡಿಸಿದಂತೆ ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳು ಚುನಾಯಿತ ಸದಸ್ಯರುಗಳ ಪೈಕಿಯಿಂದ ಚುನಾಯಿಸಿದ ಅಧ್ಯಕ್ಷನು ಸೇರಿ ಆರನ್ನು ಮೀರದಂಥ ಸಂಖ್ಯೆಯ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು. ಸ್ಥಾಯೀ ಸಮಿತಿಯ ಸದಸ್ಯರ ಚುನಾವಣೆಯನ್ನು ತಾಲ್ಲೂಕು ಪಂಚಾಯಿತಿಯ ಸದಸ್ಯರನ್ನು ಚುನಾಯಿಸಲು ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿನಿಯಮದಡಿ ಅದರ ಪುನರ್ ರಚನೆ ಅಥವಾ ಸ್ಥಾಪನೆಯಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯೀ ಸಮಿತಿಯ ಸದಸ್ಯರುಗಳ ಹುದ್ದೆಯ ಅವಧಿ ಮುಕ್ತಾಯವಾಗುವುದಕ್ಕೆ ನಿಕಟಪೂರ್ವದಲ್ಲಿ ನಡೆಸತಕ್ಕದ್ದು: ಪರಂತು, ಸಾಮಾಜಿಕ ನ್ಯಾಯ ಸಮಿತಿಯು ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯಳನ್ನು ಮತ್ತು ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬ ಸದಸ್ಯನನ್ನು ಒಳಗೊಂಡಿರತಕ್ಕದ್ದು,''

ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, 43ನೇ ಖಂಡದ (1)ನೇ ಉಪ-ಖಂಡದ ನಂತರ....

''(1) (2)ನೇ ಉಪ-ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು:

''(2) ಪ್ರತಿಯೊಂದು ಸ್ಥಾಯೀ ಸಮಿತಿಯು, ತಾಲ್ಲೂಕು ಪಂಚಾಯಿತಿಯು ನಿರ್ದಿಷ್ಟಪಡಿಸಿದಂತೆ ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳು ಚುನಾಯಿತ ಸದಸ್ಯರುಗಳ ಪೈಕಿಯಿಂದ ಚುನಾಯಿಸಿದ ಅಧ್ಯಕ್ಷನು ಸೇರಿ ಆರನ್ನು ಮೀರದಂಥ ಸಂಖ್ಯೆಯ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು. ಸ್ಥಾಯೀ ಸಮಿತಿಯ ಸದಸ್ಯರ ಚುನಾವಣೆಯನ್ನು ತಾಲ್ಲೂಕು ಪಂಚಾಯಿತಿಯ ಸದಸ್ಯರನ್ನು ಚುನಾಯಿಸಲು ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿನಿಯಮದಡಿ ಅದರ ಪುನರ್ ರಚನೆ ಅಥವಾ ಸ್ಥಾಪನೆಯಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯೀ ಸಮಿತಿಯ ಸದಸ್ಯರುಗಳ ಹುದ್ದೆಯ ಅವಧಿ ಮುಕ್ತಾಯವಾಗುವುದಕ್ಕೆ ನಿಕಟಪೂರ್ವದಲ್ಲಿ ನಡೆಸತಕ್ಕದ್ದು: ಪರಂತು, ಸಾಮಾಜಿಕ ನ್ಯಾಯ ಸಮಿತಿಯು ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯಳನ್ನು ಮತ್ತು ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬ ಸದಸ್ಯನನ್ನು ಒಳಗೊಂಡಿರತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 43 ತಿದ್ದುಪಡಿಯಾದ ರೀತಿಯಲ್ಲಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 43 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗು ಖಂಡ 43 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 44 ರಿಂದ 54 ಎರಡೂ ಸೇರಿದಂತೆ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 44ರಿಂದ 54ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತವೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 44ರಿಂದ 54ರವರೆಗೆ ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 55 (ಹೊಸ ಖಂಡ)

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, 54ನೇ ಖಂಡದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು:

''55. 169ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 169ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಸಂಖ್ಯೆ '31'ರ ನಂತರ '31ಎ, 31ಬಿ' ಸಂಖ್ಯೆ ಹಾಗು ಅಕ್ಷರಗಳನ್ನು ಸೇರಿಸತಕ್ಕದ್ದು.''

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, 54ನೇ ಖಂಡದ ನಂತರ...

''55. 169ನೇ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 169ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಸಂಖ್ಯೆ '31'ರ ನಂತರ '31ಎ, 31ಬಿ' ಸಂಖ್ಯೆ ಹಾಗು ಅಕ್ಷರಗಳನ್ನು ಸೇರಿಸತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗು 55ನೇ ಹೊಸ ಖಂಡ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ 56

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''56ನೇ ಖಂಡ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 56 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 57ಕ್ಕೆ ತಿದ್ದುಪಡಿ

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಖಂಡ 57ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ:

''57ನೇ ಖಂಡದ 2ನೇ ಉಪ-ಖಂಡದ ಎರಡನೇ ಪರಂತುಕದಲ್ಲಿ 'ಒಂದು ವರ್ಷದೊಳಗೆ' ಎಂಬ ಪದಗಳಿಗೆ 'ಆರು ತಿಂಗಳೊಳಗೆ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.''

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''57ನೇ ಖಂಡದ 2ನೇ ಉಪ-ಖಂಡದ ಎರಡನೇ ಪರಂತುಕದಲ್ಲಿ 'ಒಂದು ವರ್ಷದೊಳಗೆ' ಎಂಬ ಪದಗಳಿಗೆ 'ಆರು ತಿಂಗಳೊಳಗೆ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 57 ತಿದ್ದುಪಡಿಯಾದ ರೀತಿಯಲ್ಲಿ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 57 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗು ಖಂಡ 57 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 58 ಮತ್ತು 59 ಎರಡೂ ಸೇರಿದಂತೆ:

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 58 ಮತ್ತು 59 ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತವೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 58 ಮತ್ತು 59 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಶ್ರೀ ಎಂ.ಪಿ.ಪ್ರಕಾಶ್: ಪ್ರತಿಯೊಂದು ಸ್ಥಾಯಿ ಸಮಿತಿ ಜಿಲ್ಲಾ ಪಂಚಾಯಾತ್‌ಗೆ ನಿರ್ದಿಷ್ಟಪಡಿಸಿದಂಥ ಜಿಲ್ಲಾ ಪಂಚಾಯತ್ ಸದಸ್ಯರು ಚುನಾಯಿತ ಸದಸ್ಯರ ಪೈಕಿಯಿಂದ ಚುನಾಯಿಸಿದ ಅಧ್ಯಕ್ಷರೂ ಸಹ ಏಳನ್ನು ಮೀರದಂಥ ಸಂಖ್ಯೆಯ ಸದಸ್ಯರನ್ನು ಒಳಗೊಂಡಿರತಕ್ಕದ್ದು. ಸ್ಥಾಯಿ ಸಮಿತಿ ಸದಸ್ಯರ ಚುನಾವಣೆಯನ್ನು ಜಿಲ್ಲಾ ಪಂಚಾಯತ್ ಸದಸ್ಯರನ್ನು ಚುನಾಯಿಸಲು ನಡೆಸುವಾಗ ಪ್ರತಿಯೊಂದು ಸಾರ್ವತ್ರಿಕ ಚುನಾವಣೆ ತರುವಾಯ ಅಥವಾ ಈ ಅಧಿನಿಯಮದಡಿ ಅದರ ಪುನರ್ ರಚನೆ ಅಥವಾ ಅದರ ಸ್ಥಾಪನೆಯಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯಿ ಸಮಿತಿ ಸದಸ್ಯರ ಹುದ್ದೆಯ ಅವಧಿ ಮುಗಿಯುವುದಕ್ಕಿಂತ ನಿಕಟ ಪೂರ್ವದಲ್ಲಿ ನಡೆಸತಕ್ಕದ್ದು. ಪರಂತು, ಸಾಮಾಜಿಕ ನ್ಯಾಯ ಸಮಿತಿಯ ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯರನ್ನು ಮತ್ತು

ಅನುಸೂಚಿತ ಜಾತಿಗೆ ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ಒಬ್ಬ ಸದಸ್ಯರನ್ನು ಒಳಗೊಂಡಿರತಕ್ಕದ್ದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಹೇಳಿದ್ದೇನೆ. Contrary to this Rule suppose if you send the circular, how can it be followed? ಯಾವಾಗ ಅಂದರೆ, ಈ ಸೆಕ್ಷನ್ ಇಟ್ಟುಕೊಂಡು ನಾವು ಹಿಂದೆ ಏನೋ ಒಪ್ಪಿಕೊಂಡಿದ್ದು ಲೆಟ್ರಿನ್ ಕಟ್ಟಿಸಕೊಡುತ್ತೀರೆಂದು, ಎಕ್ಸಿಕ್ಯುಟಿವ್ ಆರ್ಡರ್ ಆಗಬಹುದು.... ಆದರೂ ಕೂಡ, ಡಿಸ್‌ಕ್ವಾಲಿಫಿಕೇಷನ್ ಉಳಿದೇ ಉಳಿಯುತ್ತದೆ.

ಶ್ರೀ ಎಂ.ಪಿ.ಪ್ರಕಾಶ್: ತಾವು ಹೇಳಿದ ಹಾಗೆ, ಆಕಸ್ಮಾತ್ ಕಾನೂನಿನ ಕೆಳಗೆ ಈ ರೀತಿಯ ನಿಯಮಕ್ಕೆ ವಿರುದ್ಧವಾದ ನಿಯಮ ರಚಿಸುವುದಕ್ಕೆ ಆಗುವುದಿಲ್ಲವೆಂದರೆ ನಾನು ಪರೀಕ್ಷಿಸುತ್ತೇನೆ. ಅದನ್ನು ನೋಡಿ ಮುಂದೆ ಸರಿಪಡಿಸುತ್ತೇವೆ. ಅದಕ್ಕೆ ಮುಂದಿನ ಶಬ್ದಗಳನ್ನು ಹಾಕಬೇಕಾಗುತ್ತದೆ. ಆಯಾಯ ಜನಸಂಖ್ಯೆಯ ಅನುಪಾತಕ್ಕೆ ಅನುಗುಣವಾಗಿ ಎಂಬ ಶಬ್ದವನ್ನು ಹಾಕಬೇಕಾಗುತ್ತದೆ. ಪರಂತು, ಸಾಮಾಜಿಕವಾಗಿ ನ್ಯಾಯ ಸಮಿತಿ ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯರನ್ನು ಮತ್ತು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಕ್ಕೆ ಆಯಾಯ ಜನಸಂಖ್ಯೆಯ ಅನುಪಾತಕ್ಕೆನುಗುಣವಾಗಿ ಸೇರಿದ ಒಬ್ಬ ಸದಸ್ಯರನ್ನು ಒಳಗೊಂಡಿರತಕ್ಕದ್ದು. SC or ST proportionate to their population. ಆರ್ ಎನ್ನಬೇಕಾಗುತ್ತದೆ. ಆರ್ ಎಂದರೆ ಅಥವಾನೇ.

ಖಂಡ 60ಕ್ಕೆ ತಿದ್ದುಪಡಿ

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಖಂಡ 60 (1)ನೇ ಉಪ ಖಂಡಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ:

''(1) ಮತ್ತು (2)ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,

''(2) ಪ್ರತಿಯೊಂದು ಸ್ಥಾಯೀ ಸಮಿತಿಯು, ಜಿಲ್ಲಾ ಪಂಚಾಯಿತಿಯು ನಿರ್ದಿಷ್ಟಪಡಿಸಿದಂತೆ ಜಿಲ್ಲಾ ಪಂಚಾಯಿತಿಯ ಸದಸ್ಯರುಗಳು ಚುನಾಯಿತ ಸದಸ್ಯರುಗಳ ಪೈಕಿಯಿಂದ ಚುನಾಯಿಸಿದ ಅಧ್ಯಕ್ಷನು ಸೇರಿ ಏಳನ್ನು ಮೀರದಂಥ ಸಂಖ್ಯೆಯ ಸದಸ್ಯರು ಜಿಲ್ಲಾ ಪಂಚಾಯಿತಿಯ ಸದಸ್ಯರನ್ನು ಚುನಾಯಿಸಲು ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿ-ನಿಯಮದಡಿ ಅದರ ಪುನರ್ ರಚನೆ ಅಥವಾ ಸ್ಥಾಪನೆಯಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯೀ ಸಮಿತಿಯ ಸದಸ್ಯರುಗಳ ಹುದ್ದೆಯ ಅವಧಿ ಮುಕ್ತಾವಾಗುವುದಕ್ಕೆ ನಿಕಟಪೂರ್ವದಲ್ಲಿ ನಡೆಸತಕ್ಕದ್ದು.

ಪರಂತು, ಸಾಮಾಜಿಕ ನ್ಯಾಯ ಸಮಿತಿಯು ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯರನ್ನು ಮತ್ತು ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಆಯಾಯ ಜನಸಂಖ್ಯೆಯ ಅನುಪಾತಕ್ಕನುಗುಣವಾಗಿ ಒಬ್ಬ ಸದಸ್ಯನನ್ನು ಒಳಗೊಂಡಿರತಕ್ಕದ್ದು.''

ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''(1) (2)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ,

''(2) ಪ್ರತಿಯೊಂದು ಸ್ಥಾಯೀ ಸಮಿತಿಯು, ಜಿಲ್ಲಾ ಪಂಚಾಯಿತಿಯು ನಿರ್ದಿಷ್ಟಪಡಿಸಿದಂತೆ ಜಿಲ್ಲಾ ಪಂಚಾಯಿತಿಯ ಸದಸ್ಯರುಗಳು ಚುನಾಯಿತ ಸದಸ್ಯರುಗಳ ಪೈಕಿಯಿಂದ ಚುನಾಯಿಸಿದ ಅಧ್ಯಕ್ಷರು ಸೇರಿ ಏಳನ್ನು ಮೀರದಂಥ ಸಂಖ್ಯೆಯ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು. ಸ್ಥಾಯೀ ಸಮಿತಿಯ ಸದಸ್ಯರ ಚುನಾವಣೆಯನ್ನು ಜಿಲ್ಲಾ ಪಂಚಾಯಿತಿಯ ಸದಸ್ಯರನ್ನು ಚುನಾಯಿಸಲು ನಡೆಸಲಾಗುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಅಥವಾ ಈ ಅಧಿನಿಯಮದಡಿ ಅದರ ಪುನರ್ ರಚನೆ ಅಥವಾ ಸ್ಥಾಪನೆಯಾದ ಮೇಲೆ ಸಾಧ್ಯವಾದಷ್ಟು ಬೇಗನೆ ಅಥವಾ ಸ್ಥಾಯೀ ಸಮಿತಿಯ ಸದಸ್ಯರುಗಳ ಹುದ್ದೆಯ ಅವಧಿ ಮುಕ್ತಾಯವಾಗುವುದಕ್ಕೆ ನಿಕಟಪೂರ್ವದಲ್ಲಿ ನಡೆಸತಕ್ಕದ್ದು.

ಪರಂತು, ಸಾಮಾಜಿಕ ನ್ಯಾಯ ಸಮಿತಿಯು ಕಡೆಯ ಪಕ್ಷ ಒಬ್ಬ ಮಹಿಳಾ ಸದಸ್ಯರನ್ನು ಮತ್ತು ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಆಯಾಯ ಜನಸಂಖ್ಯೆಯ ಅನುಪಾತಕ್ಕನುಗುಣವಾಗಿ ಒಬ್ಬ ಸದಸ್ಯನನ್ನು ಒಳಗೊಂಡಿರತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 60 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 60 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 60, ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಲ್ಪಟ್ಟಿತು.

ಖಂಡ 61-82 ರವರೆಗೆ, ಎರಡೂ ಸೇರಿದಂತೆ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಖಂಡ 61 ರಿಂದ 82ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 61 ರಿಂದ 82ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಕಾಯ್ದುಕೊಂಡು ಕುಳಿತಿದ್ದೇನೆ. ಪೇಜ್ 28,73 ಅಮೆಂಡ್‌ಮೆಂಟ್ ಟು ಸೆಕ್ಷನ್ 268.

ಅಧ್ಯಕ್ಷರು: ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: 268. ಅದು ಅಪೀಲು. For the word in the opinion of the commissioner, the word on the recommendation of the taluk panchayat or otherwise, the Zilla Panchayat is of the opinion, that shall be substituted. ಅದನ್ನು ಗೌರ್ನಮೆಂಟ್ ಎಂದು ಮಾಡಿ. Taluka Panchayat will misuse, Sir. you keep it with the Government. 2-3 ಕಡೆ ಇದಾಗಿದೆ.... ನೋಡಿದರೆ, ಗುಲ್ಬರ್ಗ ನೋಡಿದರೆ, ಬೇರೆ ಕಡೆ....

ಶ್ರೀ ಎಂ.ಪಿ.ಪ್ರಕಾಶ್: ನಮ್ಮ ಅಧಿಕಾರ ವಿಕೇಂದ್ರಿಕರಣದ ಪರಿಕಲ್ಪನೆಗೆ ಇದು ವಿರುದ್ಧವಾದುದು.

(ಗೊಂದಲ)

ಶ್ರೀ ಎಂ.ವೈ.ಘೋರ್ಪಡೆ: ನಾನು ಚೆನ್ನಾಗಿ ನೋಡಿದ್ದೇನೆ. ನಿಮ್ಮ ಅಮೆಂಡ್‌ಮೆಂಟ್ ಪ್ರಕಾರ, ಅಧ್ಯಕ್ಷರನ್ನು ತೆಗೆಯುವಾಗ ಗೌರ್ನಮೆಂಟ್ ನೇರವಾಗಿ ಅವರನ್ನು ತೆಗೆಯುತ್ತದೆ.

ಮ ಪಂಚಾಯಿತಿ ಅಧ್ಯಕ್ಷರನ್ನು ನೇರವಾಗಿ ನೀವು ತೆಗೆಯಬಹುದು. ತಾಲ್ಲೂಕು ಪಂಚಾಯಿತಿಯನ್ನು ಕನ್‌ಸಲ್ಟ್ ಮಾಡಬಹುದು ಅಥವಾ ಬಿಡಬಹುದು. ಆದರೆ, ಅಧ್ಯಕ್ಷರನ್ನು ತೆಗೆಯುವ ಅಧಿಕಾರವನ್ನು ನೀವು ಇಟ್ಟುಕೊಂಡಿದ್ದೀರಿ. ಅದಕ್ಕೆ ನಾವು ವಿರೋಧ ಮಾಡುತ್ತಿಲ್ಲ. ಆದರೆ, ಬಾಡಿಯನ್ನೇ ತೆಗೆಯುವ ಅಧಿಕಾರವನ್ನು ನೀವು ಜಿಲ್ಲಾ ಪರಿಷತ್‌ಗೆ ಕೊಟ್ಟಿದ್ದೀರಿ. It is inconsistent. ಯಾವ ತರಹವೆಂದರೆ, ಅದರ ಅಧ್ಯಕ್ಷರನ್ನು ತೆಗೆಯುವ ಅಧಿಕಾರ ನಿಮ್ಮ ಕಡೆ ಇದೆ, ಬಾಡಿಯನ್ನು ತೆಗೆಯುವ ಅಧಿಕಾರ ಅಧ್ಯಕ್ಷರ ಕಡೆ ಇದೆ. ಹಿಂದೆ ಇದರ ಬಗ್ಗೆ ಬಹಳ ಅನ್ಯಾಯ ನಡೆದಿದೆ. ನಾವು ಹೈ ಕೋರ್ಟಿಗೆ ಹೋಗಿ ನಿಲ್ಲಿಸಬೇಕಾಯಿತು. ಆಗ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು ಮತ್ತು ಶ್ರೀ ನಜೀರ್ ಸಾಬ್‌ರವರು ಮಂತ್ರಿಗಳಾಗಿದ್ದರು. ನೀವು ಕಾಲ ಕೊಡುವುದಾದರೆ ನಾನು ಎರಡು ನಿಮಿಷಗಳಲ್ಲಿ ಓದುತ್ತೇನೆ. ನಾನು ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಕಾಗದ ಬರೆದಿದ್ದೆ. 20th December, 1987. "I am constrained to bring to your notice serious attempts being made by the Bellary Zilla Panchayat to dissolve the Sandur Interim Mandal Panchayat which was a Town Municipality till January 1986, which has an excellent record of democratic progressive functioning and social service. The Bellary Zilla Parishad has recently issued a show-cause notice to Sandur Interim Mandal Panchayat for disolving it. You will kindly appreciate that the harmony, peace and progress of Sandur should not be interfered in this manner." ಇದೇ ಧಾಟಿಯಲ್ಲಿ ಶ್ರೀ ನಜೀರ್ ಸಾಬ್‌ರವರಿಗೂ ಪತ್ರ ಬರೆದೆ. He was very sympathetic. ಅದು ಆಗಲಿಕ್ಕೆ ಸಾಧ್ಯ. ಯಾವಾಗಲೂ ಅಧ್ಯಕ್ಷರನ್ನು ತೆಗೆಯುವ ಅಧಿಕಾರವನ್ನು ಇಟ್ಟುಕೊಂಡ ಮೇಲೆ ಅದನ್ನು ನೀಮ್ಮ ಕಡೆ ಇಟ್ಟುಕೊಳ್ಳಿ. ಇಂಟರ್ನಲ್ ಕಾಂಟ್ರಡಿಕ್ಷನ್ ಆಕ್ಟ್‌ನಲ್ಲಿ ಬರುತ್ತದೆ. The body which is a bigger thing you want to hand it over to the Zilla Panchayat, it is inconsistent even structurally.

ಶ್ರೀ ಎಂ.ಪಿ.ಪ್ರಕಾಶ್: ಇದರಲ್ಲಿ ಯಾವ ತರಹದ ಇನ್‌ಕನ್‌ಸಿಸ್ಟೆನ್ಸಿ ಇಲ್ಲ. ಈ ಅಧ್ಯಕ್ಷ, ಕೆಲವು ಸಂದರ್ಭಗಳಲ್ಲಿ ಮಾಡಿರತಕ್ಕದ್ದರಲ್ಲಿ ಸರ್ಕಾರ ಅಧಿಕಾರವನ್ನು ಇಟ್ಟುಕೊಂಡಿರುವುದು. ಇಡೀ ಒಂದು ಬಾಡಿಯನ್ನು ತೆಗೆಯುವಂಥಾದ್ದು. ಇಡೀ ಚುನಾಯಿತವಾಗಿರತಕ್ಕ ಬಾಡಿಯನ್ನು ತೆಗೆಯುವಾಗ ಇದು ಒಂದು ಆಡಳಿತ ಪಕ್ಷ ಇರತಕ್ಕ ಸರ್ಕಾರ ಇದನ್ನು ದುರುಪಯೋಗಪಡಿಸಿಕೊಳ್ಳಬಹುದು ಎನ್ನುವ ಭಾವನೆಗಳ ಹಿನ್ನೆಲೆಯಲ್ಲಿ ಜಿಲ್ಲಾ ಪರಿಷತ್‌ಗೆ ನಮ್ಮಷ್ಟೇ ವಿವೇಕ, ತಿಳುವಳಿಕೆ ಇರುತ್ತದೆ, ಆಗ ಅವರು

ತಮ್ಮದೇ ಆದ ನಿರ್ಣಾಯಗಳನ್ನು ತೆಗೆದುಕೊಳ್ಳುತ್ತಾರೆ. ಆದುದರಿಂದ, ಒಂದು ಸರ್ಕಾರ ತೆಗೆದುಕೊಳ್ಳುವುದಕ್ಕಿಂತ ಹೆಚ್ಚಾಗಿ ಅಲ್ಲಿ ಸ್ಥಳೀಯವಾಗಿರತಕ್ಕ ಜಿಲ್ಲಾ ಪಂಚಾಯತ್, ಆ ನಿರ್ಣಾಯವನ್ನು ತೆಗೆದುಕೊಳ್ಳಬಹುದು ಎಂದು ಮಾಡಿದ್ದೇವೆಯೇ ವಿನಾಃ ಅದು ಇನ್‌ಕನ್‌ಸಿಸ್ಟನ್ಸಿ ಇಲ್ಲ. ನಮ್ಮಲ್ಲಿರತಕ್ಕ ನಮ್ಮ ಪರಿಣಿತ ಸಮಿತಿ ಇರತಕ್ಕ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬಾಡಿಯನ್ನು ಡಿಸಾಲ್ವ್ ಮಾಡತಕ್ಕ ಅಧಿಕಾರವನ್ನು ತಾಲ್ಲೂಕು ಪಂಚಾಯಿತಿಗೆ ಕೊಡುತ್ತೀರಿ. ಒಬ್ಬ ಅಧ್ಯಕ್ಷರನ್ನು ತೆಗೆಯುವುದಕ್ಕೆ ಸರ್ಕಾರಕ್ಕೆ ಅಧಿಕಾರ ಕೊಡುತ್ತೀರಿ. ಹೇಗೆ?

ಶ್ರೀ ಎಂ.ಪಿ.ಪ್ರಕಾಶ್: ಕಾಂಗ್ರೆಸ್‌ನವರ ಯೋಚನಾ ಲಹರಿಯೇ ಬೇರೆ, ನಮ್ಮ, ಜನತಾದಳದವರ ಯೋಚನಾ ಲಹರಿಯೇ ಬೇರೆ ಇರುತ್ತದೆ. ವ್ಯತ್ಯಾಸ ಇಷ್ಟೆ, ನಾವು ಹೆಚ್ಚು ಅಧಿಕಾರವನ್ನು...

ಮಾನ್ಯ ಸದಸ್ಯರು: ನಾಳೆ ನಮ್ಮ ಸರ್ಕಾರ ಬರಬಹುದು. ಆವಾಗಲೂ...

ಶ್ರೀ ಎಂ.ಪಿ.ಪ್ರಕಾಶ್: ನಾವು ಅಧಿಕಾರವನ್ನು ಹೆಚ್ಚು ವಿಕೇಂದ್ರಿಕರಿಸಬೇಕು ಎಂದು ನಂಬಿದ್ದೇವೆ. ಅದು ಯಾವುದೇ ರೂಪದಲ್ಲಿ ಒಂದು ಸರ್ಕಾರದ ಕೈಯ್ಯಲ್ಲಿರಬಾರದು. ಈಗ ಇಲ್ಲಿಯವರೆಗೆ ಇರತಕ್ಕ ಅನೇಕ ಟೀಕೆ-ಟಿಪ್ಪಣಿಗಳೇನೆಂದರೆ, ಸರ್ಕಾರವೇ ಎಲ್ಲಾ ನಿರ್ದೇಶನಗಳನ್ನು ಮಾಡತಕ್ಕದ್ದು ಸರಿಯಲ್ಲ, ಸರ್ಕಾರವೇ ಇಂಥ ವಿಚಾರಗಳಲ್ಲಿ ಪ್ರವೇಶ ಮಾಡತಕ್ಕದ್ದು ಸರಿಯಾದುದಲ್ಲ. ಇಂಥವೇನಾದರೂ ನಿರ್ಣಾಯಗಳನ್ನು ನಾವು ತೆಗೆದುಕೊಂಡರೆ ಮುಂದೆ ಅನೇಕ ಸಂದರ್ಭಗಳಲ್ಲಿ ನಮ್ಮ ವಿಧಾನ ಸಭೆಯನ್ನು ವಿಸರ್ಜನೆ ಮಾಡುವ ಅಧಿಕಾರದ ವಿಚಾರದಲ್ಲಿ ಕೂಡ ಸರ್ಕಾರಕ್ಕೆ ಒಂದು ಮಾರ್ಗಸೂಚನೆಯಾದರೂ ಆಗಬಹುದು. ಏಕೆಂದರೆ, ಈಗ ನಾವು ನೋಡುತ್ತಿದ್ದೇವೆ, ರಾಷ್ಟ್ರಪತಿ ಆಳ್ವಿಕೆ ಇರುವಂಥಾದ್ದು, ಯಾವುದೋ ಕಾರಣಗಳ ಮೂಲಕ ವಿಸರ್ಜನೆ ಮಾಡತಕ್ಕದ್ದು. ಈ ರೀತಿಯಿಂದ ಏನಿರುತ್ತದೆ, ಅದರಿಂದ ಅವರಿಗೆ ಮಾರ್ಗದರ್ಶನ ಆಗಬಹುದೆಂದು ಭಾವಿಸುತ್ತೇವೆ. ಯಾವ ಇನ್‌ಕನ್‌ಸಿಸ್ಟನ್ಸಿ ಅಲ್ಲ. ದಯಮಾಡಿ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ: ಅಧ್ಯಕ್ಷರನ್ನು ತೆಗಯುವ ಅಧಿಕಾರ ಸರ್ಕಾರಕ್ಕೆ ಇದ್ದರೆ, ಬಾಡಿಯನ್ನು ತೆಗೆಯುವ ಅಧಿಕಾರ ಜಿಲ್ಲಾ ಪರಿಷತ್‌ಗೆ ಹೇಗೆ ಕೊಡಲಿಕ್ಕೆ ಆಗುತ್ತದೆ? ಅದರಲ್ಲಿ...

ಶ್ರೀ ಎಂ.ಪಿ.ಪ್ರಕಾಶ್: ಅಧ್ಯಕ್ಷರನ್ನು ತೆಗೆಯುವ ಅಧಿಕಾರವನ್ನೂ ಬಾಡಿಗೇ ಬಿಡುತ್ತೇವೆ. It is not vice versa. We are prepared to see that power is also given to the Zilla Panchayat. We will give that power to the Zilla Panchayat.

ಶ್ರೀ ಎಂ.ವೈ.ಘೋರ್ಪಡೆ: ಜಿಲ್ಲಾ ಪಂಚಾಯಿತಿಗೆ ಕೊಟ್ಟರೆ ಟೆಕ್ನಿಕಲ್ ಇನ್‌ಕನ್‌ಸ್ಟಿಸ್ಟೆನ್ಸಿ ಹೋಗಲಾಡಿಸಿದಂತಾಗುತ್ತದೆ. But appeal to the Government is very important. This is a very serious matter.

ಶ್ರೀ ಎಂ.ಪಿ.ಪ್ರಕಾಶ್: ಅಪೀಲ್‌ಗೆ ಅವಕಾಶ ಕೊಡುವುದು, ಅದನ್ನು ನೋಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೋಡೋಣ ಅಲ್ಲ.

ಶ್ರೀ ಎಂ.ಪಿ.ಪ್ರಕಾಶ್: ನೋಡಿ, ನಾವು ಕಾನೂನು ತಂದಮೇಲೆ ಯಾವುದನ್ನು ಪುನರ್ ವಿಮರ್ಶೆ ಮಾಡುವುದಕ್ಕಾಗುತ್ತದೆ? ಈಗ ಹೇಳಿದಂತೆ ಅಧ್ಯಕ್ಷರನ್ನು ತೆಗೆದುಹಾಕುವ ಅಧಿಕಾರ ಸರ್ಕಾರಕ್ಕೆ ಇಟ್ಟುಕೊಂಡಿದ್ದೇವೆ. ಅದನ್ನು ಜಿಲ್ಲಾ ಪಂಚಾಯಿತಿಗೆ ಕೊಡುವುದಕ್ಕೆ ನಾವು ತಯಾರಿದ್ದೇವೆ. There can't be any inconsistency at all.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಪೀಲ್‌ಗೆ ಮಾಡಿ.

ಅಧ್ಯಕ್ಷರು: ಪ್ರಕಾಶ್ ಅವರೇ, ಅವರು ಏನು ಹೇಳುತ್ತಾರೆಂದರೆ you are anyway giving the authority to remove the President which hither-to vested in the Government, to Zilla Panchayat. Supposing the Zilla Panchayat acts erroneously while passing its judgment. ಅದಕ್ಕೆ ಪ್ರಾವಿಷನ್ ಇರಬೇಕು ಎಂದು ಹೇಳುತ್ತಾರೆ.

ಶ್ರೀ ಎಂ.ಪಿ.ಪ್ರಕಾಶ್: ಆಗಬಹುದು. ನಾನು ಅದನ್ನು ಆಗಲೇ ಹೇಳಿದೆ. ಅಪೀಲಬಲ್ ಪ್ರಾವಿಷನ್ ಕೂಡ ತರುತ್ತೇವೆ ಅದಕ್ಕೆ.

MR. SPEAKER: He is giving an assurance. ಚರ್ಚೆ ಇಲ್ಲಿಗೆ ಸಾಕು.

ಅನುಮೋದನಾ ಪ್ರಸ್ತಾವ

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ,

''1997ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (3ನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''1997ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ (3ನೇ ತಿದ್ದುಪಡಿ) ವಿಧೇಯಕವನ್ನು, ತಿದ್ದುಪಡಿಯಾದರೀತಿಯಲ್ಲಿ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು.

(8) ಪ್ರಕಟಣೆಗಳು:

ಅಧ್ಯಕ್ಷರು: (i) ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನಪರಿಷತ್ತು ದಿನಾಂಕ 11ನೇ ಸೆಪ್ಟೆಂಬರ್ 1997ರಂದು ಈ ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1) ಕೂಡಲಸಂಗಮ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ 1996

2) ಕರ್ನಾಟಕ ಸ್ಟಾಂಪ್ (ಎರಡನೇ ತಿದ್ದುಪಡಿ) ವಿಧೇಯಕ 1997

3) ಮಾನವ ನೇತ್ರಗಳ ಚಿಕಿತ್ಸೆ ಮತ್ತು ಸಂಶೋಧನಾ ಉದ್ದೇಶಗಳಿಗೆ ಬಳಸಿಕೊಳ್ಳುವುದಕ್ಕೆ ಅಧಿಕಾರ ನೀಡುವುದು ಮತ್ತು ಇತರ ಕಾನೂನುಗಳ ನಿರಸನ ಕರ್ನಾಟಕ ವಿಧೇಯಕ 1996

(ii) ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 120ರ ಮೇರೆಗೆ ವಿಧಾನಪರಿಷತ್ತು 11ನೇ ಸೆಪ್ಟೆಂಬರ್ 1997ರಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ 1997ನ್ನು ತಿರಸ್ಕರಿಸಲಾಯಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

ಅಧ್ಯಕ್ಷರು: ಈಗ ಸದನವನ್ನು ಮುಂದೂಡಲಾಗಿದೆ. ಪುನಃ ನಾಳೆ ಬೆಳಗ್ಗೆ 10 ಗಂಟೆಗೆ ಸಭೆ ಸಮಾವೇಶಗೊಳ್ಳುತ್ತದೆ.

(ರಾತ್ರಿ 8 ಗಂಟೆ 05 ನಿಮಿಷಕ್ಕೆ ಸದನವು ಮುಂದೂಡಲ್ಪಟ್ಟು 12-9-1997ರಂದು ಬೆಳಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣಗಳನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)